ಗುರುವಾರ, ಏಪ್ರಿಲ್ 2, 2026| ₹ 7.00
prajavani.net prajavani
www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಮನೆಯತ್ತ ಮತಗಟ್ಟೆ**

ಹಿರಿಯ ನಾಗರಿಕರಿಗೆ ಮನೆಯಿಂದ ಮತದಾನಕ್ಕೆ ವ್ಯವಸ್ಥೆ ಮಾಡಲು ಅಸ್ಸಾಂನ ಮೊರಿಗಾಂವ್ ಜಿಲ್ಲೆಯ ಗ್ರಾಮವೊಂದಕ್ಕೆ ಚುನಾವಣಾ ಅಧಿಕಾರಿಗಳು ಬುಧವಾರ ಭೇಟಿ ನೀಡಿದರು

**ಗೋಧಿ ಕೊಯ್ಲು**

ಹರಿಯಾಣದ ಲೊಹರುದಲ್ಲಿ, ಕಟಾವು ಮಾಡಿದ ಗೋಧಿ ಪೈರನ್ನು ಮಹಿಳೆಯೊಬ್ಬರು ಒಟ್ಟುಗೂಡಿಸಿ, ಕೊಂಡೊಯ್ದರು

# ಸಿದ್ಧಗಂಗೆಯಲ್ಲಿ ‘ಅನ್ನ, ಕರುಣೆ, ಶಿಕ್ಷಣ ಗಂಗೆ’

## ಶಿವಕುಮಾರ ಸ್ವಾಮೀಜಿ 119ನೇ ಜಯಂತಿ, ಗುರುವಂದನೆಯಲ್ಲಿ ರಾಷ್ಟ್ರಪತಿ ಶ್ಲಾಘನೆ

ಪ್ರಜಾವಾಣಿ ವಾರ್ತೆ

**ತುಮಕೂರು:** ಸಿದ್ಧಗಂಗಾ ಮಠದಲ್ಲಿ ‘ಅನ್ನ ಗಂಗಾ, ಕರುಣಾ ಗಂಗಾ, ಶಿಕ್ಷಣ ಗಂಗಾ’ ಹರಿಯುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಬುಧವಾರ ಇಲ್ಲಿ ಪ್ರಶಂಸಿಸಿದರು.

ನಗರದ ಸಿದ್ಧಗಂಗಾ ಮಠದಲ್ಲಿ ಹಮ್ಮಿಕೊಂಡಿದ್ದ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತಿ ಹಾಗೂ ಗುರುವಂದನಾ ಮಹೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಶಿವಕುಮಾರ ಸ್ವಾಮೀಜಿ ಸಹಸ್ರಾರು ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡಿ ಜೀವನದ ಮಾರ್ಗ ತೋರಿಸಿದ್ದಾರೆ. ಬಡವರು, ದೀನದಲಿತರ ಸೇವೆ ಮಾಡಿದ್ದಾರೆ. ಆಧ್ಯಾತ್ಮಿಕ ಸೇವೆಗೈದಿದ್ದಾರೆ ಎಂದರು.

‘ಸ್ವಾಮೀಜಿ ಇಂದು ನಮ್ಮೊಂದಿಗೆ ದೈಹಿಕವಾಗಿ ಇಲ್ಲವಾದರೂ ಅವರ ಸಾಧನೆ ಜನಮಾನಸದಲ್ಲಿ ಉಳಿದಿದೆ. ಸೇವೆ, ಆಧ್ಯಾತ್ಮಿಕ ಪರಂಪರೆಗೆ ಶಿವಕುಮಾರ ಸ್ವಾಮೀಜಿ ಮತ್ತು ತುಮಕೂರಿನ ಮಠ ಹೆಗ್ಗುರುತಾಗಿದೆ. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಮಠ ಮುಂಚೂಣಿಯಲ್ಲಿ ಇದೆ’ ಎಂದು ಶ್ಲಾಘಿಸಿದರು.

ಸೇವೆ, ಅಧ್ಯಾತ್ಮ, ಪ್ರಗತಿ ಒಟ್ಟಾಗಿ ಸಾಗಿದರೆ ಪ್ರಭಾವಶಾಲಿ ರಾಷ್ಟ್ರ ನಿರ್ಮಾಣ ಸಾಧ್ಯ. ಕರ್ನಾಟಕದಲ್ಲಿ ಅಂತಹ ಪ್ರಯತ್ನಗಳು ಮುಂದುವರಿದಿವೆ. ರಾಷ್ಟ್ರ ನಿರ್ಮಾಣದಲ್ಲಿ ಕರ್ನಾಟಕ ಹಾಗೂ ಇಲ್ಲಿನ ಜನರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ರಾಜ್ಯದ ಪ್ರಗತಿಯನ್ನು ಕೊಂಡಾಡಿದರು.

ಎಲ್ಲರೂ ರಾಷ್ಟ್ರ ನಿರ್ಮಾಣ, ಪರೋಪಕಾರ, ಕರ್ತವ್ಯ ನಿಷ್ಠೆಯ ಹಾದಿಯಲ್ಲಿ ಸಾಗುವ ಮೂಲಕ ಶಿವಕುಮಾರ ಸ್ವಾಮೀಜಿಗೆ ಗೌರವ ಸಲ್ಲಿಸಬೇಕು ಎಂದು ದ್ರೌಪದಿ ಮುರ್ಮು ಸಲಹೆ ಮಾಡಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಿದ್ಧಲಿಂಗ ಸ್ವಾಮೀಜಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಸಚಿವರಾದ ಜಿ.ಪರಮೇಶ್ವರ, ಎಂ.ಬಿ.ಪಾಟೀಲ, ಲಕ್ಷ್ಮಿ ಹೆಬ್ಬಾಳಕರ ಉಪಸ್ಥಿತರಿದ್ದರು.

ತುಮಕೂರು ಸಿದ್ಧಗಂಗಾ ಮಠದಲ್ಲಿ ಬುಧವಾರ ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪೂಜೆ ಸಲ್ಲಿಸಿದರು. ಸಿದ್ಧಲಿಂಗ ಸ್ವಾಮೀಜಿ ಭಾಗವಹಿಸಿದ್ದರು

### ಕುವೆಂಪು ಸ್ಮರಿಸಿದ ರಾಷ್ಟ್ರಪತಿ

ಕರ್ನಾಟಕ, ಕನ್ನಡ ಸಾಹಿತ್ಯವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಶ್ಲಾಘಿಸಿದರು. ಕುವೆಂಪು ಅವರನ್ನು ನೆನಪು ಮಾಡಿಕೊಂಡರು. ಅವರು ರಚಿಸಿರುವ ‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’... ಸಾಲುಗಳನ್ನು ಉಲ್ಲೇಖಿಸಿದರು.

ಕುವೆಂಪು ಅವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅವರು ರಚಿಸಿದ ಗೀತೆ ಕರ್ನಾಟಕವನ್ನು ಭಾರತ ಮಾತೆಯ ಮಗಳಾಗಿ ಚಿತ್ರಿಸಿದೆ. ಜಯ ಭಾರತ... ಗೀತೆ ದೇಶವಾಸಿಗಳ ಹೃದಯಗಳಲ್ಲಿ ರಾಷ್ಟ್ರೀಯ ಏಕತೆಯ ಭಾವನೆ ಜಾಗೃತಗೊಳಿಸಿದೆ. ಕರ್ನಾಟಕದ ಬಗ್ಗೆ ಹೆಮ್ಮೆಯ ಭಾವನೆ ಮೂಡಿಸಿದೆ ಎಂದು ಹೇಳಿದರು.

ಶಿವಕುಮಾರ ಸ್ವಾಮೀಜಿ ಸ್ಮರಿಸುವ ಸಮಯದಲ್ಲಿ ‘ಕರ್ನಾಟಕ ಮಾತೆ’ ಹಾಗೂ ‘ಭಾರತ ಮಾತೆ’ಯ ವೈಭವ ಹೆಚ್ಚಿಸುವ ಸಂಕಲ್ಪ ಮಾಡಬೇಕು ಎಂದೂ ಸಲಹೆ ಮಾಡಿದರು.

## ‘ಕೆಎಸ್ಐಸಿ ಮುಚ್ಚಲು ಚಕ್ರವ್ಯೂಹ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಟಿ.ನರಸೀಪುರದಲ್ಲಿರುವ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮವನ್ನು (ಕೆಎಸ್ಐಸಿ) ಹಂತ–ಹಂತವಾಗಿ ಮುಚ್ಚಲು ಸರ್ಕಾರ ಒಂದು ‘ಚಕ್ರವ್ಯೂಹ’ ರಚಿಸಿದಂತೆ ಕಾಣುತ್ತಿದೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

ಆರ್. ಅಶೋಕ

‘ಸಂಸ್ಥೆಗೆ ಸೇರಿದ ಭೂಮಿಯಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವವನ್ನು ಕೈಬಿಡಲಾಗುವುದು ಎಂದು ರೇಷ್ಮೆ ಸಚಿವರು ವಿಧಾನಸಭೆಯಲ್ಲಿ ಘೋಷಿಸಿದ್ದರು. ಆದರೆ, ಈ ಘೋಷಣೆ ಬೆನ್ನಲ್ಲೇ ಸರ್ಕಾರದ ನಡೆ ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಸಚಿವರು ಸದನದಲ್ಲಿ ಭರವಸೆ ನೀಡಿದ ಮರುದಿನವೇ ವರುಣಾ ಕ್ಷೇತ್ರದ ಪ್ರಭಾವಿ ನಾಯಕರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ನೀಡಿ, ಕೆಎಸ್ಐಸಿ ಘಟಕವು ಪರಿಸರ ನಿಯಮಗಳನ್ನು ಉಲ್ಲಂಘಿಸುತ್ತಿದೆ ಎಂದು ಆರೋಪ ಮಾಡಿದ್ದಾರೆ. ಕ್ರೀಡಾಂಗಣ ಯೋಜನೆ ಕೈಬಿಡುವುದಾಗಿ ಸದನದಲ್ಲಿ ಹೇಳಿದ್ದರೂ, ಆ ಭೂಮಿಯನ್ನು ಕ್ರೀಡಾ ಇಲಾಖೆಯಿಂದ ಮತ್ತೆ ಕೆಎಸ್ಐಸಿಗೆ ವಾಪಸ್ ನೀಡುವ ಅಧಿಕೃತ ಆದೇಶ ಹೊರಡಿಸಲು ವಿಳಂಬ ಮಾಡುತ್ತಿದೆ’ ಎಂದು ಹೇಳಿದ್ದಾರೆ.

‘ಇನ್ನೊಂದೆಡೆ, ತ್ಯಾಜ್ಯ ಸಂಸ್ಕರಣಾ ಘಟಕ (ಇಟಿಪಿ) ಇಲ್ಲ ಎಂಬ ಕಾರಣ ನೀಡಿ ಕಾರ್ಖಾನೆಯನ್ನು ಮುಚ್ಚುವಂತೆ ನೋಟಿಸ್ ಕೊಡಿಸಲಾಗುತ್ತಿದೆ. ಮೊದಲು ಜಾಗ ಕಿತ್ತುಕೊಳ್ಳುವುದು, ನಂತರ ಆ ಜಾಗ ಸಿಗದ ಕಾರಣಕ್ಕೆ ನಿಯಮ ಉಲ್ಲಂಘನೆ ನೆಪ ಹೂಡಿ ಕಾರ್ಖಾನೆ ಬೀಗ ಜಡಿಯುವುದು. ಇದು ಆಡಳಿತವೋ ಅಥವಾ ಭೂಮಾಫಿಯಾದ ಪರವಾದ ಸಂಚೋ’ ಎಂದು ಅಶೋಕ ಅವರು ಪ್ರಶ್ನಿಸಿದ್ದಾರೆ.

### ಕೆ. ಗಂಗಮ್ಮ ಸೇರಿ ಐವರಿಗೆ ‘ಬೋಧಿವರ್ಧನ’ ರಾಜ್ಯ ಪ್ರಶಸ್ತಿ

## ವೀರಮಣಿಗೆ ಬೋಧಿವೃಕ್ಷ ಗೌರವ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿ.ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ ಸ್ಫೂರ್ತಿಧಾಮ ನೀಡುವ ‘ಬೋಧಿವೃಕ್ಷ’ ರಾಷ್ಟ್ರ ಪ್ರಶಸ್ತಿಗೆ ಹೋರಾಟಗಾರ ಕೆ.ವೀರಮಣಿ ಅವರನ್ನು ಆಯ್ಕೆ ಮಾಡಲಾಗಿದೆ.

ತಮಿಳುನಾಡಿನ ವೀರಮಣಿ ಅವರು ಪೆರಿಯಾರ್ ಇ.ವಿ. ರಾಮಸ್ವಾಮಿ ಅವರ ಸಿದ್ಧಾಂತಗಳಿಗೆ ಕಾನೂನಿನ ಶಕ್ತಿ ತುಂಬಿದವರು. ದ್ರಾವಿಡ ಕಳಗಂ ಅಧ್ಯಕ್ಷರಾಗಿದ್ದರು. ತಮಿಳುನಾಡಿನಲ್ಲಿ ಶೇ 69ರಷ್ಟು ಮೀಸಲಾತಿಯನ್ನು ಜಾರಿ ಮಾಡುವುದಕ್ಕಾಗಿ ಈ ಅಂಶವನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಲು ಕಾರಣರಾದವರು. ಮಂಡಲ್ ವರದಿ ಜಾರಿಗಾಗಿ, ದೇವಸ್ಥಾನದಲ್ಲಿ ಎಲ್ಲ ಜಾತಿಯವರು ಅರ್ಚಕರಾಗಬೇಕು ಎಂದು ಹೋರಾಟ ಸಂಘಟಿಸಿದವರು.

‘ಬೋಧಿವರ್ಧನ’ ಹೆಸರಲ್ಲಿ ನೀಡುವ ಐದು ರಾಜ್ಯ ಪ್ರಶಸ್ತಿಗಳಿಗೂ ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಬೀರೂರಿನ ಕೆ. ಗಂಗಮ್ಮ ಅವರು ರಾಜ್ಯ ದಲಿತ ಮಹಿಳಾ ಒಕ್ಕೂಟದ ಮೊದಲ ಸಂಚಾಲಕಿ. ದೌರ್ಜನ್ಯಕ್ಕೆ ಒಳಗಾದವರಿಗೆ ಆಶ್ರಯ ನೀಡುತ್ತಾ ಬಂದಿರುವ ಅವರು ಸರಳ ವಿವಾಹ ಮತ್ತು ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಿದವರು.

ಸರ್ಕಾರಿ ಭೂಮಿಯ ಸಾಗುವಳಿದಾರರಿಗೆ ಹಕ್ಕು ಕೊಡಿಸುವವರೆಗೆ ಹೋರಾಟ ನಡೆಸಿರುವ ಬಸಣ್ಣಾ ಸಿಂಗೆ ಅವರು ಮೌಢ್ಯದ ವಿರುದ್ಧ ವಿಚಾರವಾದಿ ಸಂಘಟನೆಗಳೊಂದಿಗೆ ಜಾಗೃತಿ ಮೂಡಿಸಿದವರು. ಕಲಬುರಗಿ ಜಿಲ್ಲೆಯಲ್ಲಿ ಅಂಬೇಡ್ಕರ್ ಭವನ ನಿರ್ಮಿಸಿ, ಚಳವಳಿಗೆ ಶಾಶ್ವತ ನೆಲಗಟ್ಟು ಒದಗಿಸಿದವರು.

ಕೃಷಿ ವಿಜ್ಞಾನಿ ರಾಮಕೃಷ್ಣಪ್ಪ ಅವರು ತೋಟಗಾರಿಕೆ ಇಲಾಖೆಯಲ್ಲಿ ಅಧಿಕಾರಿಯಾಗಿ ಕೆಲಸ ಮಾಡುತ್ತಲೇ ಅಂಗಾಂಶ ಕೃಷಿ ತಂತ್ರಜ್ಞಾನದಂಥ ನವೀನ ವಿಧಾನಗಳನ್ನು ರಾಜ್ಯಕ್ಕೆ ಪರಿಚಯಿಸಿದವರು.

ಬಾಲ್ಯದಲ್ಲಿ ದೇವದಾಸಿ ಪದ್ಧತಿಯ ಶೋಷಣೆಗೆ ಒಳಗಾಗಿದ್ದ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿ ಕಬ್ಬೂರು ಗ್ರಾಮದ ಸೀತವ್ವ ಜೋಡಟ್ಟಿ ಅವರು ದೇವದಾಸಿ ಪದ್ಧತಿಯಿಂದ ಹೊರಬಂದಿದ್ದರು. ‘ಮಾಸ್’ ಎಂಬ ಸಂಘಟನೆ ಕಟ್ಟಿ ಈ ಅನಿಷ್ಟ ಪದ್ಧತಿಯ ವಿರುದ್ಧ ಜಾಗೃತಿ ಮೂಡಿಸಿ, ನಾಲ್ಕು ಸಾವಿರಕ್ಕೂ ಹೆಚ್ಚಿನ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸಿದವರು. ಅವರಿಗೆ ‘ಪದ್ಮಶ್ರೀ ಪ್ರಶಸ್ತಿಯೂ ಲಭಿಸಿದೆ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ವಿರೂಪಾಪುರ ಗ್ರಾಮದ 70 ವರ್ಷದ ಮರಿಯಮ್ಮ ಬಿಜ್ಜೂರು ನಾಲ್ಕು ದಶಕಗಳಿಂದ ಸೂಲಗಿತ್ತಿಯಾಗಿ ಕೆಲಸ ಮಾಡುತ್ತಾ ಬಂದಿದ್ದು, 300ಕ್ಕೂ ಹೆಚ್ಚು ಹೆರಿಗೆಗಳನ್ನು ಮಾಡಿಸಿದ್ದಾರೆ.

ಬೋಧಿವೃಕ್ಷ ಪ್ರಶಸ್ತಿಯು ₹1 ಲಕ್ಷ ನಗದು ಮತ್ತು ಪ್ರಶಸ್ತಿ ಫಲಕ ಹೊಂದಿದೆ. ಬೋಧಿವರ್ಧನ ಪ್ರಶಸ್ತಿಯು ತಲಾ ₹25 ಸಾವಿರ ನಗದು ಮತ್ತು ಪ್ರಶಸ್ತಿ ಫಲಕವನ್ನು ಹೊಂದಿದೆ. ಏಪ್ರಿಲ್ 13 ಮತ್ತು 14ರಂದು ನಡೆಯಲಿರುವ ಅಂಬೇಡ್ಕರ್ ಹಬ್ಬದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

ಕೆ. ವೀರಮಣಿ

ಕೆ. ಗಂಗಮ್ಮ

ಬಸಣ್ಣಾ ಸಿಂಗೆ

ರಾಮಕೃಷ್ಣಪ್ಪ

ಸೀತವ್ವ ಜೋಡಟ್ಟಿ

ಮರಿಯಮ್ಮ ಬಿಜ್ಜೂರು

## ಸ್ವಯಂ ಗಣತಿ ದಾಖಲಿಸಿದ ಸಿ.ಎಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೇಂದ್ರ ಸರ್ಕಾರವು ‘ಜನಗಣತಿ 2027’ರ ಪ್ರಕ್ರಿಯೆಯಡಿ ಸ್ವಯಂ ಗಣತಿ ವ್ಯವಸ್ಥೆ ಪರಿಚಯಿಸಿದ್ದು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರು ತಮ್ಮ ಮೊಬೈಲ್‌ಗಳ ಮೂಲಕ ಸ್ವಯಂ ಗಣತಿ ದಾಖಲಾತಿ ಪೂರ್ಣಗೊಳಿಸಿದರು.

ಇದೇ 1ರಿಂದ 15ರವರೆಗೆ ಎಲ್ಲಾ ನಾಗರಿಕರು ಅಧಿಕೃತ ಪೋರ್ಟಲ್ se.census.gov.in ಮೂಲಕ ತಮ್ಮ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸಿಕೊಳ್ಳಬೇಕೆಂದು ಶಾಲಿನಿ ಅವರು ಮನವಿ ಮಾಡಿದರು.

ಶಾಲಿನಿ ರಜನೀಶ್

‘ನಮ್ಮ ಜನಗಣತಿ–ನಮ್ಮ ಅಭಿವೃದ್ಧಿ ಎಂಬ ಧ್ಯೇಯ ವಾಕ್ಯದೊಂದಿಗೆ ಜನಗಣತಿ ನಡೆಯಲಿದೆ. ಇದರ ಅಂಗವಾಗಿ ಪರಿಚಯಿಸಿರುವ ಸ್ವಯಂ ಗಣತಿ ವ್ಯವಸ್ಥೆಯು ಸರಳ ಮತ್ತು ಸುರಕ್ಷಿತವಾಗಿದೆ’ ಎಂದರು.

‘ಮೊಬೈಲ್ ಸಂಖ್ಯೆ ಮತ್ತು ಒಟಿಪಿ ಮೂಲಕ ಸುಲಭವಾಗಿ 5ರಿಂದ 10 ನಿಮಿಷಗಳಲ್ಲಿ ಸ್ವಯಂ ಗಣತಿ ಪೂರ್ಣಗೊಳಿಸಬಹುದು. ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ನಿಮ್ಮ ಅರ್ಜಿಯ ಸಂಖ್ಯೆ ದೊರೆಯುವುದು. ಈ ಸಂಖ್ಯೆಯನ್ನು ಏ. 16ರಿಂದ ಮೇ 15ರವರೆಗೆ ಮನೆ ಮನೆಗೆ ಭೇಟಿ ನೀಡುವ ಗಣತಿದಾರರಿಗೆ ನೀಡಿದರೆ ಗಣತಿದಾರರು ಅಲ್ಪ ಸಮಯದಲ್ಲಿ ಗಣತಿ ಪೂರ್ಣಗೊಳಿಸಲು ಹಾಗೂ ಯಾವುದಾದರೂ ತಿದ್ದುಪಡಿ ಇದ್ದರೆ ಮಾಡಿಕೊಳ್ಳಲು ಸಹಾಯಕವಾಗುತ್ತದೆ. ಒಂದು ವೇಳೆ ಮೊಬೈಲ್ ಅಥವಾ ಕಂಪ್ಯೂಟರ್ ಇಲ್ಲದಿದ್ದಲ್ಲಿ ಸಮೀಪದ ಕಂಪ್ಯೂಟರ್ ಕೇಂದ್ರಗಳಿಂದ ಅಥವಾ ಸ್ನೇಹಿತರ ಮೊಬೈಲ್‌ನಿಂದ ಮಾಹಿತಿ ಸಲ್ಲಿಸಿ, ನೋಂದಣಿ ಸಂಖ್ಯೆಯನ್ನು ಪಡೆಯಬೇಕು’ ಎಂದರು.

‘ಜನಗಣತಿ ನಮ್ಮ ರಾಜ್ಯ ಮತ್ತು ದೇಶದ ಭವಿಷ್ಯ ರೂಪಿಸುವ ಮಹತ್ವದ ಕಾರ್ಯ. ಆರೋಗ್ಯ, ಶಿಕ್ಷಣ, ವಸತಿ ಮತ್ತು ಮೂಲ ಸೌಕರ್ಯ ಕ್ಷೇತ್ರಗಳಲ್ಲಿ ಸಮರ್ಪಕ ಸಂಪನ್ಮೂಲ ಹಂಚಿಕೆಗೆ ದಾರಿ ತೋರುತ್ತದೆ. ಪ್ರತಿಯೊಬ್ಬ ನಾಗರಿಕನ ಭಾಗವಹಿಸುವಿಕೆ ಅತ್ಯಂತ ಮುಖ್ಯ. ಇದು ಕೇವಲ ಕರ್ತವ್ಯವಲ್ಲ. ಕರ್ನಾಟಕ ಅಭಿವೃದ್ಧಿಗೆ ಪ್ರತಿಯೊಬ್ಬರ ಕೊಡುಗೆಯಾಗಿದೆ. ಇಂದು ನೀಡುವ ನಿಖರ ಮಾಹಿತಿ, ನಾಳೆಯ ಉತ್ತಮ ನೀತಿಗಳು ಮತ್ತು ಸೇವೆಗಳಿಗೆ ಆಧಾರವಾಗುತ್ತದೆ’ ಎಂದು ಹೇಳಿದ್ದಾರೆ.

## ಲಂಚ: ತಾ.ಪಂ. ನಿವೃತ್ತ ಇಒ, ಎಸ್‌ಡಿಎಗೆ 4 ವರ್ಷ ಜೈಲು

ಪ್ರಜಾವಾಣಿ ವಾರ್ತೆ

**ಕಲಬುರಗಿ:** ಪಿಡಿಒ ಅವರಿಂದ ₹15 ಸಾವಿರ ಲಂಚ ಪಡೆದಿದ್ದ ಪ್ರಕರಣಕ್ಕೆ ಸಂಬಂಧಿಸಿ ಕಲಬುರಗಿ ತಾಲ್ಲೂಕು ಪಂಚಾಯಿತಿ ನಿವೃತ್ತ ಇಒ ಮತ್ತು ಎಸ್‌ಡಿಎಗೆ ಇಲ್ಲಿನ ಜಿಲ್ಲಾ ಕೋರ್ಟ್, ತಲಾ 4 ವರ್ಷ ಸಜೆ, ₹20 ಸಾವಿರ ದಂಡ ವಿಧಿಸಿದೆ.

ತಾಲ್ಲೂಕು ಪಂಚಾಯಿತಿ ನಿವೃತ್ತ ಇಒ ಅಶೋಕ ರೆಡ್ಡಿ ಹಾಗೂ ಎಸ್‌ಡಿಎ ನಿಜಲಿಂಗಪ್ಪ ಪಂಡಿತ್ ಶಿಕ್ಷೆಗೆ ಒಳಗಾದವರು.

ಕಲಬುರಗಿ ತಾಲ್ಲೂಕಿನ ಕಿಣ್ಣಿಸಡಕ ಪಂಚಾಯಿತಿ ಪಿಡಿಒ ಶರಣಗೌಡ ಕವಿತಾಳ ಅವರು ಜೇವರ್ಗಿ ತಾಲ್ಲೂಕಿನ ಹುಲ್ಲೂರ ಪಂಚಾಯಿತಿಗೆ ವರ್ಗಾವಣೆಗೊಂಡಿದ್ದರು. ಇವರು, ಸರ್ವೀಸ್ ಬುಕ್ (ಎಸ್‌ಆರ್), ಕೊನೆಯ ವೇತನ ಪ್ರಮಾಣಪತ್ರ (ಎಲ್‌ಪಿಸಿ)ವನ್ನು ಜೇವರ್ಗಿ ತಾಲ್ಲೂಕು ಪಂಚಾಯಿತಿಗೆ ಕಳುಹಿಸಬೇಕಿತ್ತು. ಇದಕ್ಕಾಗಿ ಕಲಬುರಗಿ ತಾ.ಪಂ ಆಗಿನ ಇಒ ಅಶೋಕ ರೆಡ್ಡಿ ಹಾಗೂ ಎಸ್‌ಡಿಎ ನಿಜಲಿಂಗಪ್ಪ ಅವರು ₹15 ಸಾವಿರ ಲಂಚಕ್ಕೆ ಬೇಡಿಕೆ ಇರಿಸಿದ್ದರು. ಈ ಬಗ್ಗೆ 2019ರ ಮೇ 10ರಂದು ದೂರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಲೋಕಾಯುಕ್ತ ಇನ್‌ಸ್ಪೆಕ್ಟರ್ ಕೆ.ಎಸ್.ಕಲ್ಲದೇವರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಪ್ರಧಾನ ಜಿಲ್ಲಾ ಮತ್ತು ವಿಶೇಷ ಕೋರ್ಟ್‌ನ ನ್ಯಾಯಾಧೀಶ ಜಿ.ಎಲ್.ಲಕ್ಷ್ಮೀನಾರಾಯಣ ಅವರು ಸಜೆ ವಿಧಿಸಿ ಆದೇಶಿಸಿದರು. ವಿಶೇಷ ಸರ್ಕಾರಿ ಅಭಿಯೋಜಕ ಅಶೋಕ ಎಸ್.ಚಾಂದಕವಠೆ ಅವರು ವಾದ ಮಂಡಿಸಿದ್ದರು.

## ವೀಣಾ, ಚನ್ನಬಸವಣ್ಣಗೆ ಪ್ರಶಸ್ತಿ

**ಧಾರವಾಡ:** ಕರ್ನಾಟಕ ವಿದ್ಯಾವರ್ಧಕ ಸಂಘವು ನೀಡುವ ‘ಗುರುಲಿಂಗ ಕಾಪಸೆ ಸಾಹಿತ್ಯ ಪ್ರಶಸ್ತಿ’ಗೆ ಸಾಹಿತಿ ವೀಣಾ ಶಾಂತೇಶ್ವರ, ಬಳ್ಳಾರಿಯ ಲೋಹಿಯಾ ಪ್ರಕಾಶನದ ಪ್ರಕಾಶಕ ಸಿ.ಚನ್ನಬಸವಣ್ಣ ಆಯ್ಕೆಯಾಗಿದ್ದಾರೆ.

ಪುರಸ್ಕಾರ ತಲಾ ₹25 ಸಾವಿರ ನಗದು, ಫಲಕ ಒಳಗೊಂಡಿದೆ. ಏ. 2 ರಂದು ಸಂಜೆ 6ಕ್ಕೆ ಇಲ್ಲಿ ನಡೆಯುವ ಗುರುಲಿಂಗ ಕಾಪಸೆ ಜನ್ಮೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ವೀಣಾ ಶಾಂತೇಶ್ವರ

ಸಿ.ಚನ್ನಬಸವಣ್ಣ

## ಲಂಚ: ಸಿಬ್ಬಂದಿ ಸೆರೆ

**ಹಾಸನ:** ‘ಭಾಗ್ಯಲಕ್ಷ್ಮಿ’ ಬಾಂಡ್ ಮೆಚ್ಯುರಿಟಿಯ ಹಣ ನೀಡಲು ₹1,100 ಲಂಚ ಪಡೆಯುವಾಗ ಜಿಲ್ಲೆಯ ಸಕಲೇಶಪುರದ ಸಿಡಿಪಿಒ ಕಚೇರಿಯ ಸೂಪರ್‌ವೈಸರ್ ಉಮಾದೇವಿ ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದರು.

ಆದರ್ಶ್ ಎಂಬವರು ದೂರು ನೀಡಿದ್ದರು, ಲೋಕಾಯುಕ್ತ ಇನ್‌ಸ್ಪೆಕ್ಟರ್ ಶಿಲ್ಪಾ ನೇತೃತ್ವದ ತಂಡ ದಾಳಿ ನಡೆಸಿತು.

## ಬಸ್ ಪಾಸ್ ಅವಧಿ ವಿಸ್ತರಣೆ

**ಬೆಂಗಳೂರು:** ಶಾಲಾ ವಿದ್ಯಾರ್ಥಿಗಳಿಗೆ ನೀಡಿರುವ ಬಸ್ ಪಾಸ್ ಅವಧಿಯನ್ನು ಏಪ್ರಿಲ್ 10ರವರೆಗೆ ಕೆಎಸ್‌ಆರ್‌ಟಿಸಿ ವಿಸ್ತರಿಸಿದೆ.

‘ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಏ. 10 ರವರೆಗೆ ತರಗತಿಗಳು ಇವೆ. ಪಾಸ್ ಅವಧಿ ಮಾರ್ಚ್ 31ಕ್ಕೆ ಕೊನೆಗೊಂಡಿದೆ. 10 ದಿನ ಹಣ ಪಾವತಿಸಿ, ಬಸ್‌ಗಳಲ್ಲಿ ಸಂಚರಿಸುವುದು ಕಷ್ಟಸಾಧ್ಯ. ಹೀಗಾಗಿ, ಬಸ್ ಪಾಸ್ ಅವಧಿಯನ್ನು ಏಪ್ರಿಲ್ ತಿಂಗಳಿಗೂ ವಿಸ್ತರಿಸಬೇಕು’ ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದರು. ಈ ಬಗ್ಗೆ ಬುಧವಾರ ಪರಿಶೀಲಿಸಿದ ಸಾರಿಗೆ ನಿಗಮವು ಒಂದನೇ ತರಗತಿಯಿಂದ 9ನೇ ತರಗತಿಯವರೆಗಿನ ವಿದ್ಯಾರ್ಥಿಗಳು ಅದೇ ಪಾಸ್ ತೋರಿಸಿ ಹತ್ತು ದಿನ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಎಸ್. ರಾಜೇಶ್ ತಿಳಿಸಿದ್ದಾರೆ.

prajavani.net prajavani
ಗುರುವಾರ, ಏಪ್ರಿಲ್ 2, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 91 | ಪುಟ 14
www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ನಟರಾಜನ್ ನಿಖರ ದಾಳಿ**

ಲಖನೌನಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ವೇಗದ ಬೌಲರ್ ಟಿ. ನಟರಾಜನ್ ಅವರು ಲಖನೌ ಸೂಪರ್ ಜೈಂಟ್ಸ್ ಎದುರು 3 ವಿಕೆಟ್ ಗಳಿಸಿದರು

ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು — ಅನುಭವ ಮಂಟಪ ಇಂದಿನಿಂದ 9
ಕೆಪಿಎಸ್‌ಸಿ ಸ್ವಚ್ಛವಾಗಲಿ

ತಾಳೆಯಾಗದ 1.10 ಕೋಟಿ ಮತದಾರರ ವಿವರ 6 | ಆಟೋಗ್ಯಾಸ್ ದರ ಏರಿಕೆ, ಕಂಗಾಲು 10

# ವಾಣಿಜ್ಯ ಸಿಲಿಂಡರ್ ಮತ್ತೆ ದುಬಾರಿ

## ಯುದ್ಧದ ಪರಿಣಾಮ: ಪ್ರೀಮಿಯಂ ಪೆಟ್ರೋಲ್ – ಡೀಸೆಲ್, ಎಟಿಎಫ್ ದರ ಹೆಚ್ಚಳ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷದಿಂದ ಒಂದು ತಿಂಗಳ ಅಂತರದಲ್ಲಿ ಎರಡನೆಯ ಬಾರಿ ಇಂಧನ ಬೆಲೆಯಲ್ಲಿ ಏರಿಕೆಯಾಗಿದ್ದು, ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ ಜೋರಾಗಿಯೇ ತಟ್ಟಿದೆ.

ವಾಣಿಜ್ಯ ಬಳಕೆಯ 19 ಕೆ.ಜಿ ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಮತ್ತೆ ₹195.50 ಏರಿಕೆಯಾಗಿದೆ. ಬೆಂಗಳೂರಿನಲ್ಲಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ₹2,246ಕ್ಕೆ ಏರಿದೆ. ಮಾರ್ಚ್ 1ರಂದು ವಾಣಿಜ್ಯ ಸಿಲಿಂಡರ್ ಬೆಲೆಯನ್ನು ₹114.5ರಷ್ಟು ಹೆಚ್ಚಿಸಲಾಗಿತ್ತು.

ಆಯ್ದ ಬ್ರ್ಯಾಂಡ್‌ಗಳ ಪ್ರೀಮಿಯಂ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಕ್ರಮವಾಗಿ ₹11 ಮತ್ತು ₹1.50ರಷ್ಟು ಹೆಚ್ಚಳವಾಗಿದೆ. 100 ಆಕ್ಟೇನ್ ಪೆಟ್ರೋಲ್ (ಎಕ್ಸ್‌ಪಿ100) ದರ ಲೀಟರ್‌ಗೆ ₹160 ಮತ್ತು 'ಎಕ್ಸ್ಟ್ರಾ ಗ್ರೀನ್' ಡೀಸೆಲ್ ದರ ₹92.99ಕ್ಕೆ ಏರಿಕೆಯಾಗಿದೆ. ದೇಶದಲ್ಲಿ ಮಾರಾಟವಾಗುವ ಒಟ್ಟು ವಾಹನ ಇಂಧನದಲ್ಲಿ ಬ್ರ್ಯಾಂಡೆಡ್ ಪೆಟ್ರೋಲ್–ಡೀಸೆಲ್ ಪಾಲು ಶೇ 2ರಿಂದ 5ರಷ್ಟಿದೆ.

ವಿಮಾನಗಳಲ್ಲಿ ಬಳಸುವ ಇಂಧನದ (ಎಟಿಎಫ್) ಬೆಲೆ ದಾಖಲೆ ಪ್ರಮಾಣದಲ್ಲಿ ಹೆಚ್ಚಿದೆ. ಪ್ರತಿ ಸಾವಿರ ಲೀಟರ್ ಎಟಿಎಫ್ ದರ ₹2 ಲಕ್ಷದ ಗಡಿ ದಾಟಿದ್ದರೂ ದೇಶೀಯ ವಿಮಾನಯಾನ ಸೇವೆ ಒದಗಿಸುವ ಸಂಸ್ಥೆಗಳಿಗೆ ಇದರ ಭಾಗಶಃ ಏರಿಕೆಯನ್ನು ಮಾತ್ರ ವರ್ಗಾಯಿಸಲಾಗಿದೆ. ವಿದೇಶಿ ವಿಮಾನಯಾನ ಸಂಸ್ಥೆಗಳು ಪಾವತಿಸುವ 'ಎಟಿಎಫ್' ದರದ ಅರ್ಧದಷ್ಟನ್ನು ಮಾತ್ರ ದೇಶೀಯ ವಿಮಾನಯಾನ ಸಂಸ್ಥೆಗಳು ಪಾವತಿಸಿದರೆ ಸಾಕು.

ದೇಶೀಯ ವಿಮಾನಯಾನ ಸಂಸ್ಥೆಗಳಿಗೆ ಎಟಿಎಫ್ ದರ ಪ್ರತಿ ಕಿಲೊ ಲೀಟರ್‌ಗೆ ಶೇ 8.56ರಷ್ಟು (₹8,289) ಹೆಚ್ಚಿಸಲಾಗಿದ್ದು, ₹96,638ರಿಂದ ₹1,04,927ಕ್ಕೆ ಏರಿದೆ. ತಿಂಗಳ ಹಿಂದಷ್ಟೇ ಎಟಿಎಫ್ ದರವನ್ನು ಶೇ 5.7ರಷ್ಟು ಅಂದರೆ ಪ್ರತಿ ಕಿಲೊ ಲೀಟರ್‌ಗೆ ₹5,244ರಷ್ಟು ಹೆಚ್ಚಿಸಲಾಗಿತ್ತು.

ಬ್ರ್ಯಾಂಡೆಡ್ ಹೊರತುಪಡಿಸಿ ಇತರೆ ಸಾಮಾನ್ಯ ಪೆಟ್ರೋಲ್–ಡೀಸೆಲ್ ಮತ್ತು ಮನೆ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಪೆಟ್ರೋಲಿಯಂ ಸಚಿವಾಲಯ ಯಾವುದೇ ಪರಿಷ್ಕರಣೆ ಮಾಡಿಲ್ಲ. ಸದ್ಯ ಪೆಟ್ರೋಲ್‌ಗೆ ಬೆಂಗಳೂರಿನಲ್ಲಿ ಲೀಟರ್‌ಗೆ ₹102.92 ಹಾಗೂ ಡೀಸೆಲ್‌ಗೆ ₹90.99 ಇದೆ.

ಮಾರ್ಚ್ 7ರಂದು ಮನೆ ಬಳಕೆಯ 14.2 ಕೆ.ಜಿ ತೂಕದ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ₹60ರಷ್ಟು ಹೆಚ್ಚಿಸಲಾಗಿತ್ತು. ಸದ್ಯ ರಾಜ್ಯದಲ್ಲಿ ಮನೆ ಬಳಕೆ ಎಲ್‌ಪಿಜಿ ಸಿಲಿಂಡರ್ ದರ ₹913 ಇದ್ದು, ಈ ದರ ಮುಂದುವರಿದಿದೆ.

ತೈಲ ಮಾರಾಟ ಕಂಪನಿಗಳು ಪ್ರತಿ ತಿಂಗಳ 1ನೇ ತಾರೀಕಿನಂದು ಎಲ್‌ಪಿಜಿ ಮತ್ತು ಎಟಿಎಫ್ ದರ ಪರಿಷ್ಕರಿಸುತ್ತವೆ.

### ದರ ಏರಿಕೆ: ಯಾವುದಕ್ಕೆ ಎಷ್ಟು?

| | |
|---|---|
| 19 ಕೆ.ಜಿ. ತೂಕದ ವಾಣಿಜ್ಯ ಸಿಲಿಂಡರ್ | ₹195.50 |
| ಆಯ್ದ ಪ್ರೀಮಿಯಂ ಪೆಟ್ರೋಲ್ | ಲೀ.ಗೆ ₹11 |
| ಆಯ್ದ ಪ್ರೀಮಿಯಂ ಡೀಸೆಲ್ | ಲೀ.ಗೆ ₹1.50 |
| ವಿಮಾನ ಇಂಧನ | ಕಿಲೋ ಲೀ.ಗೆ ₹8,289.04 |

### ವಿದೇಶಿ ವಿಮಾನಯಾನ ಸಂಸ್ಥೆಗಳಿಗೆ ಹೊರೆ

2022ರಲ್ಲಿ ರಷ್ಯಾ, ಉಕ್ರೇನ್ ಮೇಲೆ ದಾಳಿ ಮಾಡಿದಾಗ ವಿದೇಶಿ ವಿಮಾನಯಾನ ಸಂಸ್ಥೆಗಳಿಗೆ ಅನ್ವಯವಾಗುವಂತೆ ಎಟಿಎಫ್ ದರ ಪ್ರತಿ ಕಿಲೊ ಲೀಟರ್‌ಗೆ ₹1.1ಲಕ್ಷಕ್ಕೆ ಏರಿಕೆಯಾಗಿತ್ತು. ಈ ದರವೇ ಇದುವರೆಗಿನ ಗರಿಷ್ಠ ಧಾರಣೆಯಾಗಿತ್ತು. ಸದ್ಯ ದೆಹಲಿಯಲ್ಲಿ ವಿದೇಶಿ ವಿಮಾನಯಾನ ಸಂಸ್ಥೆಗಳ ಎಟಿಎಫ್ ದರ ಪ್ರತಿ ಕಿಲೊ ಲೀಟರ್‌ಗೆ ₹2.07 ಲಕ್ಷ ಇದೆ.

'ಎಟಿಎಫ್' ಬೆಲೆ ಏರಿಕೆಯು ವಿದೇಶಿ ವಿಮಾನಯಾನ ಸೇವೆ ಒದಗಿಸುವ ಸಂಸ್ಥೆಗಳಿಗೆ ಇನ್ನಷ್ಟು ಹೊರೆಯಾಗಲಿದೆ. ಯುದ್ಧದಿಂದಾಗಿ ಹಲವೆಡೆ ವಾಯು ಪ್ರದೇಶಗಳನ್ನು ಮುಚ್ಚಲಾಗಿದ್ದು, ಪಶ್ಚಿಮ ಏಷ್ಯಾ ರಾಷ್ಟ್ರಗಳಿಗೆ ದೀರ್ಘ ಮಾರ್ಗದಲ್ಲಿ ಪ್ರಯಾಣಿಸುವಾಗ ಹೆಚ್ಚಿನ ಇಂಧನ ಬೇಕಾಗುತ್ತದೆ. ವಿಮಾನದ ಒಟ್ಟು ನಿರ್ವಹಣೆ ಯಲ್ಲಿ ಇಂಧನ ವೆಚ್ಚ ಶೇ 40ರಷ್ಟಿದೆ.

**ದೇಶೀಯ ವಿಮಾನಯಾನ ಸಂಸ್ಥೆಗಳಿಗೆ ಎಟಿಎಫ್ ದರದಲ್ಲಿ ಭಾಗಶಃ ಹೆಚ್ಚಳವನ್ನು ಮಾಡಲಾಗಿದೆ. ಇದರಿಂದ ಟಿಕೆಟ್ ದರದಲ್ಲಿ ತಕ್ಷಣದ ಏರಿಕೆ ಇರುವುದಿಲ್ಲ**

**ಕೆ.ರಾಮಮೋಹನ ನಾಯ್ಡು,** ನಾಗರಿಕ ವಿಮಾನಯಾನ ಸಚಿವ

### ಎಟಿಎಫ್‌ಗೆ ಹೆಚ್ಚುವರಿ ಸುಂಕ: ನಿರ್ಣಯ

ವಿಮಾನ ಇಂಧನದ (ಎಟಿಎಫ್) ಮೇಲೆ ಹೆಚ್ಚುವರಿ ಎಕ್ಸೈಸ್ ಸುಂಕ ವಿಧಿಸುವ ನಿರ್ಣಯವನ್ನು ಬುಧವಾರ ರಾಜ್ಯಸಭೆ ಅಂಗೀಕರಿಸಿದೆ.

ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಮಂಡಿಸಿದ ನಿರ್ಣಯವನ್ನು ರಾಜ್ಯಸಭೆ ಧ್ವನಿಮತದ ಮೂಲಕ ಅನುಮೋದಿಸಿತು.

2002ರ ಹಣಕಾಸು ಕಾಯ್ದೆಯ 8ನೇ ಅನುಸೂಚಿಗೆ ತಿದ್ದುಪಡಿ ತಂದು, ವಿಮಾನ ಇಂಧನದ ಮೇಲೆ ಪ್ರತಿ ಲೀಟರ್‌ಗೆ ₹50ರಂತೆ ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕ ವಿಧಿಸಲು ಈ ನಿರ್ಣಯ ಅವಕಾಶ ಕಲ್ಪಿಸುತ್ತದೆ.

### 'ಹೆಚ್ಚಿನ ಪರಿಣಾಮ ಬೀರಲ್ಲ'

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 100 ಡಾಲರ್ ದಾಟಿದೆ. ವಾಸ್ತವದಲ್ಲಿ 'ಎಟಿಎಫ್' ಮೂಲ ದರದಲ್ಲಿ ಶೇ 25ರಷ್ಟು ಭಾಗಶಃ ಹೆಚ್ಚಳವನ್ನು ಮಾತ್ರ (ಪ್ರತಿ ಕಿಲೊ ಲೀಟರ್‌ಗೆ ₹15 ಸಾವಿರ) ದೇಶೀಯ ವಿಮಾನಯಾನ ಸೇವೆ ಒದಗಿಸುವ ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ. ನಾಗರಿಕ ವಿಮಾನಯಾನ ಸಚಿವಾಲಯವೂ ಇದನ್ನು ಅನುಮೋದಿಸಿದೆ' ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಹೇಳಿದ್ದಾರೆ.

'ಎಟಿಎಫ್' ದರ ಹೆಚ್ಚಳವು ದೇಶೀಯ ವಿಮಾನಯಾನ ಸೇವೆ ಒದಗಿಸುವ ಸಂಸ್ಥೆಗಳ ಮೇಲೆ ದೊಡ್ಡ ಪರಿಣಾಮ ಬೀರುವುದಿಲ್ಲ, ವಿಮಾನ ಟಿಕೆಟ್‌ಗಳ ಮೇಲೆ ಹೆಚ್ಚುವರಿ ಇಂಧನ ಸರ್‌ಚಾರ್ಜ್ ವಿಧಿಸಲು ಇದು ಕಾರಣ ಆಗುವುದಿಲ್ಲ' ಎಂದು ನಾಗರಿಕ ವಿಮಾನಯಾನ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಸಂಗಬಾ ಚುಬಾ ಆವೊ ಹೇಳಿದ್ದಾರೆ.

## ಚಿಣ್ಣರೊಂದಿಗೆ ರಾಷ್ಟ್ರಪತಿ

ತುಮಕೂರು ಸಿದ್ಧಗಂಗಾ ಮಠದಲ್ಲಿ ಬುಧವಾರ ಮಕ್ಕಳ ಜತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಸಂವಾದ ನಡೆಸಿದರು

# 'ನ್ಯಾಟೊದಿಂದ ಹೊರಬರುವ ಚಿಂತನೆ'

ಲಂಡನ್ (ಎಎಫ್‌ಪಿ/ಎಪಿ): ನ್ಯಾಟೊದಿಂದ ಅಮೆರಿಕವನ್ನು ಹೊರತರುವ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಲಾಗುತ್ತಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಟ್ರಂಪ್

ಇರಾನ್ ವಿರುದ್ಧದ ಸೇನಾ ಕಾರ್ಯಾಚರಣೆಗೆ ನ್ಯಾಟೊ ಮಿತ್ರರಾಷ್ಟ್ರಗಳು ಅಮೆರಿಕಕ್ಕೆ ಬೆಂಬಲ ನೀಡದ ಕಾರಣ ಈ ಬಗ್ಗೆ ಚಿಂತನೆ ಮಾಡಲಾಗುತ್ತಿದೆ ಎಂದು 'ಟೆಲಿಗ್ರಾಫ್' ದಿನಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ. 'ನ್ಯಾಟೊವನ್ನು 'ಕಾಗದದ ಹುಲಿ' ಎಂದು ಟೀಕಿಸಿರುವ ಅವರು, 'ನ್ಯಾಟೊದಿಂದ ಹೊರಬರುವ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತಿದೆ' ಎಂಬುದಾಗಿ ಹೇಳಿದ್ದಾರೆ' ಎಂದು ದಿನಪತ್ರಿಕೆ ವರದಿ ಮಾಡಿದೆ.

'ನ್ಯಾಟೊ ವಿಶ್ವಾಸಾರ್ಹತೆ ಬಗ್ಗೆ ಬಹಳ ದೀರ್ಘ ಕಾಲದಿಂದಲೂ ಅನುಮಾನವಿತ್ತು ಎಂದೂ ಅವರು ಹೇಳಿದ್ದಾರೆ' ಎಂದಿದೆ.

**ಪರಿಣಾಮಕಾರಿ ಸೇನಾ ಮೈತ್ರಿಕೂಟ–ಸ್ಟಾರ್ಮರ್:** 'ಜಗತ್ತು ಕಂಡ ಅತ್ಯಂತ ಪರಿಣಾಮಕಾರಿ ಸೇನಾ ಮೈತ್ರಿಕೂಟ 'ನ್ಯಾಟೊ' ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರ 'ಕಾಗದದ ಹುಲಿ' ಎಂಬ ಟೀಕೆಯ ಬೆನ್ನಲ್ಲೇ ಅವರು ಈ ಹೇಳಿಕೆ ನೀಡಿದ್ದಾರೆ.

'ಹಲವು ದಶಕಗಳಿಂದ ಅದು ನಮಗೆ ಭದ್ರತೆ ನೀಡಿದೆ. ನ್ಯಾಟೊಗೆ ನಾವು ಸಂಪೂರ್ಣವಾಗಿ ಬದ್ಧರಾಗಿದ್ದೇವೆ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

### ಹೊರ್ಮುಜ್: ಬ್ರಿಟನ್‌ನಿಂದ ಅಂತರರಾಷ್ಟ್ರೀಯ ಸಮಾವೇಶ

ಹೊರ್ಮುಜ್ ಜಲಸಂಧಿಯನ್ನು ತೆರೆಸುವ ಮಾರ್ಗೋಪಾಯಕ್ಕೆ ಸಂಬಂಧಿಸಿದ ಚರ್ಚೆಗಾಗಿ ಅಂತರರಾಷ್ಟ್ರೀಯ ರಾಜತಾಂತ್ರಿಕ ಸಮಾವೇಶವನ್ನು ಬ್ರಿಟನ್ ಈ ವಾರ ಆಯೋಜಿಸಲಿದೆ ಎಂದು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಬುಧವಾರ ತಿಳಿಸಿದ್ದಾರೆ.

ತೈಲ ಸಾಗಣೆಯ ಪ್ರಮುಖ ಮಾರ್ಗವಾಗಿರುವ ಜಲಸಂಧಿಯ ಭದ್ರತೆಯನ್ನು ಪುನರ್ ಸ್ಥಾಪಿಸಲು ಮತ್ತು ಹೊರ್ಮುಜ್‌ನಲ್ಲಿ ಸಿಲುಕಿರುವ ಹಡಗುಗಳು ಹಾಗೂ ನಾವಿಕರ ಸುರಕ್ಷತೆಯನ್ನು ಖಾತರಿಪಡಿಸುವುದಕ್ಕಾಗಿ 35 ದೇಶಗಳು ಸಭೆಯಲ್ಲಿ ಭಾಗಿಯಾಗಲಿವೆ ಎಂದೂ ಹೇಳಿದ್ದಾರೆ.

ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಯವೆಟ್ಟೆ ಕೂಪರ್ ಚರ್ಚೆಯನ್ನು ನಡೆಸಿಕೊಡಲಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ, ಯಾವ ದಿನ ಸಭೆ ನಡೆಲಿದೆ ಎಂಬ ಬಗ್ಗೆ ಅವರು ಸ್ಪಷ್ಟ ಮಾಹಿತಿಯನ್ನು ನೀಡಿಲ್ಲ.

## 'ರೋಹಿಣಿ ಸಿಂಧೂರಿ ವಿರುದ್ಧ ತನಿಖೆಗೆ ಒಪ್ಪಿಗೆ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರಸ್ನೇಹಿ ಬಟ್ಟೆಯ ಕೈಚೀಲಗಳನ್ನು ಖರೀದಿಸುವ ಪ್ರಕ್ರಿಯೆಯಲ್ಲಿ ಕೋಟ್ಯಂತರ ರೂಪಾಯಿಗಳ ಅಕ್ರಮ ಎಸಗಿದ್ದಾರೆಂದು ಆರೋಪಿಸಲಾದ ಪ್ರಕರಣದಲ್ಲಿ, ಮೈಸೂರು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ವಿರುದ್ಧ ತನಿಖೆ ನಡೆಸಲು ಪೂರ್ವಾನುಮತಿ ನೀಡುವಂತೆ ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ. ಈ ಕುರಿತು ಮೈಸೂರಿನ ವಕೀಲ ಎನ್.ಆರ್.ರವಿಚಂದ್ರೇಗೌಡ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. 6

ರೋಹಿಣಿ

## ಡಿಜಿಟಲ್ ವ್ಯಸನಕ್ಕೆ ಕಡಿವಾಣ: ಅಭಿಪ್ರಾಯ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ಜವಾಬ್ದಾರಿಯುತ ಡಿಜಿಟಲ್ ಬಳಕೆ ಉತ್ತೇಜಿಸಲು ರೂಪಿಸಲಾದ ಕರಡು ನೀತಿ ಕುರಿತಂತೆ ಆರೋಗ್ಯ ಇಲಾಖೆಯು ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಿದೆ.

ಕರಡು ನೀತಿಯು ಇಲಾಖೆಯ ವೆಬ್‌ಸೈಟ್‌ನಲ್ಲಿದೆ.

15 ದಿನಗಳ ಒಳಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಬಹುದು. ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಜವಾಬ್ದಾರಿಯುತ ಡಿಜಿಟಲ್ ಸಾಧನಗಳ ಬಳಕೆಗೆ ಸಂಬಂಧಿಸಿದಂತೆ ಆಸಕ್ತರು ತಮ್ಮ ಅಭಿಪ್ರಾಯಗಳನ್ನು dd6mhkar@gmail.com ಮತ್ತು ddehospital-hfws@karnataka.gov.inಗೆ ಇ–ಮೇಲ್ ಮಾಡಬಹುದಾಗಿದೆ. 10

**ಡಿಜಿಟಲ್ ತಂತ್ರಜ್ಞಾನ ಬೇಡ ಎನ್ನಲು ಸಾಧ್ಯವಿಲ್ಲ. ಅಸುರಕ್ಷಿತ ಡಿಜಿಟಲ್ ತಂತ್ರಜ್ಞಾನ ಬಳಕೆಯನ್ನು ನಿಯಂತ್ರಿಸಲು ನಮ್ಮ ವ್ಯಾಪ್ತಿಯಲ್ಲಿ ಕ್ರಮವಹಿಸಲಾಗಿದೆ**

**ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

# ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಮಸೂದೆಗೆ 'ತಡೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಪಕ್ಷಗಳು ಹಾಗೂ ಕ್ರೈಸ್ತ ನಾಯಕರ ವಿರೋಧ ಮತ್ತು ಬಿಜೆಪಿ ಕೇರಳ ಘಟಕದ ಒತ್ತಡದಿಂದ, ವಿಧಾನಸಭಾ ಚುನಾವಣೆಯಲ್ಲಿ ಹೊಡೆತ ಬೀಳಬಹುದು ಎಂಬ ಆತಂಕದಿಂದ ಕೇಂದ್ರ ಸರ್ಕಾರವು ವಿವಾದಾತ್ಮಕ 'ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ಮಸೂದೆ'ಗೆ ಲೋಕಸಭೆಯಲ್ಲಿ ಅಂಗೀಕಾರ ಪಡೆಯುವುದನ್ನು ಮುಂದೂಡಿದೆ.

'ಎಫ್‌ಸಿಆರ್‌ಎ ಮಸೂದೆ- 2026' ಅನ್ನು ಲೋಕಸಭೆಯಲ್ಲಿ ಚರ್ಚೆ ಮತ್ತು ಅಂಗೀಕಾರಕ್ಕಾಗಿ ಬುಧವಾರಕ್ಕೆ ಪಟ್ಟಿ ಮಾಡಲಾಗಿತ್ತು. ಪ್ರಶ್ನೋತ್ತರ ಅವಧಿಯಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, 'ಮಸೂದೆಯನ್ನು ಇಂದು ಚರ್ಚೆಗೆ ತೆಗೆದುಕೊಳ್ಳುತ್ತಿಲ್ಲ' ಎಂದು ಸದನಕ್ಕೆ ತಿಳಿಸಿದರು. 'ಈ ವಿಷಯದಲ್ಲಿ ಕಾಂಗ್ರೆಸ್ ಮತ್ತು ಸಿಪಿಎಂ ಜನರ ದಾರಿ ತಪ್ಪಿಸುತ್ತಿವೆ' ಎಂದು ಅವರು ಆರೋಪಿಸಿದರು.

ಈ ಮಸೂದೆ ವಿರುದ್ಧ ಕಾಂಗ್ರೆಸ್, ಸಿಪಿಎಂ ಹಾಗೂ ಚರ್ಚ್‌ಗಳು ಆಕ್ಷೇಪ ವ್ಯಕ್ತಪಡಿಸಿವೆ. ಮಸೂದೆ ವಿರುದ್ಧ ಪ್ರತಿಭಟನೆಗಳು ನಡೆದಿವೆ. ಇದೊಂದು ನಿರಂಕುಶ ಮಸೂದೆಯಾಗಿದ್ದು, ದುರುಪಯೋಗಕ್ಕೆ ಕಾರಣವಾಗಲಿದೆ ಎಂದು ವಿಪಕ್ಷಗಳು ಜರೆದಿವೆ. 11

### ಏನಿದು ಮಸೂದೆ?

ಈ ಮಸೂದೆಯು ಸರ್ಕಾರೇತರ ಸಂಸ್ಥೆಗಳ (ಎನ್‌ಜಿಒ) ಚಟುವಟಿಕೆಗಳ ಮೇಲೆ ನಿಯಂತ್ರಣ ಸಾಧಿಸಲು ಹಾಗೂ ಅವುಗಳ ಮೇಲಿನ ಹಿಡಿತವನ್ನು ಮತ್ತಷ್ಟು ಬಲಗೊಳಿಸಲು ಕೇಂದ್ರ ಸರ್ಕಾರಕ್ಕೆ ಅವಕಾಶ ಕಲ್ಪಿಸಲಿದೆ. ಕಾನೂನು ಪ್ರಕಾರ ನೋಂದಣಿ ರದ್ದುಗೊಂಡಿರುವ ಇಲ್ಲವೇ ನಿರ್ಬಂಧ ಕ್ಕೊಳಗಾಗಿರುವ ಎನ್‌ಜಿಒಗಳ ವಿದೇಶಿ ನಿಧಿಗಳು ಮತ್ತು ಸ್ವತ್ತುಗಳ ನಿರ್ವಹಣೆಗಾಗಿ 'ನಿರ್ದಿಷ್ಟ ಪ್ರಾಧಿಕಾರ'ವೊಂದನ್ನು ಸ್ಥಾಪಿಸಲು ಮಸೂದೆ ಉದ್ದೇಶಿಸಿದೆ. 2010ರ ಮೂಲಶಾಸನದಲ್ಲಿನ ಲೋಪಗಳನ್ನು ಸರಿಪಡಿಸುವುದು ಮಸೂದೆಯ ಉದ್ದೇಶವಾಗಿದೆ ಎಂದು ಸರ್ಕಾರ ಹೇಳಿದೆ. ವಿದೇಶಗಳಿಂದ ಪಡೆಯುವ ದೇಣಿಗೆಗಳ ಮೇಲ್ವಿಚಾರಣೆ ಹಾಗೂ ನಿರ್ವಹಣೆಗೆ 'ಉದ್ದೇಶಿತ ಪ್ರಾಧಿಕಾರ'ದ ಮೂಲಕ ಸಮಗ್ರ ಚೌಕಟ್ಟು ರೂಪಿಸುವ ಅವಕಾಶವನ್ನು ಈ ಮಸೂದೆ ಒಳಗೊಂಡಿದೆ.

ಈ ಮಸೂದೆ ಕುರಿತು ವಿರೋಧ ಪಕ್ಷಗಳು ನೀಡುತ್ತಿರುವ ಹೇಳಿಕೆಗಳು ಸಂಪೂರ್ಣ ಸುಳ್ಳು ಹಾಗೂ ದಾರಿ ತಪ್ಪಿಸುವಂಥವು. ವಿದೇಶಗಳಿಂದ ಪಡೆಯುವ ದೇಣಿಗೆಯನ್ನು ರಾಷ್ಟ್ರದ ಭದ್ರತೆ ಹಾಗೂ ಹಿತಾಸಕ್ತಿಗಳಿಗೆ ವಿರುದ್ಧದ ಕಾರ್ಯಕ್ಕೆ ಬಳಸುವುದನ್ನು ತಡೆಗಟ್ಟುವ ಸಲುವಾಗಿ ಮಸೂದೆ ತರಲಾಗಿದೆ. ಯುಪಿಎ ಸರ್ಕಾರವು 2010ರಲ್ಲಿ ಈ ಮಸೂದೆಗೆ ಪ್ರಮುಖ ತಿದ್ದುಪಡಿಗಳನ್ನು ತಂದಿತ್ತು ಹಾಗೂ ಆ ಬಳಿಕ ಅನೇಕ ತಿದ್ದುಪಡಿಗಳನ್ನು ಮಾಡಲಾಗಿತ್ತು. ಕೇರಳದ ಸಂಸದರು ದುರುದ್ದೇಶದಿಂದ ಪ್ರತಿಭಟಿಸುತ್ತಿದ್ದಾರೆ

**ಕಿರಣ್ ರಿಜಿಜು,** ಸಂಸದೀಯ ವ್ಯವಹಾರಗಳ ಸಚಿವ

**ಚಿನಕುರುಳಿ** ಪ್ರಕಾಶ್ ಶೆಟ್ಟಿ

### 1,679 ಮನೆಗಳ ಪೈಕಿ 893 ಮನೆಗಳಲ್ಲಿವೆ ಜೈವಿಕ ಅನಿಲ ಉತ್ಪಾದನೆ ಘಟಕ

# ಈ ಊರುಗಳಲ್ಲಿಲ್ಲ ಸಿಲಿಂಡರ್ ಚಿಂತೆ

• ಇಮಾಮ್‌ಹುಸೇನ್ ಗೂಡುನವರ

ಬಂಬರಗಾ (ಬೆಳಗಾವಿ): ಯುದ್ಧದಿಂದಾಗಿ ಅಡುಗೆ ಅನಿಲ ಸಿಲಿಂಡರ್‌ಗೆ ಇತರೆಡೆ ಸಮಸ್ಯೆ ಇದ್ದರೂ ಬೆಳಗಾವಿ ತಾಲ್ಲೂಕಿನ ಬಂಬರಗಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ 9 ಗ್ರಾಮಗಳ ಜನರು ಈಗಲೂ ನಿರಾಳವಾಗಿದ್ದಾರೆ.

ಮೂರು ದಶಕದ ಹಿಂದೆ ಅವರು ನಿರ್ಮಿಸಿಕೊಂಡಿದ್ದ ಜೈವಿಕ ಅನಿಲ ಘಟಕಗಳು (ಬಯೋಗ್ಯಾಸ್ ಘಟಕ) ಆಯಾ ಕುಟುಂಬಕ್ಕೆ ಅಗತ್ಯವಿರುವ ಇಂಧನ ಉತ್ಪಾದಿಸಿ, ಅವರನ್ನು ಸ್ವಾವಲಂಬಿಯಾಗಿಸಿವೆ.

ಬಂಬರಗಾ, ಕಟ್ಟಣಭಾವಿ, ಗುಗ್ರ್ಯಾನಟ್ಟಿ, ಗೋಡಿಹಾಳ, ಹೊಸೂರ, ಗೋರಾಮಟ್ಟಿ, ನಿಂಗ್ಯಾನಟ್ಟಿ, ಹಳೇ ಇದ್ದಲಹೊಂಡ, ಹೊಸ ಇದ್ದಲಹೊಂಡದಲ್ಲಿ ಸಾಲು ಸಾಲಾಗಿ ಜೈವಿಕ ಅನಿಲ ಘಟಕಗಳೇ ಕಣ್ಣಿಗೆ ಬೀಳುತ್ತವೆ.

ಬಂಬರಗಾದಲ್ಲಿ ಇರುವ ಜೈವಿಕ ಅನಿಲ ಉತ್ಪಾದನೆ ಘಟಕ

ಪ್ರಜಾವಾಣಿ ಚಿತ್ರ:ಏಕನಾಥ ಅಗಸಿಮನಿ

'1990ರ ದಶಕದವರೆಗೆ ಈ ಗ್ರಾಮಗಳ ನಿವಾಸಿಗಳು ಅಡುಗೆಗಾಗಿ ಉರುವಲು ಬಳಸುತ್ತಿದ್ದರು. ಇದರಿಂದ ಪರಿಸರಕ್ಕೂ ಹಾನಿಯಾಗುತ್ತಿತ್ತು. ಮತ್ತೊಂದೆಡೆ ಬಹುತೇಕರ ಮನೆಯಲ್ಲಿ ಜಾನುವಾರುಗಳಿದ್ದವು. ಅವುಗಳ ಸಗಣಿಯಿಂದ ಜೈವಿಕ ಅನಿಲ ಉತ್ಪಾದನೆಗೆ ಅವಕಾಶವಿತ್ತು. ಹೀಗಾಗಿ, ಜೈವಿಕ ಅನಿಲ ಘಟಕ ಸ್ಥಾಪಿಸಲು ಜನ ಜಾಗರಣ ಸಂಸ್ಥೆಯು ಜಾಗೃತಿ ಮೂಡಿಸಿದೆ. ಅದು ಈಗ ಫಲ ಕೊಟ್ಟಿದೆ' ಎಂದು ಪರಿಸರವಾದಿ ಶಿವಾಜಿ ಕಾಗಣೀಕರ 'ಪ್ರಜಾವಾಣಿ'ಗೆ ತಿಳಿಸಿದರು.

'ಈ 9 ಹಳ್ಳಿಗಳ ಜನಸಂಖ್ಯೆ 6,990 ಇದೆ. 1,679 ಮನೆಗಳಿವೆ. 893 ಮನೆಗಳಲ್ಲಿ ಜೈವಿಕ ಅನಿಲ ಉತ್ಪಾದನೆ ಘಟಕಗಳಿವೆ. ತುರ್ತು ಸಂದರ್ಭದಲ್ಲಿ ಮಾತ್ರ ಪರ್ಯಾಯ ಇಂಧನ ಮೂಲವಾಗಿ ಎಲ್‌ಪಿಜಿ ಸಿಲಿಂಡರ್‌ಗಳನ್ನು ಹೊಂದಿದ್ದಾರೆ' ಎಂದು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸಿ.ಕೆ.ತಳವಾರ ಹೇಳಿದರು. 6

#### ಜೈವಿಕ ಅನಿಲ ಘಟಕಗಳ ವಿವರ

| ಗ್ರಾಮ | ಸಂಖ್ಯೆ |
|---|---|
| ಬಂಬರಾಗಾ | 225 |
| ಕಟ್ಟಣಭಾವಿ | 230 |
| ಗುಗ್ರ್ಯಾನಟ್ಟಿ | 80 |
| ಗೋಡಿಹಾಳ | 15 |
| ಹೊಸೂರ | 50 |
| ಗೋರಾಮಟ್ಟಿ | 25 |
| ನಿಂಗ್ಯಾನಟ್ಟಿ | 48 |
| ಹಳೇ ಇದ್ದಲಹೊಂಡ | 80 |
| ಹೊಸ ಇದ್ದಲಹೊಂಡ | 140 |
| ಒಟ್ಟು | 893 |

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

## ಕ್ರಿಕೆಟ್ ಬ್ಯಾಟ್, ಸ್ಟಂಪ್ಸ್ ಹಿಡಿದು ಕುಟುಂಬಗಳ ಹೊಡೆದಾಟ

ಪ್ರಜಾವಾಣಿ ವಾರ್ತೆ

**ಕಾರು ನಿಲುಗಡೆ ವಿಚಾರಕ್ಕೆ ಜಗಳ**

ಬೆಂಗಳೂರು: ಸಿಂಡಿಕೇಟ್ ಲೇಔಟ್‌ನಲ್ಲಿ ಕಾರು ನಿಲುಗಡೆ ವಿಚಾರಕ್ಕೆ ಒಂದೇ ಕಟ್ಟಡದಲ್ಲಿ ನೆಲಸಿದ್ದ ಎರಡು ಕುಟುಂಬಗಳು ಕ್ರಿಕೆಟ್ ಸ್ಟಂಪ್ಸ್ ಹಾಗೂ ಬ್ಯಾಟ್ ಹಿಡಿದುಕೊಂಡು ಪರಸ್ಪರ ಹೊಡೆದಾಡಿಕೊಂಡಿವೆ.

ಪ್ರಕರಣವು ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಮೆಟ್ಟಿಲೇರಿದೆ.

ಸಂತೋಷ್ ಎಂಬುವವರು ನೀಡಿದ ದೂರಿನ ಮೇರೆಗೆ ರತ್ನಮ್ಮ, ಅವರ ಪುತ್ರ, ಪುತ್ರಿ ಹಾಗೂ ಅಳಿಯನ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬ್ಯಾಡರಹಳ್ಳಿಯ ತುಂಗಾನಗರದಲ್ಲಿ ಇರುವ ಮೂರು ಅಂತಸ್ತಿನ ಕಟ್ಟಡದಲ್ಲಿ ಸಂತೋಷ್ ಹಾಗೂ ಶುಭಾ ಅವರು ಮೊದಲ ಅಂತಸ್ತಿನ ಕಟ್ಟಡದಲ್ಲಿ ವಾಸವಾಗಿದ್ದಾರೆ, ಕೆಳಮಹಡಿಯಲ್ಲಿ ರತ್ನಮ್ಮ ಅವರ ಕುಟುಂಬ ವಾಸವಿದೆ.

ಸಂತೋಷ್ ಅವರು ಪ್ರತಿದಿನ ತಮ್ಮ ಕಾರನ್ನು ಮನೆ ನೆಲಮಹಡಿಯಲ್ಲಿರುವ ನಿಗದಿತ ಜಾಗದಲ್ಲಿ ನಿಲುಗಡೆ ಮಾಡುತ್ತಿದ್ದರು. ಆದರೆ, ಮಾರ್ಚ್ 30ರಂದು ರತ್ನಮ್ಮ ಅವರ ಮನೆಯಲ್ಲಿ ಕಾರ್ಯಕ್ರಮ ಇತ್ತು. ಆದರೆ, ಸಂತೋಷ್ ಎಂದಿನಂತೆ ಕಾರು ನಿಲುಗಡೆ ಮಾಡಲು ಬಂದಿದ್ದರು. ಆ ಜಾಗದಲ್ಲಿ ರತ್ನಮ್ಮ ಅವರ ಪುತ್ರನ ಬೈಕ್ ನಿಲ್ಲಿಸಲಾಗಿತ್ತು. ಬೈಕ್ ಅನ್ನು ಪಕ್ಕಕ್ಕೆ ನಿಲುಗಡೆ ಮಾಡುವಂತೆ ಸಂತೋಷ್ ಕೇಳಿಕೊಂಡಿದ್ದರು. ಅದರಿಂದ ಸಿಟ್ಟಾದ ರತ್ನಮ್ಮ ಅವರ ಪುತ್ರ, 'ಮನೆಯಲ್ಲಿ ಕಾರ್ಯಕ್ರಮವಿದೆ. ಕಾರನ್ನು ಬೇರೆ ಸ್ಥಳದಲ್ಲಿ ನಿಲ್ಲಿಸುವಂತೆ ಹೇಳಿದ್ದರು. ಅದೇ ವಿಚಾರಕ್ಕೆ ಇಬ್ಬರ ನಡುವೆ ಗಲಾಟೆ ನಡೆದಿತ್ತು. ಅದು ವಿಕೋಪಕ್ಕೆ ಹೋದಾಗ ಸಂತೋಷ್ ಮತ್ತು ರತ್ನಮ್ಮ ಕುಟುಂಬದ ಸದಸ್ಯರು ಕ್ರಿಕೆಟ್ ಬ್ಯಾಟ್, ಸ್ಟಂಪ್, ದೊಣ್ಣೆ, ಚಾಕು ಹಿಡಿದು ಹೊಡೆದಾಟ ಮಾಡಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ನನ್ನ ಹಾಗೂ ಪತ್ನಿಯ ಮೇಲೆ ಹಲ್ಲೆ ನಡೆಸಲಾಗಿದೆ. ಪೊಲೀಸರಿಗೆ ಕರೆ ಮಾಡಿದ್ದಕ್ಕೆ ಮತ್ತಷ್ಟು ಕೆರಳಿದ ಆರೋಪಿಗಳು, ಕಾರನ್ನೂ ಜಖಂಗೊಳಿಸಿದ್ದಾರೆ' ಎಂದು ಸಂತೋಷ್ ದೂರಿನಲ್ಲಿ ಆರೋಪಿಸಿದ್ದಾರೆ.

ಈ ಸಂಬಂಧ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಟೆಕಿ ಆತ್ಮಹತ್ಯೆ: ಉದ್ಯೋಗ ನಷ್ಟ ಕಾರಣ

### ಪತಿ ಕಳೆದುಕೊಂಡ ದುಃಖದಲ್ಲಿ 17ನೇ ಮಹಡಿಯಿಂದ ಜಿಗಿದಿದ್ದ ಪತ್ನಿ

ಪ್ರಜಾವಾಣಿ ವಾರ್ತೆ



ಭಾನು ಚಂದರ್‌ರೆಡ್ಡಿ

ಶಾಜಿಯಾ ಸಿರಾಜ್

**ಮುಖ್ಯಾಂಶಗಳು**

- ಅಮೆರಿಕದಲ್ಲಿ ಈ ಹಿಂದೆ ಕೆಲಸ ಮಾಡಿದ್ದ ಭಾನು ಚಂದರ್ ರೆಡ್ಡಿ
- ವಾಪಸಾದ ಮೇಲೆ ಸೂಕ್ತ ಪ್ಯಾಕೇಜ್ ಸಿಕ್ಕಿರಲಿಲ್ಲ

ಬೆಂಗಳೂರು: 'ಥಣಿಸಂದ್ರ ಮುಖ್ಯ ರಸ್ತೆಯ 'ನಿಕೂ ಹೋಮ್ಸ್-1' ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿದ್ದ ತೆಲಂಗಾಣದ ಟೆಕಿ ದಂಪತಿ ಭಾನು ಚಂದರ್‌ರೆಡ್ಡಿ (32) ಹಾಗೂ ಪತ್ನಿ ಶಾಜಿಯಾ ಸಿರಾಜ್(31) ಅವರ ಆತ್ಮಹತ್ಯೆಗೆ ಕೆಲಸ ಕಳೆದುಕೊಂಡಿದ್ದೇ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ನಿಖರ ಕಾರಣ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಭಾನು ಚಂದರ್‌ರೆಡ್ಡಿ ಅವರು ತಮ್ಮ ಫ್ಲ್ಯಾಟ್‌ನಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರೆ, ಶಾಜಿಯಾ ಸಿರಾಜ್ ಅವರು ಅಪಾರ್ಟ್‌ಮೆಂಟ್‌ನ 17ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು.

ಟೆಕಿ ದಂಪತಿಯ ಆತ್ಮಹತ್ಯೆಗೆ ಕೌಟುಂಬಿಕ ಕಲಹ ಕಾರಣ ಇರಬಹುದು ಎಂದು ಆರಂಭದಲ್ಲಿ ಶಂಕಿಸಲಾಗಿತ್ತು. ಆದರೆ, ಭಾನು ಚಂದರ್‌ರೆಡ್ಡಿ ಅವರು ಕೆಲಸ ಕಳೆದುಕೊಂಡಿದ್ದರು. ಇದೇ ವಿಚಾರಕ್ಕೆ ಅವರು ಮಾನಸಿಕವಾಗಿ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತಿ ಕಳೆದುಕೊಂಡ ದುಃಖದಲ್ಲಿ ಪತ್ನಿಯೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಎರಡು ವರ್ಷಗಳ ಹಿಂದೆ ಇಬ್ಬರೂ ಮದುವೆ ಆಗಿದ್ದರು. ಅಂತರ ಧರ್ಮೀಯ ವಿವಾಹದ ಬಗ್ಗೆ ಶಾಜಿಯಾ ಕುಟುಂಬಕ್ಕೆ ಮಾಹಿತಿ ಇರಲಿಲ್ಲ. ತೆಲಂಗಾಣದಲ್ಲಿ ಸಮಸ್ಯೆ ಆಗಬಹುದು ಎನ್ನುವ ಕಾರಣಕ್ಕೆ 8 ತಿಂಗಳ ಹಿಂದೆ ದಂಪತಿ ಬೆಂಗಳೂರಿಗೆ ಬಂದು ಫ್ಲ್ಯಾಟ್‌ವೊಂದನ್ನು ಬಾಡಿಗೆಗೆ ಪಡೆದು ನೆಲಸಿದ್ದರು ಎಂದು ಮೂಲಗಳು ಹೇಳಿವೆ.

ಶಾಜಿಯಾ ಅವರು ನಗರದಲ್ಲಿರುವ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಸೋಮವಾರ ಅವರಿಗೆ ರಾತ್ರಿ ಪಾಳಿಯಲ್ಲಿ ಕೆಲಸವಿತ್ತು. ರಾತ್ರಿ ಪಾಳಿ ಮುಗಿಸಿ ಮಂಗಳವಾರ ಬೆಳಿಗ್ಗೆ 7.30ರ ಸುಮಾರಿಗೆ ತಮ್ಮ ಫ್ಲ್ಯಾಟ್‌ಗೆ ಬಂದಿದ್ದರು. ಮನೆಯೊಳಗೆ ಪತಿ ಇದ್ದರೂ ಬಾಗಿಲು ತೆರೆದಿರಲಿಲ್ಲ. ಅನುಮಾನಗೊಂಡ ಅವರು ಭದ್ರತಾ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಬಾಗಿಲು ಒಡೆದು ನೋಡಿದಾಗ ಪತಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡುಬಂತು. ಈ ವೇಳೆ ಸುಮಾರು 20 ನಿಮಿಷ ಘಟನಾ ಸ್ಥಳದಲ್ಲೇ ಇದ್ದ ಶಾಜಿಯಾ, ಅವರು ನಂತರ 17ನೇ ಮಹಡಿಗೆ ತೆರಳಿದ್ದರು. ಅಲ್ಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

'ಭಾನು ಚಂದರ್‌ರೆಡ್ಡಿ ಅವರು ಕೆಲವು ವರ್ಷ ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದರು. ವಾರ್ಷಿಕವಾಗಿ ₹80 ಲಕ್ಷ ಪ್ಯಾಕೇಜ್ ಇತ್ತು. ಅಮೆರಿಕದಲ್ಲಿ ಮನೆಯನ್ನೂ ಖರೀದಿಸಿದ್ದರು. ತೆಲಂಗಾಣದಲ್ಲಿ ಕುಟುಂಬದವರಿಗೆ ಮನೆಯನ್ನೂ ನಿರ್ಮಿಸುತ್ತಿದ್ದರು. ಅಮೆರಿಕದಲ್ಲಿ ಕೆಲಸ ಕಳೆದುಕೊಂಡಿದ್ದ ಅವರು ಭಾರತಕ್ಕೆ ವಾಪಸ್ ಆಗಿ ವಿವಿಧ ರಾಜ್ಯಗಳಲ್ಲಿ ಕೆಲಸ ಹುಡುಕುತ್ತಿದ್ದರು. ಸೂಕ್ತ ಪ್ಯಾಕೇಜ್ ನೀಡುವ ಕಂಪನಿ ಸಿಕ್ಕಿರಲಿಲ್ಲ. ಇದರಿಂದ ಅವರು ಆತಂಕಕ್ಕೆ ಒಳಗಾಗಿದ್ದರು' ಎಂದು ಮೂಲಗಳು ಹೇಳಿವೆ.

'ಬೆಂಗಳೂರಿನಲ್ಲೂ ಹೊಸ ಕೆಲಸ ಸಿಗುವ ನಿರೀಕ್ಷೆಯಲ್ಲಿ ಪ್ರಯತ್ನಿಸುತ್ತಿದ್ದರು. ಆದರೆ, ಅವಕಾಶಗಳು ಸಿಗದೇ ಹೋದ ಕಾರಣ ಆತಂಕ ಮತ್ತು ಒತ್ತಡ ಹೆಚ್ಚಾಗಿತ್ತು' ಎಂದು ಮೂಲಗಳು ಹೇಳಿವೆ.

ಕುಟುಂಬದವರ ದೂರಿನ ಆಧಾರದ ಮೇಲೆ ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಅಸಹಜ ಸಾವು ಪ್ರಕರಣ ದಾಖಲಾಗಿದೆ.

## ನದಿಯಲ್ಲಿ ಮುಳುಗಿ ಟೆಕಿ ಸಾವು

ಶ್ರೀರಂಗಪಟ್ಟಣ: ತಾಲ್ಲೂಕಿನ ಬೆಳಗೊಳ ಸಮೀಪದ ಎಡಮುರಿ ಪ್ರಕೃತಿ ತಾಣಕ್ಕೆ ವಿಹಾರಕ್ಕೆ ಬಂದಿದ್ದ ಸಾಫ್ಟ್‌ವೇರ್ ಎಂಜಿನಿಯರ್ ಬುಧವಾರ ಕಾವೇರಿ ನದಿಯಲ್ಲಿ ಮುಳುಗಿ ಮೃತಪಟ್ಟರು.

ಬೆಂಗಳೂರಿನ ರಾಮಮೂರ್ತಿ ನಗರದ ಪಾಂಡಿಯನ್ ಅವರ ಮಗ ಇನ್ಫೋಸಿಸ್ ಉದ್ಯೋಗಿ ವಿಘ್ನೇಶ್ ಪಿ. (27) ಮೃತರು. ಮೂವರು ಸ್ನೇಹಿತರ ಜತೆ ವಿಹಾರಕ್ಕೆ ಬಂದಿದ್ದ ಇವರು ಈಜಲು ನದಿಗೆ ಇಳಿದಾಗ ದುರ್ಘಟನೆ ಸಂಭವಿಸಿದೆ.

ಅಗ್ನಿಶಾಮಕ ಸಿಬ್ಬಂದಿ ಹಾಗೂ ಪೊಲೀಸರು ಕಾರ್ಯಾಚರಣೆ ನಡೆಸಿ ಶವವನ್ನು ಮೇಲೆ ತೆಗೆದಿದ್ದಾರೆ. ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಲೈಂಗಿಕ ಕಿರುಕುಳ: ಆರೋಪಿ ಬಂಧನ

ಬೆಂಗಳೂರು: ಮಹಿಳಾ ಸಹೋದ್ಯೋಗಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ರಾಜ್ಯ ಶುಶ್ರೂಷ ಪರಿಷತ್‌ನ ಕಚೇರಿಯ ರಿಜಿಸ್ಟ್ರಾರ್ ಮಲ್ಲು ಅವರನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಹಿಳೆ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಗಾಂಧಿನಗರದಲ್ಲಿ ರಾಜ್ಯ ಶುಶ್ರೂಷ ಪರಿಷತ್ ಕಚೇರಿ ಇದೆ. ಅದೇ ಕಚೇರಿಯಲ್ಲಿ ಮಲ್ಲು ಹಾಗೂ ದೂರು ನೀಡಿದ್ದ ಮಹಿಳೆ ಕೆಲಸ ಮಾಡುತ್ತಿದ್ದಾರೆ. ಮಲ್ಲು ಅವರು ತಮ್ಮೊಂದಿಗೆ ಅಸಭ್ಯವಾಗಿ ವರ್ತಿಸುವ ಮೂಲಕ ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ, ಮಾರ್ಚ್ 26ರಂದು ಸಂತ್ರಸ್ತೆ ಉಪ್ಪಾರಪೇಟೆ ಠಾಣೆಗೆ ದೂರು ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

ಮಲ್ಲುಗೆ ನೋಟಿಸ್ ಜಾರಿ ಮಾಡಲಾಗಿತ್ತು. ಆದರೆ, ವಿಚಾರಣೆಗೆ ಬಂದಿರಲಿಲ್ಲ. ಆರೋಪಿಯನ್ನು ವಶಕ್ಕೆ ಪಡೆದು, ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು ಜೈಲಿಗೆ ಕಳುಹಿಸಲಾಗಿದೆ ಎಂದು ಪಶ್ಚಿಮ ವಿಭಾಗದ ಡಿಸಿಪಿ ಎನ್.ಯತೀಶ್ ತಿಳಿಸಿದರು.

## ಬೆಂಕಿ ಅವಘಡ: ಐವರು ಪಾರು

### ರಾಜೀವ್ ಗಾಂಧಿ ನಗರ: ಮನೆಯ ಪೀಠೋಪಕರಣ ಭಸ್ಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಗ್ಗೆರೆಯ ರಾಜೀವ್ ಗಾಂಧಿ ನಗರದ ಮನೆಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಬೆಂಕಿ ಅವಘಡ ಸಂಭವಿಸಿದ್ದು, ಮನೆಯಲ್ಲಿದ್ದ ಪೀಠೋಪಕರಣಗಳು ಹಾಗೂ ಗೃಹೋಪಯೋಗಿ ವಸ್ತುಗಳು ಸುಟ್ಟು ಭಸ್ಮವಾಗಿವೆ. ಮನೆಯಲ್ಲಿದ್ದ ಐವರು ಹೊರಕ್ಕೆ ಓಡಿ ಬಂದು ಅಪಾಯದಿಂದ ಪಾರಾಗಿದ್ದಾರೆ.

ಮೂರು ಅಂತಸ್ತಿನ ಕಟ್ಟಡದ ಮೊದಲ ಮಹಡಿಯಲ್ಲಿ ಹರಗಯ್ಯ ಹಾಗೂ ಭಾಗ್ಯಮ್ಮ ದಂಪತಿ ಮಕ್ಕಳೊಂದಿಗೆ ವಾಸವಾಗಿದ್ದರು. ಅವರ ಮನೆಯಲ್ಲಿ ಬೆಂಕಿ ಅವಘಡ ಸಂಭವಿಸಿದೆ.

ಮನೆಗೆ ಹೊಸ ಸಿಲಿಂಡರ್ ಬಂದಿತ್ತು. ಖಾಲಿಯಾಗಿದ್ದ ಹಳೆಯ ಸಿಲಿಂಡರ್ ಬದಲಿಸುವ ಸಂದರ್ಭದಲ್ಲಿ ಅನಿಲ ಸೋರಿಕೆಯಾಗಿ ಬೆಂಕಿ ಅವಘಡ ಸಂಭವಿಸಿದೆ. ಕ್ಷಣಾರ್ಧದಲ್ಲಿ ಬೆಂಕಿ ಇಡೀ ಮನೆಯನ್ನು ಆವರಿಸಿತ್ತು. ತಕ್ಷಣ ಕುಟುಂಬಸ್ಥರು ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ಇದರಿಂದಾಗಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಮನೆಯಲ್ಲಿದ್ದ ದಿನಬಳಕೆ ವಸ್ತುಗಳು ಹಾಗೂ ಪೀಠೋಪಕರಣ ಭಸ್ಮವಾಗಿವೆ ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಮಾಹಿತಿ ನೀಡಿದ್ದಾರೆರೆ.

ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಅಕ್ಕಪಕ್ಕದ ಮನೆಗೆ ಬೆಂಕಿ ವ್ಯಾಪಿಸುವುದನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ. ರಾಜಗೋಪಾಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಡುಗೆ ಅನಿಲ ಸೋರಿಕೆಯಿಂದ ಸಂಭವಿಸಿದ ಬೆಂಕಿ ಅವಘಡದಿಂದ ಮನೆಯ ಹೊರಗೆ ಹೊಗೆ ಆವರಿಸಿತ್ತು.

## ಆತ್ಮಹತ್ಯೆಗೆ ಯತ್ನಿಸಿದ್ದ ಯುವತಿ ರಕ್ಷಣೆ

ಬೆಂಗಳೂರು: ಇಮ್ಮಡಿಹಳ್ಳಿಯ ಟೆಕ್ನೊ ಸ್ಕೂಲ್ ರಸ್ತೆ ಬಳಿಯ ಮನೆಯೊಂದರಲ್ಲಿ ಆತ್ಮಹತ್ಯೆಗೆ ಯತ್ನಿಸುತ್ತಿದ್ದ ಯುವತಿಯನ್ನು ವೈಟ್‌ಫೀಲ್ಡ್ ಠಾಣೆಯ ಪೊಲೀಸರು ರಕ್ಷಿಸಿದ್ದಾರೆ.

'ಯುವತಿಯನ್ನು ಮದುವೆಯಾಗಲು ಪ್ರಿಯಕರ ನಿರಾಕರಿಸುತ್ತಿದ್ದ. ಅದರಿಂದ ಬೇಸರಗೊಂಡಿದ್ದ ಯುವತಿ, ಪ್ರಿಯಕರನಿಗೆ ಕರೆ ಮಾಡಿ, ಮದುವೆ ಆಗು; ಇಲ್ಲವೇ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂಬುದಾಗಿ ಬೆದರಿಕೆ ಹಾಕಿದ್ದರು. ಆತಂಕಗೊಂಡಿದ್ದ, ಪ್ರಿಯಕರ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದ' ಎಂದು ಮೂಲಗಳು ತಿಳಿಸಿವೆ.

'ಮಾಹಿತಿ ಆಧರಿಸಿ, ಠಾಣೆಯ ಚೇತಾ ಸಿಬ್ಬಂದಿ 13 ನಿಮಿಷದಲ್ಲೇ ಯುವತಿಯ ಮನೆಗೆ ತಲುಪಿದ್ದರು. ಬಾಗಿಲು ತೆಗೆಯುವಂತೆ ಮನವಿ ಮಾಡಿದ್ದರೂ ಯುವತಿ ಸ್ಪಂದಿಸಲಿಲ್ಲ. ಬಳಿಕ ಕಿಟಕಿ ತೆರೆದು ನೋಡಿದಾಗ ಯುವತಿ ಆತ್ಮಹತ್ಯೆಗೆ ಯತ್ನಿಸುತ್ತಿರುವುದು ಕಂಡುಬಂತು' ಎಂದು ಪೊಲೀಸರು ಹೇಳಿದರು.

'ಯುವತಿಯ ಜತೆಗೆ ಮಾತುಕತೆ ನಡೆಸಿ. ಸಹನೆಯಿಂದ ಸಮಾಲೋಚನೆ ನಡೆಸಿದಾಗ ಯುವತಿ ಬಾಗಿಲು ತೆರೆದರು. ಬಳಿಕ ಯುವತಿಯನ್ನು ರಕ್ಷಿಸಿ. ಆಪ್ತ ಸಮಾಲೋಚನೆಗೆ ಒಳಪಡಿಸಲಾಯಿತು' ಎಂದು ಪೊಲೀಸರು ಹೇಳಿದರು.

## ರಾಜ್ಯಪಾಲರ ಹೆಸರು ದುರ್ಬಳಕೆ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಅನುಮತಿಯಿಲ್ಲದೇ ಅವರ ಹೆಸರು ಹಾಗೂ ಭಾವಚಿತ್ರ ಬಳಸಿಕೊಂಡು ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಿದ್ದ ನಂದಿನಿ ಎಂಬುವವರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಆರ್.ಪ್ರಭುಶಂಕರ್ ಅವರು ನೀಡಿದ ದೂರಿನ ಮೇಲೆ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 318(2) ಹಾಗೂ 318(4)ರ ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

**ಎಫ್‌ಐಆರ್‌ನಲ್ಲಿ ಏನಿದೆ?:** 'ರಾಜ್ಯಪಾಲರ ಭಾವಚಿತ್ರ ಹಾಗೂ ಹೆಸರು ಬಳಸಿಕೊಂಡು ನ್ಯಾಷನಲ್ ಎಕ್ಸಲೆನ್ಸ್ ಕೌನ್ಸಿಲ್ ವತಿಯಿಂದ 'ಕರ್ನಾಟಕ ಅವಾರ್ಡ್ಸ್-2026' ಎಂಬ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾರ್ಚ್ 28ರಂದು ಪುರಭವನದಲ್ಲಿ ಆಯೋಜಿಸಿರುವಂತೆ ಆಹ್ವಾನ ಪತ್ರಿಕೆಯನ್ನು ಆರೋಪಿ ಮಹಿಳೆ ಮುದ್ರಿಸಿದ್ದರು. ಅಲ್ಲದೇ ಸಂಭಾವ್ಯ ಪ್ರಶಸ್ತಿ ಪುರಸ್ಕೃತರನ್ನು ಸಂಪರ್ಕಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದರು.

ರಾಜ್ಯಪಾಲರ ಹೆಸರು ದುರ್ಬಳಕೆ ಮಾಡಿಕೊಂಡ ಮಹಿಳೆ ಹಾಗೂ ಎಕ್ಸಲೆನ್ಸ್ ಕೌನ್ಸಿಲ್‌ನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕು' ಎಂದು ಪ್ರಭುಶಂಕರ್ ಅವರು ದೂರಿನಲ್ಲಿ ಕೋರಿದ್ದಾರೆ.

## ಇನ್‌ಸ್ಪೆಕ್ಟರ್ ಬಂಧನ ಆದೇಶ ತಡೆಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೂರು ನೀಡಲು ಬಂದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆ ಮೂಡಬಿದಿರೆಯ ಇನ್‌ಸ್ಪೆಕ್ಟರ್ ಪಿ.ಜಿ.ಸಂದೇಶ್ ಬಂಧನದ ಆದೇಶಕ್ಕೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಕುರಿತಂತೆ ಪಿ.ಜಿ.ಸಂದೇಶ್ ಮತ್ತು ಇಬ್ಬರು ಮಹಿಳೆಯರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ಇನ್‌ಸ್ಪೆಕ್ಟರ್ ಅವರನ್ನು ಬಂಧಿಸದಂತೆ ಮಧ್ಯಂತರ ತಡೆ ನೀಡಬೇಕು' ಎಂಬ ಅರ್ಜಿದಾರರ ಪರ ವಕೀಲರ ಮನವಿಯನ್ನು ನಿರಾಕರಿಸಿದ ನ್ಯಾಯಪೀಠ, 'ಇನ್ಸ್‌ಪೆಕ್ಟರ್ ಮಾಡಿರುವುದು ಅಧಿಕಾರದ ದುರುಪಯೋಗವಲ್ಲವೇ' ಎಂದು ಖಾರವಾಗಿ ಪ್ರಶ್ನಿಸಿತು. ವಿಚಾರಣೆಯನ್ನು ಇದೇ 6ಕ್ಕೆ ಮುಂದೂಡಿತು.

**ಪ್ರಕರಣ:** ಮಹಿಳೆಯರನ್ನು ಲೈಂಗಿಕವಾಗಿ ಪೀಡಿಸಿದ ಆರೋಪದಡಿ ಸಂದೇಶ್ ವಿರುದ್ಧ ಬೆಳ್ತಂಗಡಿ ತಾಲ್ಲೂಕಿನ ವೇಣೂರು ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ-2023ರ (ಬಿಎನ್‌ಎಸ್) ಕಲಂ 376(2)(ಎ)(1), 376(2)(ಎನ್), 384, 506 ಅಡಿ ಎಫ್‌ಐಆರ್ ದಾಖಲಾಗಿದೆ.

**ನಿಧನ ವಾರ್ತೆ**

## ಎನ್.ಶಿವರಾಮರೆಡ್ಡಿ



ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಬಂಡೆ ಬೊಮ್ಮಸಂದ್ರ ಗ್ರಾಮದ ನಿವಾಸಿ ಎನ್.ಶಿವರಾಮರೆಡ್ಡಿ ಅವರು ಬುಧವಾರ ನಿಧನರಾದರು. ಮೃತರಿಗೆ ಪತ್ನಿ ಹಾಗೂ ಮಕ್ಕಳು ಇದ್ದಾರೆ. ಗುರುವಾರ ಮಧ್ಯಾಹ್ನ ಬಂಡೆಬೊಮ್ಮಸಂದ್ರ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ವರ್ಗದವರು ತಿಳಿಸಿದ್ದಾರೆ.

**ಕೇಂದ್ರೀಯ ವಿದ್ಯಾಲಯ ಕೃಷ್ಣರಾಜಪುರಂ, ಬೆಂಗಳೂರು-560036**

**ಪ್ರವೇಶ ಸೂಚನೆ: 2026-27**

1. II ರಿಂದ Vನೇ ತರಗತಿಯವರೆಗಿನ ಹೊಸ ಪ್ರವೇಶಗಳಿಗೆ 02.04.2026 ರಿಂದ 08.04.2026ರವರೆಗೆ ಬೆಳಿಗ್ಗೆ 10:00 ರಿಂದ ಸಂಜೆ 04:00 ರವರೆಗೆ ಆಫ್‌ಲೈನ್ ಮೋಡ್‌ನಲ್ಲಿ ಮಾತ್ರ ನೋಂದಣಿ ಮಾಡಿಕೊಳ್ಳಬಹುದು. ಸರಿಯಾಗಿ ಭರ್ತಿ ಮಾಡಿದ ನಮೂನೆಯನ್ನು ನಿಗದಿತ ದಿನಗಳಲ್ಲಿ ಬೆಂಗಳೂರಿನ ಕೃಷ್ಣರಾಜಪುರಂನ ಕೇಂದ್ರೀಯ ವಿದ್ಯಾಲಯದ ಕಚೇರಿಗೆ ಸಲ್ಲಿಸಬೇಕು.
2. II ರಿಂದ Vನೇ ತರಗತಿಯವರೆಗಿನ ಪ್ರವೇಶ ಮತ್ತು ನೋಂದಣಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯು https://kvsangathan.nic.in/en/admission/,https://krishnarajapuram.kvs.ac.in/en/admissionn-notice/ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ ಮತ್ತು 2026-27ರ ಪ್ರವೇಶ ವೇಳಾಪಟ್ಟಿಯ ಪ್ರಕಾರ ನೋಂದಣಿಗಳನ್ನು ಮಾಡಬಹುದು.
3. ಅರ್ಜಿ ನಮೂನೆಯಲ್ಲಿ ತಪ್ಪು ಮತ್ತು ದಾರಿತಪ್ಪಿಸುವ ಮಾಹಿತಿಯು ಕೇಂದ್ರೀಯ ವಿದ್ಯಾಲಯದಿಂದ ಪರಿಶೀಲನೆಯ ಸಮಯದಲ್ಲಿ ಕಂಡುಬಂದರೆ ಪ್ರವೇಶವನ್ನು ನೀಡಲಾಗುವುದಿಲ್ಲ.
4. ಶಾಲಾ ಸಮಯದಲ್ಲಿ ಮಾತ್ರ ಪ್ರಾಂಶುಪಾಲರು / ಪ್ರವೇಶ ಪ್ರಭಾರಿಯನ್ನು ಸಂಪರ್ಕಿಸಿ.

**KENDRIYA VIDYALAYA KRISHNARAJAPURAM, BENGALURU-560036**

**ADMISSION NOTICE: 2026-27**

1. Registration for fresh admissions, in, Class II to V, is from 02.04.2026 to 08.04.2026 from10:00 am to 04:00 pm, in offline mode only. The duly filled-up form needs to be submitted to the office of the Kendriya Vidyalaya, Krishnarajapuram Bengaluru with the prescribed days.
2. All information regarding Admission & Registration for Class-II to V, will be available on the Websites https://kvsangathan.nic.in/en/admission/, https://krishnarajapuram.kvs.ac.in/en/admissionn-notice/ and registrations can be done as per the Schedule for Admission 2026-27.
3. Admission will not be granted, if wrong and misleading information in the application form is found at the time of scrutiny by the KV.
4. Contact Principal/Admission In-charge, during school hours only.

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ಬೆಂಗಳೂರು ದಕ್ಷಿಣ ವಿಭಾಗ,
ಬೆಂಗಳೂರು ದಕ್ಷಿಣ ಜಿಲ್ಲೆ

ಸಂ: ಕರಾಸಾ/ಬೆಂದವಿ/ಸಂ/ವಾ/2570/2571/2025-26 ದಿನಾಂಕ: 23.03.2026

**ಇ-ಟೆಂಡರ್ ಪ್ರಕಟಣೆ ಸಂಖ್ಯೆ: 10 ಮತ್ತು 11/2025-26**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು ಬೆಂಗಳೂರು ದಕ್ಷಿಣ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಕೋಡಂಬಳ್ಳಿ, ಸಾತನೂರು, ಆನೇಕಲ್, ಮಾಗಡಿ, ದೊಡ್ಡಮರಳವಾಡಿ ಹಾಗೂ ಕೋಡಿಹಳ್ಳಿ ಬಸ್ ಘಟಕ/ನಿಲ್ದಾಣಗಳಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಹಾಗೂ ಬೆಂಗಳೂರು ದಕ್ಷಿಣ ವಿಭಾಗದ (ರಾಮನಗರ) ವ್ಯಾಪ್ತಿಯಲ್ಲಿ ಖಾಲಿ ಇರುವ ಹೋರ್ಡಿಂಗ್ಸ್/ಗ್ಲೋಸೈನ್/ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಇ-ಟೆಂಡರ್ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ದಿ: 28.03.2026 ರಿಂದ ಇ-ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ತೆರೆದ ಸ್ಥಳದ ನಕ್ಷೆಯನ್ನು ಹಾಗೂ ಹೆಚ್ಚಿನ ವಿವರವನ್ನು ವಿಭಾಗೀಯ ಕಛೇರಿ, ಸಂಚಾರ ಶಾಖೆಯಲ್ಲಿ ಪಡೆದುಕೊಳ್ಳುವುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 7760990852/ 9606037740

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ, ಬೆಂಗಳೂರು ದಕ್ಷಿಣ ವಿಭಾಗ

ವಾಸಾಸಂಇ/ವಾ.ಪ್ರ/001/ಎಂಎಎ/2026-27

**ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ**
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್ಸ್ (ಎಲ್.ಇ.ಓ.ಎಸ್.) ಪ್ರಯೋಗಾಲಯ
ಪೀಣ್ಯ, ಬೆಂಗಳೂರು - 560058.
ಎಲ್.ಇ.ಓ.ಎಸ್. ನಿರ್ಮಾಣ ಮತ್ತು ನಿರ್ವಹಣಾ ವಿಭಾಗ (ಎಲ್.ಸಿ.ಎಂ.ಡಿ.)
[ದೂರವಾಣಿ : (080)-22685088, 5047, 5045, 5088, 5086, (080)-28392310]

**ಸಂಕ್ಷಿಪ್ತ ಇ-ಟೆಂಡರ್ (ಎನ್.ಐ.ಇ.ಟಿ.) ಆಹ್ವಾನ ಪ್ರಕಟಣೆ**

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

**ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ :** ಎಲ್.ಇ.ಓ.ಎಸ್. ಕ್ಯಾಂಪಸ್, ಪೀಣ್ಯ, ಬೆಂಗಳೂರು – 58 ಇಲ್ಲಿ 20 ಕೆ.ಎಲ್. ಸಾಮರ್ಥ್ಯದ ಎಲ್.ಎನ್. 2 ಟ್ಯಾಂಕ್‌ನ ಫೌಂಡೇಶನ್ ಹಾಕುವ ಕೆಲಸ. **ಎನ್.ಐ.ಇ.ಟಿ. ನಂ.:** CMG/LEOS/2025-26/LMN-11, ದಿನಾಂಕ : 30.03.2026; **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ** 5.12 **ಲಕ್ಷ ;** ಇ.ಎಂ.ಡಿ. ರೂ. 10,240/- ; **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ :** 03 ತಿಂಗಳು, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ :** 02.04.2026; **ಮುಕ್ತಾಯದ ದಿನಾಂಕ :** 15.04.2026.

**ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ :** ಎಲ್.ಇ.ಓ.ಎಸ್. & ಆರ್ಯಭಟ ಕ್ಯಾಂಪಸ್‌ಗಳು, ಪೀಣ್ಯ, ಬೆಂಗಳೂರು – 58 (ಸಿವಿಲ್ & ಪಿ.ಹೆಚ್. ಕಾಮಗಾರಿಗಳು) ಇಲ್ಲಿರುವ ಹಳೇ ಶೌಚಾಲಯಗಳ ಸುಧಾರಣೆಗಳು. **ಎನ್.ಐ.ಇ.ಟಿ. ನಂ.:** LEOS/CMG/CW-04/2026-27, ದಿನಾಂಕ : 26.03.2026; **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ 89.91 ಲಕ್ಷ ;** ಇ.ಎಂ.ಡಿ. ರೂ. 1,79,820/-; **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ :** 10 ತಿಂಗಳು, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ :** 01.04.2026; **ಮುಕ್ತಾಯದ ದಿನಾಂಕ :** 15.04.2026.

**ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ :** ಎಲ್.ಇ.ಓ.ಎಸ್. ಕ್ಯಾಂಪಸ್, ಪೀಣ್ಯ, ಬೆಂಗಳೂರು – 58 ಇಲ್ಲಿ ದರ ಒಪ್ಪಂದದ ಎಲ್.ಇ.ಡಿ. ಲೈಟ್ ಫಿಟ್ಟಿಂಗ್‌ಗಳ ಪೂರೈಕೆ ಮತ್ತು ಸ್ಥಾಪನೆ. **ಎನ್.ಐ.ಇ.ಟಿ. ನಂ.:** LEOS/CMG/EMN-08/2025-26, ದಿನಾಂಕ : 25.03.2026; **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ** 14.64 **ಲಕ್ಷ ;** ಇ.ಎಂ.ಡಿ. ರೂ. 29,280/- ; **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ :** 12 ತಿಂಗಳು, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ :** 06.04.2026; **ಮುಕ್ತಾಯದ ದಿನಾಂಕ :** 20.04.2026.

**ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ :** ಎಲ್.ಇ.ಓ.ಎಸ್. ಕ್ಯಾಂಪಸ್, ಪೀಣ್ಯ, ಬೆಂಗಳೂರು – 58 ಇಲ್ಲಿ ಹೊಸ ವಾಚ್‌ಟವರ್‌ಗಾಗಿ ಪ್ರಸ್ತಾಪಿಸಲಾದ ವಿದ್ಯುತ್ ಕಾಮಗಾರಿಗಳು. **ಎನ್.ಐ.ಇ.ಟಿ. ನಂ.:** LEOS/CMG/EMW-11/2025-26, ದಿನಾಂಕ : 25.03.2026; **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ 8.73 ಲಕ್ಷ ;** ಇ.ಎಂ.ಡಿ. ರೂ. 17,460/- ; **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ :** 06 ತಿಂಗಳು, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ :** 01.04.2026; **ಮುಕ್ತಾಯದ ದಿನಾಂಕ :** 14.04.2026.

**ಕೆಲಸದ ಹೆಸರು : ಎನ್.ಐ.ಟಿ. ನಂ. & ದಿನಾಂಕ :** ಎಲ್.ಇ.ಓ.ಎಸ್. ಕ್ಯಾಂಪಸ್‌ಗಳು, ಪೀಣ್ಯ, ಬೆಂಗಳೂರು – 58 ಇಲ್ಲಿನ ಶೌಚಾಲಯಗಳ ನವೀಕರಣಕ್ಕಾಗಿ ವಿದ್ಯುತ್ ಕಾಮಗಾರಿಗಳು. **ಎನ್.ಐ.ಇ.ಟಿ. ನಂ.:** LEOS/CMG/EMW-12/2025-26, ದಿನಾಂಕ : 25.03.2026; **ಟೆಂಡರ್‌ಗೆ ಇಡಲಾದ ಅಂದಾಜು ವೆಚ್ಚ ರೂ.ಗಳಲ್ಲಿ 16.35 ಲಕ್ಷ ;** ಇ.ಎಂ.ಡಿ. ರೂ. 32,700/-; **ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ :** 10 ತಿಂಗಳು, ಟೆಂಡರ್ ಡಾಕ್ಯೂಮೆಂಟ್ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ : **ತೆರೆಯುವ ದಿನಾಂಕ :** 02.04.2026; **ಮುಕ್ತಾಯದ ದಿನಾಂಕ :** 16.04.2026.

ಆಸಕ್ತ ಟೆಂಡರ್‌ಗಳು ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್ : www.isro.gov.in ನಲ್ಲಿ ವಿವರವಾದ ಇ-ಟೆಂಡರ್ ಆಹ್ವಾನ ಸೂಚನೆ (NIET) ಅನ್ನು ನೋಡಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಸಮೂಹ ನಿರ್ದೇಶಕರು
ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಸಿ & ಎಂ.ಜಿ.)
ಯು.ಆರ್.ಎಸ್.ಸಿ., ಬೆಂಗಳೂರು.

**ಮಾಗಡಿ ಯೋಜನಾ ಪ್ರಾಧಿಕಾರ**
ನಂ. 297/5588, ಬಾಗೇಗೌಡ ಬಡಾವಣೆ, ತಿರುಮಲೆ ರಸ್ತೆ, ಮಾಗಡಿ ಟೌನ್
ಬೆಂಗಳೂರು ದಕ್ಷಿಣ ಜಿಲ್ಲೆ – 562120. ದೂರವಾಣಿ ಸಂಖ್ಯೆ: 2774 5057

ಸಂಖ್ಯೆ: ಮಾಯೋಪ್ರಾ/ತಾ.ವ/ಪ್ರಾ.ಪ್ರ.ಪ/159&160/2025-26/1225 ದಿನಾಂಕ: 31.03.2026

**ಪ್ರಕಟಣೆ**

ಮಾಗಡಿ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಈ ಕೆಳಕಂಡ ಅರ್ಜಿದಾರರು ಪ್ರಸ್ತಾಪಿತ ಪ್ರದೇಶದಲ್ಲಿ **'ಶೈಕ್ಷಣಿಕ ಸಂಸ್ಥೆ'** ಉದ್ದೇಶದ ಕಟ್ಟಡ ಕಟ್ಟಲು ಸಂಬಂಧಿಸಿದ ಸ್ಥಳೀಯ ಸಂಸ್ಥೆಯಿಂದ ಕಟ್ಟಡ ಪರವಾನಗಿ ಪಡೆಯುವ ಸಂಬಂಧ ಈ ಕಛೇರಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುತ್ತಾರೆ. ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

| ಅರ್ಜಿದಾರರ ಹೆಸರು | ತಾಲ್ಲೂಕು, ಹೋಬಳಿ, ಗ್ರಾಮ | ಸರ್ವೆ ನಂ. | ವಿಸ್ತೀರ್ಣ (ಎಕರೆ/ ಗುಂಟೆ) | ಉದ್ದೇಶ | ಸ್ವತ್ತಿನ ಸಂಖ್ಯೆ ಮತ್ತು ಪಿ.ಐ.ಡಿ ನಂ. |
|---|---|---|---|---|---|
| ಶ್ರೀಮತಿ ಊರ್ಮಿಳಾದೇವಿ ಆರ್ ಕೋಂ. ಹೆಚ್. ರಂಗನಾಥ್ | ಮಾಗಡಿ ತಾಲ್ಲೂಕು, ಕಸಬಾ ಹೋಬಳಿ, ಬಾಚೇನಹಟ್ಟಿ ಗ್ರಾಮ. | 62/3<br>62/5 | 03ಎ-00ಗು<br>00ಎ-24ಗು<br>**03ಎ-24ಗು** | ಶೈಕ್ಷಣಿಕ Educational and Health Institutions (School/ College) | ಸ್ವತ್ತಿನ ಸಂಖ್ಯೆ 169, ಪಿ.ಐ.ಡಿ ನಂ. 152900300400320132 |
| ಶ್ರೀಮತಿ ಮಂಜುಳ ಡಿ. ಎಸ್ ಕೋಂ. ಬಿ. ಎಸ್. ಚಂದ್ರಕಾಂತ, | ಮಾಗಡಿ ತಾಲ್ಲೂಕು ಕಸಬಾ ಹೋಬಳಿ ದೋಣಕುಪ್ಪೆ ಗ್ರಾಮ. | 60/11<br>60/12<br>60/13 | 01ಎ-30.04ಗು<br>01ಎ-08.4ಗು<br>02ಎ-00.04ಗು<br>**04ಎ-38.12ಗು** | ಶೈಕ್ಷಣಿಕ Educational and Health Institutions | ಸ್ವತ್ತಿನ ಸಂಖ್ಯೆ 230, ಪಿ.ಐ.ಡಿ ನಂ. 152900302701120270 |

ಸದರಿ ಪ್ರಸ್ತಾವನೆಗಳ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಲಿಖಿತವಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– **ಸದಸ್ಯ ಕಾರ್ಯದರ್ಶಿ ಹಾಗೂ ಜಂಟಿ ನಿರ್ದೇಶಕರು**
ಮಾಗಡಿ ಯೋಜನಾ ಪ್ರಾಧಿಕಾರ, ಮಾಗಡಿ.

DIPR/BSD/01/SA/2025-26

ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

**PUBLIC NOTICE**

**PUBLIC NOTICE**

Public are hereby notified that my client proposes to purchase the below mentioned Property from **Mr. Manikanta C.V,** Son of Mr. Venkateshappa, No. 259, 2nd Floor Door No. 22, Opp. Kalvari Betta, Church Kaveri Layout, H.A. Farm Post, Mariyanna Palya Bangalore - 560 024, who has represented that he had purchased the schedule Property from his vendors Sri. Muniswaamy Reddy and others in terms of a Sale Deed dated 31/01/2011 registered as Document No. 3751/2010-11 in Book-I and stored in CD.No.HSRD58 in the office of the Sub Registrar, Hesaraghatta, Bangalore. Person/s objecting for the proposed purchase or having any right in the Schedule Property may lodge their objections and/or claims with the undersigned along with supporting documentary evidence within Seven (7) days from the date of this publication and objections and/or claims received thereafter will not bind my client and my client will proceed to purchase the below mentioned property as if there are no claimants/objections.

**SCHEDULE**

Residential Vacant Site bearing No.65, carved in Sy. No. 246 (Old Sy. No. 63/1), duly converted for residential purposes vide Conversion Order bearing No. ALN(NAH)SR-14/2008-09 dated 31/12/2008 issued by The Special Deputy Commissioner, Bangalore District, Bangalore, measuring East to West 40 Feet and North to South 30 Feet, in all measuring 1200 Sq. Feet in the layout known as **'PARK DALE PHASE-II',** situated at Adde Vishwanathapura Village, Hesaraghatta Hobli, Bangalore North Taluk and presently bearing PID No. 150200200600303217, Property No. 2060/1023/65 of Adde Vishwanathapura Village, Yelahanka Block, Bangalore District, in the records of Rajanukunte Grama Panchayath and bounded by: East: Site No.54, West : 30 Feet Road, North : Site No.64, South : Site No.66,

**Mr. K.P. RUPESH KUMAR,**
**M/s. LAW CORP,**
Advocates & Consultants,
No.G3, Ground Floor, Mohan Towers,
No. 98/2-27, Residency Road, Bangalore / KGF.
(M) 9886761765

BANGALORE
Date : 01/04/2026

**NOTICE**

Mr. Abhishek Devaraj Chavati holder of Indian passport No. Y5637129 issued at Bengaluru on 12/06/2023-valid up to 11/06/2033 and Ms. Thangalakshmi Thangam holder of indian passport No.X8690604 issued at Chennai on 01/05/2023 valid up to 30/04/2033, intend to marry each other. in case of any objections, please contact Marriage Officer, indian Embassy Qatar within 30 days of publishing.
cons.doha@mea.gov.in,
Tel - 00974-44255777

**REAL ESTATE SELLING**

**House**

**J P Nagar**

**J.P.NAGAR 3RD** Phase 30x40 East facing old house (Mini_forest) clear title, Suraj Realtors-9845232711

**Jayanagar**

**RAGGIGUDDA 30X40** North BDA, clear title, old house, near Metro Station (Agents Excuse) Murali-9845232711

**Industrial & Factory**

**Tumkur Road**

**SALE, 9.5 Acres** Industrial Converted Land Suitable for Warehouse, Industry, Education near Dabaspet. NAIK: 9141326819

CONNECT

ಅದ್ಧೂರಿ ಉದ್ಘಾಟನೆ

ನಮ್ಮ 3ನೇ ಮಳಿಗೆ

MYSORE SILKS ಸೀರೆ ಉತ್ಸವ By Sulakshmi Silks

Opening Offer 60% off
ON PURE MYSORE CREPE SILK SAREE

ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ
ನಮ್ಮ ಹೊಸ ಮಳಿಗೆಯಲ್ಲೆ 1 ರಿಂದ 10ನೇ ಏಪ್ರಿಲ್ 2026

SULAKSHMI SILKS

ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ

ಸಂಪರ್ಕಿಸಿ: 99727 18898 | 93531 38343 | 9886306643 | 96631 27606
ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

**BUILDERS ESSENTIAL**

**Water Proofing**

**'WE-FIX' LEAKING** ROOF, SUMP, SKYLIGHT, BATHROOM, TILING, HOUSE PAINTING, ROOF COOL EPOXY COATING. MACBOND. 9448572697

**PERSONAL**

**Change of Name**

**I ASHOKA** THIMMAIAH. R/a. # 805/C, 15th Cross, 7th block, Jayanagar West, Bangalore- 560082, have changed my name from ASHOKA THIMMAIAH to ASHOK THIMMAIAH vide affidavit dated 01/04/2026 before notary Muhammad Hussain. K, Bangalore.

**CHANGE OF NAME**

I, **ANJALI ANTONY,** residing at Flat No. 123, Ranka View Apartment, 51, Richmond Road, Trinity Circle, Rathna Avenue, Bengaluru-560025, have changed my name to **ANJALI ABRAHAM RAMAPURAM** vide affidavit dated 01-04-2026 before notary C.V. Earappa, Bengaluru.

**CAUTION NOTICE**

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

# ಮಹಾರಾಣಿ ಕ್ಲಸ್ಟರ್ ವಿ.ವಿಯಲ್ಲಿ ಅಕ್ರಮ: ಆರೋಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಲೋಕಾಯುಕ್ತ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉನ್ನತ ಶಿಕ್ಷಣ ಇಲಾಖೆಗೆ ದೂರು ನೀಡಲಾಗಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಬಿವಿಪಿ ಪ್ರಾಂತ್ಯ ಕಾರ್ಯದರ್ಶಿ ಗೋಪಿ ರಂಗಸ್ವಾಮಿ, 'ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಇವೈಟಿ ಟಾಕ್ಸ್ ಹೆಸರಿನಲ್ಲಿ ನಕಲಿ ಶೈಕ್ಷಣಿಕ ಚಟುವಟಿಕೆಯನ್ನು ಸೃಷ್ಟಿಸಿ, ಹಣ ಲೂಟಿ ಮಾಡಲಾಗಿದೆ. ಉದ್ಯಮದ ತಜ್ಞರು ಹಾಗೂ ಅಕಾಡೆಮಿಕ್ ತಜ್ಞರು ಉಪನ್ಯಾಸ ನೀಡಿದ್ದಾರೆಂದು ತಲಾ ₹48 ಸಾವಿರ ಹಣ ಪಾವತಿಸಲಾಗಿದೆ. ಆದರೆ ವಾಸ್ತವದಲ್ಲಿ ಇಂತಹ ಯಾವುದೇ ಕಾರ್ಯಕ್ರಮಗಳು ನಡೆದೇ ಇಲ್ಲ' ಎಂದು ದೂರಿದರು.

'ವಿಶ್ವವಿದ್ಯಾಲಯದಲ್ಲಿ ನಕಲಿ ಚಟುವಟಿಕೆಗಳ ಮೂಲಕ ಸುಮಾರು ₹2 ಕೋಟಿಗೂ ಹೆಚ್ಚು ಹಣ ಲೂಟಿ ಮಾಡಲಾಗಿದೆ. ನಕಲಿ ಬಿಲ್, ಜಿಎಸ್‌ಟಿ ಜಾಲದ ಮೂಲಕ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ವಸ್ತುಗಳ ಖರೀದಿ ಮತ್ತು ಸೇವೆಗಳ ಹೆಸರಿನಲ್ಲೂ ಅಕ್ರಮ ನಡೆದಿದೆ. ಸುಮಾರು ₹1.83 ಲಕ್ಷ ಬಿಲ್‌ಗಳನ್ನು ನಕಲಿ ದಾಖಲೆಗಳ ಮೂಲಕ ಸೃಷ್ಟಿಸಲಾಗಿದೆ' ಎಂದು ಆರೋಪಿಸಿದರು.

'ಈ ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳನ್ನು ಕೂಡಲೇ ಅಮಾನತುಗೊಳಿಸಿ, ಹಣ ವಸೂಲಿ ಮಾಡಬೇಕು. ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ಪಾರದರ್ಶಕತೆ ಕಾಪಾಡಲು, ಸಾರ್ವಜನಿಕರ ತೆರಿಗೆ ಹಣದ ಲೂಟಿ ತಡೆಯಲು ಸರ್ಕಾರ ಮಧ್ಯಪ್ರವೇಶ ಮಾಡಬೇಕು' ಎಂದು ಒತ್ತಾಯಿಸಿದರು.

## ಗೂಂಡಾಗಿರಿ: ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪೊಲೀಸ್ ಪಬ್ಲಿಕ್ ಪ್ರೆಸ್ ಆರ್ಮಿ ಟ್ರಸ್ಟ್' ಹೆಸರಿನಲ್ಲಿ ಗೂಂಡಾಗಿರಿ ಮಾಡುತ್ತಿದ್ದ ಆರೋಪದಡಿ ದಾಖಲಾಗಿರುವ ಪ್ರಕರಣ ರದ್ದುಪಡಿಸುವಂತೆ ಕೋರಿ ರೌಡಿ ಶೀಟರ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ತುಮಕೂರಿನ ಪಿ.ಎಚ್.ಕಾಲೊನಿಯ ಶನ್ನು ಅಲಿಯಾಸ್ ಮೊಹಮ್ಮದ್ ಕಲ್ಕಂದಮ್, ಬೆಂಗಳೂರಿನ ಉಮರ್ ಬಾಗ್ ಲೇ ಔಟ್‌ನ ಗೌಸ್ ಪಾಷಾ ಹಾಗೂ ಆಶಿಯಾ ರಿನಯ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಪೀಠ, 'ಈ ಟ್ರಸ್ಟ್ ನಡೆಸಲು ನಿಮಗೆ ಅಧಿಕಾರ ನೀಡಿದವರು ಯಾರು? ದೇಣಿಗೆ ಹೆಸರಿನಲ್ಲಿ ಏನು ಬೇಕಾದರೂ ಮಾಡಬಹುದೇ' ಎಂದು ಕಿಡಿಕಾರಿ ಅರ್ಜಿ ವಜಾಗೊಳಿಸಿತು.

**ಪ್ರಕರಣ:** 'ಅರ್ಜಿದಾರರು ನಿಮ್ಮ ದೂರುಗಳನ್ನು ಆರ್ಮಿ ಸದಸ್ಯರಿಗೆ ಹೇಳಿದರೆ ಸಮಸ್ಯೆ ಬಗೆಹರಿಸುತ್ತೇವೆ ಎಂದು ಸಾರ್ವಜನಿಕ ವಲಯದಲ್ಲಿ ಗೂಂಡಾಗಿರಿ ಮಾಡುತ್ತಿದ್ದರು' ಎಂಬುದು ಆರೋಪ.

ಈ ಸಂಬಂಧ ತುಮಕೂರಿನ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ, ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) ಕಲಂ 204, 353(1) (ಬಿ) ಮತ್ತು 190ರ ಅಡಿಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಲಾಗಿದೆ.

## ಎಸ್‌ಟಿಆರ್‌ಆರ್‌ಗೆ ಪರಿಹಾರ: ಗೃಹ ಸಚಿವರಿಗೆ ಮನವಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಬೆಂಗಳೂರು ಸ್ಯಾಟಲೈಟ್ ಟೌನ್ ರಿಂಗ್ ರೋಡ್ (ಎಸ್‌ಟಿಆರ್‌ಆರ್) ಯೋಜನೆಗೆ ಭೂಸ್ವಾಧೀನ ಮಾಡಿಕೊಂಡಿರುವ ಜಾಗಕ್ಕೆ ತುರ್ತು ಪರಿಹಾರ ನೀಡಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಮನವಿ ಮಾಡಿದರು.

ಸಂಸತ್ ಭವನದಲ್ಲಿ ಬುಧವಾರ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಅವರು, 'ಯೋಜನೆಗಾಗಿ ಮಾಗಡಿ, ರಾಮನಗರ, ಕನಕಪುರ, ಹಾರೋಹಳ್ಳಿ ಮತ್ತು ಆನೇಕಲ್‌ನಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದರೂ ರೈತರಿಗೆ ಸಂಪೂರ್ಣ ಪರಿಹಾರ ಬಿಡುಗಡೆ ಆಗಿಲ್ಲ. ಈ ವಿಳಂಬದಿಂದಾಗಿ, ರೈತರು ಹಾಗೂ ಭೂಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ವಿಷಯವನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರ ಗಮನಕ್ಕೂ ತರಲಾಗಿದೆ. ಈ ಯೋಜನೆಗೆ ಸಂಬಂಧಿಸಿದ ಅಗತ್ಯ ಅನುಮೋದನೆಗಳನ್ನು ಪಡೆಯಲಾಗಿದೆ. ಭೂ ಪರಿಹಾರ ಬಿಡುಗಡೆಗೆ ತುರ್ತು ಕ್ರಮ ಕೈಗೊಳ್ಳಬೇಕು' ಎಂದು ಕೋರಿದರು.

ಅಮಿತ್ ಶಾ ಪ್ರತಿಕ್ರಿಯಿಸಿ,' ಈ ವಿಷಯದ ಬಗ್ಗೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮಾಲೋಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

## 'ದಿ ರಿಯಲ್ ಪ್ರಜಾಕೀಯ' ಆ್ಯಪ್ ಬಿಡುಗಡೆ

**ಬೆಂಗಳೂರು:** ಪ್ರಜಾಕೀಯ ಪಕ್ಷದ ಸಂಸ್ಥಾಪಕ ಚಿತ್ರನಟ ಉಪೇಂದ್ರ ಅವರು ಬುಧವಾರ 'ದಿ ರಿಯಲ್ ಪ್ರಜಾಕೀಯ' ಎಂಬ ಆ್ಯಪ್ ಅನ್ನು ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಅವರು, 'ಏಪ್ರಿಲ್ 1 ಮೂರ್ಖರ ದಿನ ಎನ್ನುವ ಬದಲು ಬುದ್ಧಿವಂತರ ದಿನವನ್ನಾಗಿ ಆಚರಿಸಬೇಕು. ಆದ್ದರಿಂದ ನಮ್ಮ ಪಕ್ಷದ ಆ್ಯಪ್ ಅನ್ನು ಇದೇ ದಿನ ಬಿಡುಗಡೆ ಮಾಡುತ್ತಿದ್ದೇವೆ. ಈಗ ಏನೇ ಮಾಡಿದರೂ ಕಷ್ಟ. ನಾವು ನೇರವಾಗಿ ಮಾತನಾಡಿದರೂ ಎಡ, ಬಲ ಎಂಬುದಾಗಿ ಯೋಚಿಸುತ್ತಾರೆ. ಆದ್ದರಿಂದ ನಾನು ನೇರವಾಗಿ ಮಾತನಾಡುತ್ತೇನೆ' ಎಂದರು.

'ಜೀವನದಲ್ಲಿ ನಾವು ಸ್ವತಂತ್ರವಾಗಿರಬೇಕು ಅಂದುಕೊಂಡೇ ಒಬ್ಬರ ಮೇಲೆ ಅವಲಂಬನೆ ಆಗಿರುತ್ತೇವೆ. ಒಬ್ಬರ ಮೇಲೆ ಒಬ್ಬರೂ ಅವಲಂಬನೆ ಆಗಿರಬೇಕು. ಆದರೆ ಎಷ್ಟರ ಮಟ್ಟಿಗೆ ಅವಲಂಬನೆ ಆಗಿರುತ್ತೇವೆ ಎಂಬುದು ಬಹಳ ಮುಖ್ಯವಾಗುತ್ತದೆ. ಆದ್ದರಿಂದ ನಾವು ಯಾರ ಮೇಲೂ ಅವಲಂಬನೆ ಆಗದೇ ಇದ್ದರೆ ಸಮಸ್ಯೆಗಳು ಕಡಿಮೆ ಇರುತ್ತವೆ' ಎಂದು ತಿಳಿಸಿದರು.

'ನಾನು ಪ್ರಜಾಕೀಯ ಪಕ್ಷ ಸ್ಥಾಪಿಸಿದ್ದಕ್ಕೆ ಬಹಳ ತೊಂದರೆಗಳನ್ನು ಅನುಭವಿಸಿದ್ದೇನೆ. ಆದ್ದರಿಂದ ಈಗ ಈ ಆ್ಯಪ್ ಮೂಲಕ ರಿಯಲ್ ಪ್ರಜಾಕೀಯ ಎಂದರೇನು ಎಂಬುದು ನಿಮಗೆ ಗೊತ್ತಾಗಲಿದೆ' ಎಂದರು.

**National Dairy Development Board**
PB No. 40, Anand, Gujarat-388001, Tel: 02692-260 148/149/160 Fax: 02692-260 159
Website: http://www.nddb.coop, Email: purchase@nddb.coop
INVITATION FOR BIDS (IFB) / LOCAL COMPETITIVE BIDDING (LCB)
Bids are invited on behalf of Service Recipients/ NDDB from eligible bidders for the works listed below:

| Sl. No. | Description of Works/ Bid Reference | Estd.Cost (₹) incl GST /Duration | Event Start / Close Date | Bid Submission / Opening Date & Time |
|---|---|---|---|---|
| A | Civil, Structural, Water Supply, Sanitary & Other Misc. works including Internal Electrification works for: | | | |
| I | 4 LLPD Dairy, 30 MTPD SMP & 200 TPD CFP – Kuppam, Andhra Pradesh. NDDB/HO/Purchase/1/26-27/ET/1[Civil II-Kuppam] | 9000 Lakh / 15 Months | 08.04.26 29.04.26 | 29.04.26 15:00 hrs. 29.04.26 15:30 hrs. |
| B | Design, Supply, Installation, Testing and Commissioning of the following: | | | |
| I | 30 MTPD SMP Powder Plant at Kuppam, Andhra Pradesh. NDDB/HO/Purchase/2/26-27/ET/2[PP-Kuppam] | 3000 Lakh / 15 Months | 03.04.26 24.04.26 | 24.04.26 15:00 hrs. 24.04.26 15:30 hrs. |
| II | 200 TPD (Exp. to 400 TPD) Cattle Feed Plant at Kuppam, Andhra Pradesh. NDDB/HO/Purchase/3/26-27/ET/3[CFP-Kuppam] | 2300 Lakh / 12 Months | 07.04.26 28.04.26 | 28.04.26 15:00 hrs. 28.04.26 15:30 hrs. |
| III | 11KV /433 V sub-station at Davanagere, Karnataka. NDDB/HO/Purchase/4/26-27/ET/4[Substation-Davanagere] | 412 Lakh / 08 Months | 02.04.26 23.04.26 | 23.04.26 15:00 hrs. 23.04.26 15:30 hrs. |
| IV | Process vessels & transfer lines for Vaccine Facility, OBPI Berhampur (Odisha) NDDB/HO/Purchase/5/26-27/ET/5[EQPT-Berhampur] | 700 Lakh / 06 Months | 07.04.26 28.04.26 | 28.04.26 15:00 hrs. 28.04.26 15:30 hrs. |
| V | 11KV /433 V sub-station at FPP, Amritsar, Punjab. NDDB/HO/Purchase/6/26-27/ET/6[Substation-Amritsar] | 330 Lakh / 08 Months | 02.04.26 23.04.26 | 23.04.26 15:00 hrs. 23.04.26 15:30 hrs. |
| VI | Refrigeration system for Cold stores at Davanagere, Karnataka. NDDB/HO/Purchase/7/26-27/ET/7[Refri II-Davangere] | 1850 Lakh / 12 Months | 03.04.26 24.04.26 | 24.04.26 15:00 hrs. 24.04.26 15:30 hrs. |

For further details pertaining to IFB and for downloading the bid document, please visit these websites : www.nddb.coop, and www.mstcecommerce.com/eprocn For any clarification please contact Group Head (Purchase), NDDB, Anand 388001
**NB: Any corrigendum/modification etc. will be posted only on these websites.**

## ಸಾಂಸ್ಕೃತಿಕ ಮುನ್ನೋಟ

### ವಾರ್ಷಿಕ ಸಂಗೀತ ಉತ್ಸವ

ಬೆಂಗಳೂರು: ರಾಜಗುರು ಸ್ಮೃತಿ ವತಿಯಿಂದ ಇದೇ 4ರಂದು ಸಂಜೆ 6 ಗಂಟೆಗೆ ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದ ಖಿಂಚ ಸಭಾಂಗಣದಲ್ಲಿ ವಾರ್ಷಿಕ ಸಂಗೀತೋತ್ಸವ ಹಮ್ಮಿಕೊಳ್ಳಲಾಗಿದೆ.

ಮೋಹನ್ ಖಾನ್ ಅವರಿಂದ ಸಿತಾರ್ ವಾದನ್ ನಡೆಯಲಿದೆ. ಅನುರಾಧಾ ಕುಬೇರ್ ಅವರು ಗಾಯನ ಪ್ರಸ್ತುತಪಡಿಸಲಿದ್ದಾರೆ. ತಬಲಾದಲ್ಲಿ ಸುಮಿತ್ ನಾಯ್ಕ್, ರೂಪಕ್ ಕಲ್ಲೂರ್ಕರ್ ಹಾಗೂ ಹಾರ್ಮೋನಿಯಂನಲ್ಲಿ ಸೌಮಿತ್ರ ಕ್ಷೀರಸಾಗರ್ ಅವರು ಸಾಥ್ ನೀಡಲಿದ್ದಾರೆ.

ಎಂ.ಎಸ್.ಶೀಲಾ

### ರಾಮನವಮಿ ಸಂಗೀತೋತ್ಸವ

ಬೆಂಗಳೂರು: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ '88ನೇ ಶ್ರೀ ರಾಮನವಮಿ ಸಂಗೀತೋತ್ಸವ'ದಲ್ಲಿ ಇದೇ 3ರಂದು ಸಂಜೆ 6.30ರಿಂದ ಶಿವಶ್ರೀ ಸ್ಕಂದಪ್ರಸಾದ್ ಮತ್ತು ಸಂಗಡಿಗರಿಂದ ಸಂಗೀತ ಕಛೇರಿ ನಡೆಯಲಿದೆ.

4ರಂದು ಸಂಜೆ 6.30ಕ್ಕೆ ಸಂದೀಪ್ ನಾರಾಯಣ್, ಮತ್ತೂರ್ ಶ್ರೀನಿಧಿ, ಕೆ.ಯು. ಜಯಚಂದ್ರ ರಾವ್ ಹಾಗೂ ಎಸ್. ಕೃಷ್ಣ ಅವರಿಂದ ಸಂಗೀತ ಕಛೇರಿ ಹಮ್ಮಿಕೊಳ್ಳಲಾಗಿದೆ. 5ರಂದು ಸಂಜೆ 6.30ಕ್ಕೆ ರಂಜನಿ ಮತ್ತು ಗಾಯತ್ರಿ, ಚಾರುಮತಿ ರಘುರಾಂ, ದಿಲ್ಲಿ ಸಾಯಿರಾಂ ಹಾಗೂ ಎಸ್. ಕೃಷ್ಣ ಅವರಿಂದ ಸಂಗೀತ ಕಛೇರಿ ಆಯೋಜಿಸಲಾಗಿದೆ.

ಶಿವಶ್ರೀ ಸ್ಕಂದಪ್ರಸಾದ್

### ಸಂಗೀತ ಕಛೇರಿ

ಬೆಂಗಳೂರು: ಶ್ರೀ ರಾಮ ಸೇವಾ ಮಂಡಳಿ ಟ್ರಸ್ಟ್ 'ಎಸ್‌ವಿಎನ್ ಸ್ಮಾರಕ ವಾರ್ಷಿಕ ಸಂಗೀತ ಉತ್ಸವ'ದ ಪ್ರಯುಕ್ತ ಇದೇ 4ರಂದು ಮಧ್ಯಾಹ್ನ 3.15ರಿಂದ ನೆಟ್ಟಿಗೆರೆ ಗ್ರಾಮದಲ್ಲಿರುವ ಎಸ್‌ವಿಎನ್ ಮೆಮೋರಿಯಲ್ ಹಾಲ್‌ನಲ್ಲಿ ಎರಡು ಸಂಗೀತ ಕಛೇರಿ ಹಮ್ಮಿಕೊಂಡಿದೆ.

ಮೊದಲ ಸಂಗೀತ ಕಛೇರಿಯಲ್ಲಿ ಅಂಜಲಿ ಶ್ರೀರಾಮ್ ಗಾಯನ ಪ್ರಸ್ತುತಪಡಿಸಲಿದ್ದಾರೆ. ಪಿಟೀಲ್‌ನಲ್ಲಿ ಅಚ್ಯುತ ರಾವ್, ಮೃದಂಗದಲ್ಲಿ ಬಿ.ಎಸ್. ಪ್ರಶಾಂತ್ ಸಾಥ್ ನೀಡಲಿದ್ದಾರೆ. ಎರಡನೇ ಸಂಗೀತ ಕಛೇರಿಯಲ್ಲಿ ಎಂ.ಎಸ್. ಶೀಲಾ ಅವರಿಂದ ಗಾಯನ ನಡೆಯಲಿದೆ. ಪಿಟೀಲ್‌ನಲ್ಲಿ ಬಿ.ಆರ್. ರಘು, ಮೃದಂಗದಲ್ಲಿ ಆನೂರು ಅನಂತಕೃಷ್ಣ ಶರ್ಮ ಹಾಗೂ ಘಟದಲ್ಲಿ ಓಂಕಾರ್ ರಾವ್ ಸಾಥ್ ನೀಡಲಿದ್ದಾರೆ.

### 'ಪುಣ್ಯಕೋಟಿ' ಯಕ್ಷಗಾನ ನೃತ್ಯರೂಪಕ

ಬೆಂಗಳೂರು: ಕಲಾ ಕದಂಬ ಆರ್ಟ್ ಸೆಂಟರ್ ಇದೇ 4ರಂದು ಸಂಜೆ 4.30ಕ್ಕೆ ಎನ್.ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ.ಕಲಾಭವನದಲ್ಲಿ 'ಪುಣ್ಯಕೋಟಿ' ಯಕ್ಷಗಾನ ನೃತ್ಯ ರೂಪಕ ಪ್ರದರ್ಶನ ಹಮ್ಮಿಕೊಂಡಿದೆ.

ಯಕ್ಷಗಾನ ನೃತ್ಯರೂಪಕ

### ವಂಶಿ ಲಯ ವಾಹಿನಿ ಸಂಗೀತ ಕಛೇರಿ

ಬೆಂಗಳೂರು: ವೈಯಾಲಿಕಾವಲ್ ಎಕ್ಸ್‌ಟೆನ್ಶನ್ ಅಸೋಸಿಯೇಷನ್ ಇದೇ 3ರಂದು ಸಂಜೆ 6 ಗಂಟೆಗೆ ವೈಯಾಲಿಕಾವಲ್‌ನಲ್ಲಿ ಇರುವ ಶ್ರೀರಾಮ ಮಂದಿರದಲ್ಲಿ ವಂಶಿ ಲಯ ವಾಹಿನಿ ಸಂಗೀತ ಕಛೇರಿ ಹಮ್ಮಿಕೊಂಡಿದೆ.

ಬಿ.ಕೆ. ಅನಂತ ರಾಮ್ ಅವರಿಂದ ಕೊಳಲು ವಾದನ, ಜೆ.ಕೆ. ಶ್ರೀಧರ್ ಅವರಿಂದ ಪಿಟೀಲು, ಬಿ.ಎಸ್. ಆನಂದ್ ಅವರಿಂದ ಮೃದಂಗ, ಅಶ್ವತ್ಥನಾರಾಯಣ ಅವರಿಂದ ತಬಲಾ ಹಾಗೂ ಅಭಿಜಿತ್ ಅವರಿಂದ ಮೋರ್ಸಿಂಗ್ ವಾದನ ನಡೆಯಲಿದೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ದೇವರ ನಾಮಸ್ಮರಣೆ, ಮಲ್ಲಿಗೆ ಹೂವಿನ ಸಮರ್ಪಣೆ • ಗಲ್ಲಿ ಗಲ್ಲಿಗಳಲ್ಲಿ ಸಡಗರ

# ಕರಗ ಸಂಭ್ರಮ: ಭಕ್ತರ ಹರ್ಷೋದ್ಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬುಧವಾರ ತಡರಾತ್ರಿ ನಡೆದ ಬೆಂಗಳೂರಿನ ಸಾಂಪ್ರದಾಯಿಕ, ಪ್ರಸಿದ್ಧ ಕರಗ ಉತ್ಸವದ ಸಂಭ್ರಮ, ರಥಗಳ ಮೆರವಣಿಗೆಯ ವೈಭವವನ್ನು ಸಾವಿರಾರು ಜನರು ಕಣ್ತುಂಬಿಕೊಂಡರು. ಎಲ್ಲೆಲ್ಲೂ ಗೋವಿಂದಾ... ಗೋವಿಂದಾ.. ಘೋಷಣೆ ಮೊಳಗಿತ್ತು.

ವೀರಕುಮಾರರ ಉದ್ಘೋಷ, ಭಕ್ತರಿಂದ ಗೋವಿಂದಾ ನಾಮಸ್ಮರಣೆ, ಮಲ್ಲಿಗೆ ಹೂವಿನ ಸಮರ್ಪಣೆಯೊಂದಿಗೆ ನಗರದ ಪೇಟೆಗಳ ಮುಖ್ಯರಸ್ತೆ, ಗಲ್ಲಿಗಳಲ್ಲಿ ಮೆರವಣಿಗೆ ಸಾಗಿತು.

ಅರ್ಚಕ ಎ. ಜ್ಞಾನೇಂದ್ರ ಸ್ವಾಮಿ ಅವರು ಪೂರ್ವ ಪೂಜಾಕ್ರಮಗಳನ್ನು ಪೂರೈಸಿ, ತಿಗಳರಪೇಟೆಯಲ್ಲಿರುವ ಧರ್ಮರಾಯ ಸ್ವಾಮಿ ದೇವಸ್ಥಾನಕ್ಕೆ ಬಂದರು. ಹಸಿ ಕರಗವನ್ನು ಸ್ಥಾಪಿಸಿದ್ದ ಸ್ಥಳದಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು ಪೂರೈಸಿದ ನಂತರ ಮಲ್ಲಿಗೆ ಹೂವಿನಿಂದ ಅಲಂಕೃತಗೊಂಡಿದ್ದ ದ್ರೌಪದಿದೇವಿ ಕರಗ ಉತ್ಸವ ಧರ್ಮರಾಯಸ್ವಾಮಿ ದೇವಸ್ಥಾನದಿಂದ ತಡರಾತ್ರಿ ಹೊರಟಿತು. ಜ್ಞಾನೇಂದ್ರ ಅವರು 16ನೇ ಬಾರಿಗೆ ಕರಗ ಹೊತ್ತರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಧರ್ಮರಾಯಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚಲಕರಿ ನಾರಾಯಣಸ್ವಾಮಿ ಅವರು ಧರ್ಮರಾಯಸ್ವಾಮಿ ದೇವಸ್ಥಾನದ ಅಂಗಳದಲ್ಲಿ ಕರಗಕ್ಕೆ ಪುಷ್ಪಾರ್ಚನೆ ಮಾಡಿದರು.

ಬೆಂಗಳೂರು ಕರಗವೆಂದೇ ಪ್ರಸಿದ್ಧವಾಗಿರುವ ದ್ರೌಪದಿದೇವಿ ಕರಗ ಶಕ್ತ್ಯೋತ್ಸವದ ಅಂಗವಾಗಿ ತಿಗಳರಪೇಟೆ, ನಗರ್ತರಪೇಟೆ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯ ಮುಖ್ಯರಸ್ತೆ ಹಾಗೂ ಗಲ್ಲಿಗಳಲ್ಲಿ ಸಂಭ್ರಮ ಮನೆ ಮಾಡಿತ್ತು. ಸಹಸ್ರಾರು ಸಂಖ್ಯೆಯಲ್ಲಿದ್ದ ವೀರಕುಮಾರರು ದೀ ಧಿತ್ತಿ... ಎಂಬ ಉದ್ಗಾರದೊಂದಿಗೆ ಕತ್ತಿಯನ್ನು ಎದೆಗೆ ಬಡಿದುಕೊಂಡು ನಮಸ್ಕರಿಸಿದರು. ಭಕ್ತರು ಕರಗದ ಮೇಲೆ ಮಲ್ಲಿಗೆ ಹೂವನ್ನು ಚೆಲ್ಲಿದರು. ಹಲವೆಡೆ ಗಲ್ಲಿಗಳಲ್ಲಿ, ಮನೆಯ ಮೇಲೆನಿಂತಿದ್ದ ನಾಗರಿಕರು ಅಲ್ಲಿಂದಲೇ ಮಲ್ಲಿಗೆಯನ್ನು ಎರಚಿ, ಹೂವಿನ ಅಭಿಷೇಕ ಮಾಡಿದರು.

ನಗರ್ತಪೇಟೆ, ಸಿದ್ದಣ್ಣ ಗಲ್ಲಿ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯಿಂದ ಕೆ.ಆರ್. ಮಾರುಕಟ್ಟೆ ತಲುಪಿ, ಮಸ್ತಾನ್ ಸಾಬ್ ದರ್ಗಾಕ್ಕೆ ಭೇಟಿ ನೀಡಿ ಪೂಜೆ ಸ್ವೀಕರಿಸಿತು. ಬಳೇಪೇಟೆ ಹಳೇಗರಡಿ, ಅಣ್ಣಮ್ಮನ ದೇವಾಲಯ, ಕಿಲಾರಿ ರಸ್ತೆ, ಯಲಹಂಕ ಗೇಟ್, ಅವೆನ್ಯೂ ರಸ್ತೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರಪೇಟೆಗಳಲ್ಲಿ ಸಾಗಿತು.

ಕರಗ ಉತ್ಸವ ಹೊರಟ ನಂತರ ಧರ್ಮರಾಯಸ್ವಾಮಿ ಮಹಾರಥೋತ್ಸವ ಮುಖ್ಯ ರಸ್ತೆಗಳಲ್ಲಿ ಸಾಗಿತು. ಭಕ್ತರು ಬಾಳೆಹಣ್ಣನ್ನು ಎಸೆದು ಭಕ್ತಿ ಮೆರೆದರು. ಈ ರಥದ ಹಿಂದೆ ನಗರದ ಹಲವು ಭಾಗಗಳಿಂದ ಆಗಮಿಸಿದ್ದ ನೂರಾರು ತೇರು–ರಥಗಳು, ಪಲ್ಲಕ್ಕಿಗಳು ಸಾಗಿದವು.

ಅವೆನ್ಯೂ ರಸ್ತೆ, ಬಿ.ವಿ.ಕೆ ಅಯ್ಯಂಗಾರ್ ರಸ್ತೆ ಸುತ್ತಮುತ್ತ, ಕರಗ ಸಾಗುವ ಮುಖ್ಯರಸ್ತೆ, ಅಡ್ಡರಸ್ತೆಗಳಲ್ಲಿ ಪಲಾವ್, ಬಿಸಿಬೇಳೆಬಾತ್ ಸೇರಿದಂತೆ ವಿವಿಧ ಭಕ್ಷ್ಯಗಳನ್ನು ವಿತರಿಸಲಾಯಿತು. ಭಕ್ತರಿಗೆ ಪಾನಕ, ಮಜ್ಜಿಗೆಯನ್ನೂ ನೀಡಲಾಯಿತು.

ನಗರದ ತಿಗಳರಪೇಟೆಯ ಧರ್ಮರಾಯಸ್ವಾಮಿ ದೇವಸ್ಥಾನದ ಮುಂಭಾಗ ಬುಧವಾರ ತಡರಾತ್ರಿ ನಡೆದ ದ್ರೌಪದಿದೇವಿ ಕರಗ ಶಕ್ತ್ಯೋತ್ಸವದಲ್ಲಿ ಸೇರಿದ್ದ ಜನಸ್ತೋಮ
ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಕರಗಧಾರಿ ಎ.ಜ್ಞಾನೇಂದ್ರ ಸ್ವಾಮಿ ಅವರು ದೇವಸ್ಥಾನದಿಂದ ಹೊರಬಂದಾಗ ಭಕ್ತರು ಹೂಮಳೆಗರೆದು ಸ್ವಾಗತಿಸಿ, ಸಂಭ್ರಮಿಸಿದರು

## ನಗರದಲ್ಲಿ ಇಂದು

**ಪೊಲೀಸ್ ಧ್ವಜ ದಿನಾಚರಣೆ:** ಅತಿಥಿಗಳು: ಸಿದ್ದರಾಮಯ್ಯ, ಜಿ. ಪರಮೇಶ್ವರ, ಎಂ.ಎ. ಸಲೀಂ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕೆಎಸ್‌ಆರ್‌ಪಿ ಪರೇಡ್ ಮೈದಾನ, ಕೋರಮಂಗಲ, ಬೆಳಿಗ್ಗೆ 8

**ಚಿದಾನಂದ ಮುದ್ದಿ ಅವರ 'ಸಪ್ತಕೋಟಿ' ಪುಸ್ತಕ ಬಿಡುಗಡೆ:** ಗಿರೀಶ್ ರಾವ್ ಹತ್ವಾರ್ (ಜೋಗಿ), ಬಿ. ಸುರೇಶ, ನಾಗರಾಜ್ ಅರೆಹೊಳೆ, ಪೂರ್ಣಿಮಾ ಮಾಳಗಿಮನಿ, ಆಯೋಜನೆ: ಮುದ್ದಿ ಮೈಂಡ್ಸ್, ಸ್ಥಳ: ಡಾ.ಎಂ. ಚಿದಾನಂದ ಮೂರ್ತಿ ಸಭಾಂಗಣ, ವಿಜಯನಗರ, ಬೆಳಿಗ್ಗೆ 10.30

**ದೃಶ್ಯೋತ್ಸವ ವಾರ್ಷಿಕ ಪ್ರದರ್ಶನ:** ಅತಿಥಿಗಳು: ಅನಿಲ್ ರೆಡ್ಡಿ, ಅವನೀಶ್ ಪಾಟಕ್, ಮಧು ರಾವ್, ಬಿ.ಎಲ್. ಶಂಕರ್, ಗುರುರಾಜ ಕರಜಗಿ, ಶಶಿಧರ್ ಎಸ್.ಎನ್., ಆಯೋಜನೆ: ಚಿತ್ರಕಲಾ ಮಹಾವಿದ್ಯಾಲಯ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

**ಶಿವಶರಣೆ ಅಕ್ಕಮಹಾದೇವಿ ಜಯಂತಿ:** ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಅತಿಥಿ: ಲಕ್ಷ್ಮಿ ಆರ್. ಹೆಬ್ಬಾಳಕರ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

**'ಕರ್ನಾಟಕದ ನೂತನ ಮರ್ಯಾದೆಗೇಡು ಹತ್ಯೆ ತಡೆ ಕಾಯ್ದೆ' ಅಗತ್ಯ ಮತ್ತು ಮುಂದಿನ ಹೆಜ್ಜೆಗಳು ಚರ್ಚೆ:** ಭಾಗವಹಿಸುವವರು: ಹುಲಿಕುಂಟೆ ಮೂರ್ತಿ, ನಿರ್ಮಲಾ ಎಂ., ಅಶ್ವಿನಿ ಬೋಧ್, ಮೈತ್ರೇಯಿ ಕೃಷ್ಣನ್, ಆಯೋಜನೆ: ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ, ಸ್ಥಳ: ನಂ. 19, ಭಾರತ್ ಭವನ್, ಇನ್ಫೆಂಟ್ರಿ ರಸ್ತೆ, ಸಂಜೆ 5ರಿಂದ

**88ನೇ ಶ್ರೀರಾಮನವಮಿ ಸಂಗೀತೋತ್ಸವ:** ಸಂಗೀತ ಕಛೇರಿ: ವಿನಾಯಕ ಅನಂತ್ ಹೆಗಡೆ ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ವಿದ್ಯಾಭೂಷಣ, ಪ್ರಾದೇಶಾಚಾರ್, ಬೆಂಗಳೂರು ವಿ. ಪ್ರವಿಣರ್, ರಘುನಂದನ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ



ವಿದ್ಯಾಭೂಷಣ

**ಭರತನಾಟ್ಯ ಪ್ರದರ್ಶನ:** ವೈಷ್ಣವಿ ನಾಟ್ಯಶಾಲಾ ವಿದ್ಯಾರ್ಥಿಗಳು, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 11ನೇ ಮುಖ್ಯರಸ್ತೆ, ಐದನೇ ಬಡಾವಣೆ ಜಯನಗರ, ಸಂಜೆ 5.15

**ಮಹಾದೇವಿಯಕ್ಕನವರಿಗೆ ವಚನ ಪ್ರಣಾಮ:** ಉದ್ಘಾಟನೆ: ಡಿ. ಚೆನ್ನಮಲ್ಲಯ್ಯ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಮಂಟಪ, ಬಸವೇಶ್ವರ ಉದ್ಯಾನ, ಮೂರನೇ ಮುಖ್ಯರಸ್ತೆ, ಕೆಸಿಎಚ್‌ಸಿ ಲೇಔಟ್, ದೊಡ್ಡಬಸ್ತಿ ರಸ್ತೆ, ಕೆಂಚನಪುರ ಕ್ರಾಸ್, ಸಂಜೆ 5.30

**'ನಗೆಹಬ್ಬ' ಕಾರ್ಯಕ್ರಮ:** ಅತಿಥಿಗಳು: ಎಂ.ಎಸ್. ನರಸಿಂಹಮೂರ್ತಿ, ವೈ.ವಿ. ಗುಂಡೂರಾವ್, ಆಯೋಜನೆ: ಜನತಾ ಶಿಕ್ಷಣ ಸಂಸ್ಥೆ, ಸ್ಥಳ: ವಿವೇಕಾನಂದ ಶಾಲಾ ಮತ್ತು ಕಾಲೇಜಿನ ಆವರಣ, ರಾಜಾಜಿನಗರ ಎರಡನೇ ಹಂತ, ಸಂಜೆ 6

**ಪು.ತಿ. ನರಸಿಂಹಾಚಾರ್ ವಿರಚಿತ 'ಶ್ರೀಹರಿ ಚರಿತೆ' ವಾಚನ ಮತ್ತು ವ್ಯಾಖ್ಯಾನ:** ಗಮಕಿ ಕಡಬ ಸುಬ್ರಹ್ಮಣ್ಯ, ಅನಿಲ್ ಭಾರದ್ವಾಜ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

**33ನೇ ಶ್ರೀರಾಮನವಮಿ ಸಂಗೀತೋತ್ಸವ:** ಗಾಯನ: ಅಕ್ಷತಾ ರುದ್ರಪಟ್ಟಣ, ಪಿಟೀಲು: ಸಿ.ವಿ. ಶ್ರುತಿ, ಮೃದಂಗ: ರುಘು ಭಾಗವತ್, ಖಂಜೀರಾ: ಆರ್. ಕಾರ್ತಿಕ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

**ಮುತ್ಯಾಲಮ್ಮ ದೇವಿ ರಥೋತ್ಸವ:** ಹೂವಿನ ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

**ದಾಸಗಾನಾಮೃತ:** ಗಾಯನ: ಸಂಗೀತಾ ಬಾಲು, ಮೃದಂಗ: ಬಾಲಸುಬ್ರಹ್ಮಣ್ಯಂ, ತಬಲಾ: ಅಭಿಜಿತ್, ಜಂಬೆ: ಕೃಷ್ಣಕುಮಾರ್, ಪಿಟೀಲು: ಸ್ಮಿತಾ, ಆಯೋಜನೆ ಮತ್ತು ಸ್ಥಳ: ದೇವಗಿರಿ ರಾಘವೇಂದ್ರ ಸ್ವಾಮಿ ಮಠ, ಬನಶಂಕರಿ, ಸಂಜೆ 7

**ದಾಸರ ಪದಗಳ ಗಾಯನ:** ಅನುಕೃಪ ಆರ್. ಪುರೋಹಿತ್, ಕೀ–ಬೋರ್ಡ್: ಬಿ.ಆರ್. ಪ್ರಕಾಶ್, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

**'ಹೆಸರೆ ಇಲ್ಲದವರು' ನಾಟಕ ಪ್ರದರ್ಶನ:** ನಿರ್ದೇಶನ: ರಾಜಗುರು ಹೊಸಕೋಟೆ, ಆಯೋಜನೆ: ರಂಗ ಪಯಣ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

## 'ಶಿವಕುಮಾರ ಶ್ರೀಗಳ ಆದರ್ಶ ಶಾಶ್ವತ'

ಬೆಂಗಳೂರು: 'ಶಿವಕುಮಾರ ಸ್ವಾಮೀಜಿ ಅವರ ಆದರ್ಶ ಹಾಗೂ ಮಾರ್ಗದರ್ಶನ ಈ ಭೂಮಿ ಇರುವ ತನಕ ಶಾಶ್ವತವಾಗಿ ಇರುತ್ತದೆ' ಎಂದು ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್ ಹೇಳಿದರು.

ಕೃಷ್ಣರಾವ್ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಸಿದ್ಧಗಂಗಾ ಮಠದ ಪೀಠಾಧ್ಯಕ್ಷರಾಗಿದ್ದ ಶಿವಕುಮಾರ ಸ್ವಾಮೀಜಿ ಅವರ 119ನೇ ವರ್ಷದ ಜಯಂತಿ ಕಾರ್ಯಕ್ರಮದಲ್ಲಿ, ಶಿವಕುಮಾರ ಸ್ವಾಮೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದರು.

'ಶಿವಕುಮಾರ ಸ್ವಾಮೀಜಿ ಅವರ ತ್ರಿವಿಧ ದಾಸೋಹ, ಆದರ್ಶ ಸೇವೆಯನ್ನು ಇಡೀ ಜಗತ್ತು ಮೆಚ್ಚಿದೆ. ಅವರ ಸಂದೇಶವನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದರು.

ವಾಯುವಿಹಾರಿಗಳ ಸಂಘದ ಉಪಾಧ್ಯಕ್ಷ ತ್ಯಾಗರಾಜ್, 'ಶಿವಕುಮಾರ ಸ್ವಾಮೀಜಿ ಅವರು ಸರ್ವರಿಗೂ ತಮ್ಮ ಮಠದಲ್ಲಿ ಆಶ್ರಯ ನೀಡಿ, ವಿದ್ಯೆ, ಅನ್ನ ದಾಸೋಹ ಮಾಡಿದರು. ಅವರು ಈ ಶತಮಾನದ ಆದರ್ಶ ಪುರುಷ' ಎಂದರು.

ಕೆಪಿಸಿಸಿ ಹಿಂದುಳಿದ ವಿಭಾಗದ ಪ್ರಧಾನ ಕಾರ್ಯದರ್ಶಿ ಎಚ್.ಸಿ. ಶಾಂತಕುಮಾರ್, 'ದಾಸೋಹ ಯಾವ ರೀತಿಯಲ್ಲಿ ಮಾಡಬೇಕು ಎಂಬುದನ್ನು ಮನುಕುಲಕ್ಕೆ ಸ್ವಾಮೀಜಿ ತೋರಿಸಿ ಕೊಟ್ಟರು. ಸಂಸ್ಕಾರ ನೀಡಿದ ಅವರನ್ನು ಮತ್ತು ಸಮಾಜ ಸುಧಾರಕರನ್ನು ಒಂದು ಧರ್ಮಕ್ಕೆ ಸೀಮಿತಗೊಳಿಸದೆ, ಎಲ್ಲರೂ ಪೂಜಿಸಿ ಆರಾಧಿಸಬೇಕು' ಎಂದರು.

ವಾಯುವಿಹಾರಿಗಳ ಸಂಘದ ಕಾರ್ಯದರ್ಶಿ ಜಯಲಕ್ಷ್ಮಿ, ಖಜಾಂಚಿ ಬಸವರಾಜು, ಬೆಂಗಳೂರು ಮಹಾನಗರ ವೀರಶೈವ ಮಾಹಾಸಭಾ ಅಧ್ಯಕ್ಷ ಬಿಡದಿ ನವೀನ್ ಕುಮಾರ್, ಉಪಾಧ್ಯಕ್ಷೆ ರೇಣುಕಾ ಪ್ರಸಾದ್ ಪಾಲ್ಗೊಂಡಿದ್ದರು.

ಗಂಗಾಂಬಿಕೆ ಮಲ್ಲಿಕಾರ್ಜುನ್ ಅವರು ಶಿವಕುಮಾರ ಸ್ವಾಮೀಜಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು

## 'ಕಗ್ಗ–ಮಂಥನ' ಜನಾರ್ಪಣೆ 4ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಟರಿ ಬೆಂಗಳೂರು ಉದ್ಯೋಗ್ ಸಹಯೋಗದಲ್ಲಿ ಕಲಾವೇದಿಕೆ ಟ್ರಸ್ಟ್ 'ಕಗ್ಗ–ಮಂಥನ' ಶೀರ್ಷಿಕೆಯಡಿ ಡಿ.ವಿ. ಗುಂಡಪ್ಪ (ಡಿವಿಜಿ) ಅವರ ಆಯ್ದ ಕಗ್ಗಗಳ ವಾಚನದ ಜತೆಗೆ, ಭಾವಾರ್ಥವನ್ನು ಚಿತ್ರೀಕರಿಸಿ ಪ್ರಸ್ತುತಪಡಿಸುತ್ತಿದೆ.



ಡಿ.ವಿ. ಗುಂಡಪ್ಪ

ಇದೇ 4ರಂದು ಸಂಜೆ 5.30ಕ್ಕೆ ಪೀಣ್ಯದಲ್ಲಿರುವ ರೋಟರಿ ಬೆಂಗಳೂರು ಉದ್ಯೋಗ್ ಸಭಾಂಗಣದಲ್ಲಿ ಈ ಸರಣಿಯ ಜನಾರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಗ್ಗಗಳು ಕಲಾವೇದಿಕೆ ಯೂಟ್ಯೂಬ್ ವಾಹಿನಿಯಲ್ಲಿ ಲಭ್ಯವಾಗಲಿದೆ.

'ಡಿವಿಜಿ ಅವರು ಸುಮಾರು 945 ಕಗ್ಗಗಳನ್ನು ಬರೆದಿದ್ದಾರೆ. ಅವುಗಳಲ್ಲಿ 250 ಕಗ್ಗಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಡಿವಿಜಿ ಅವರ ಬಗ್ಗೆ ಓದಿಕೊಂಡವರು ಕಗ್ಗಗಳನ್ನು ವಾಚಿಸುತ್ತಾರೆ. ಪ್ರತಿ ಕಗ್ಗಕ್ಕೂ ಚಿತ್ರಕಥೆ ಬರೆದು, ಚಿತ್ರೀಕರಣ ಮಾಡಲಾಗುತ್ತದೆ. ಪ್ರತಿ ವಾರ ಒಂದೊಂದು ಕಗ್ಗವನ್ನು ಯೂಟ್ಯೂಬ್ ವಾಹಿನಿಯಲ್ಲಿ ಪ್ರಸಾರ ಮಾಡಲಾಗುತ್ತದೆ' ಎಂದು ಈ ಸರಣಿಯ ನಿರ್ದೇಶಕ ಶ್ರೀನಾಥ್ ವಸಿಷ್ಠ ತಿಳಿಸಿದರು.

'ಈ ಕಾರ್ಯಕ್ಕೆ ನನ್ನ ಜತೆಗೆ ಸುಂದರ್ ವೀಣಾ, ಕೃಷ್ಣಪ್ರಸಾದ್ ಅವರು ಕೈಜೋಡಿಸಿದ್ದಾರೆ. 'ತಿಮ್ಮ ಗುರುವಿನ ಕಥೆ'ಯ ಮೂಲಕ ಕಗ್ಗದ ಸರಣಿ ಪ್ರಾರಂಭವಾಗಲಿದೆ. ಪ್ರತಿ ಸಂಚಿಕೆ 12ರಿಂದ 15 ನಿಮಿಷ ಇರಲಿದೆ. ಕಗ್ಗವನ್ನು ಕನ್ನಡಿಗರಿಗೆ ಪರಿಣಾಮಕಾರಿಯಾಗಿ ತಲುಪಿಸುವುದು ಈ ಸರಣಿ ಹಿಂದಿನ ಉದ್ದೇಶ' ಎಂದು ವಿವರಿಸಿದರು.

## ಶಿಕ್ಷಣ ಕ್ಷೇತ್ರದಲ್ಲಿ ಗೊಂದಲ ಸೃಷ್ಟಿ ಬೇಡ: ಬಿಜೆಪಿ

ಬೆಂಗಳೂರು: ಹಿಂದಿ ಭಾಷೆ ವಿಚಾರದಲ್ಲಿ ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರವು, ರಾಜಕೀಯ ಲಾಭಕ್ಕಾಗಿ ಶಿಕ್ಷಣ ಕ್ಷೇತ್ರವನ್ನು ಪ್ರಯೋಗಾಲಯವಾಗಿ ಮಾಡುವುದನ್ನು ನಿಲ್ಲಿಸಬೇಕು ಎಂದು ಬಿಜೆಪಿ ಶಿಕ್ಷಣ ಪ್ರಕೋಷ್ಠದ ಮುಖಂಡರು ಆಗ್ರಹಿಸಿದರು.

'ತ್ರಿಭಾಷಾ ಸೂತ್ರದ ಅಡಿಯಲ್ಲಿ ವಿದ್ಯಾರ್ಥಿಗಳು ಹಿಂದಿ ಭಾಷೆ ಕಲಿಯಬೇಕು ಎಂದು ಕಾಂಗ್ರೆಸ್ ಹೇಳಿದರೂ, ಚರ್ಚೆ ಇಲ್ಲದೆ ಎಸ್‌ಎಸ್‌ಎಲ್‌ಸಿಯಲ್ಲಿ ಅಂಕಗಳನ್ನು ಬಿಟ್ಟು, ಗ್ರೇಡ್ ನೀಡುವುದಾಗಿ ಘೋಷಿಸಿರುವುದು ಶಿಕ್ಷಣ ವಲಯದಲ್ಲಿ ಗೊಂದಲ ಸೃಷ್ಟಿಸಿದೆ' ಎಂದು ಪ್ರಕೋಷ್ಠದ ರಾಜ್ಯಸಂಚಾಲಕ ಸಿ.ಬಿ.ಶಶಿಧರ್ ಹಾಗೂ ರಾಜ್ಯ ಸಮಿತಿ ಸದಸ್ಯ ಕೆ. ಹರೀಶ್ ಅವರು ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

'ಎಸ್‌ಎಸ್‌ಎಲ್‌ಸಿ ಗಣಿತ ಪ್ರಶ್ನೆ ಪತ್ರಿಕೆಯಲ್ಲಿ ಬಾರ್ ಕೋಡ್ ಮುದ್ರಣದಿಂದ ತಾಂತ್ರಿಕ ದೋಷ ಉಂಟಾಗಿ ಕೆಲ ಪ್ರಶ್ನೆಗಳು ಸ್ಪಷ್ಟವಾಗಿ ಕಾಣಲಿಲ್ಲ ಎನ್ನುವ ದೂರುಗಳಿವೆ. ಆ ಪ್ರಶ್ನೆಗಳಿಗೆ ಕೃಪಾಂಕ ನೀಡಬೇಕು. ಪರೀಕ್ಷಾ ವ್ಯವಸ್ಥೆ ಗೊಂದಲದ ಕುರಿತು ಸರ್ಕಾರ ತಕ್ಷಣ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಮುಂದಿನ ದಿನಗಳಲ್ಲಿ ಇಂತಹ ಅವ್ಯವಸ್ಥೆಗಳು ಮರುಕಳಿಸದಂತೆ ಪರೀಕ್ಷೆಯನ್ನು ಇನ್ನಷ್ಟು ಪಾರದರ್ಶಕ ಹಾಗೂ ಜವಾಬ್ದಾರಿಯುತವಾಗಿ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

## ಸೇತುವೆಗೆ ಡಿಕ್ಕಿ: ಹೊತ್ತಿ ಉರಿದ ಕಾರು

ಪ್ರಜಾವಾಣಿ ವಾರ್ತೆ

ಹುಳಿಯಾರು: ಹೋಬಳಿಯ ಕೋರಗೆರೆ ಬಳಿ ಬುಧವಾರ ಸಂಜೆ ರಾಷ್ಟ್ರೀಯ ಹೆದ್ದಾರಿಯ ಸೇತುವೆಗೆ ಡಿಕ್ಕಿ ಹೊಡೆದ ಕಾರು ಹೊತ್ತಿ ಉರಿದಿದೆ. ಭೀಕರ ಅಪಘಾತದಲ್ಲಿ ಚಾಲಕ ಸ್ಥಳದಲ್ಲಿಯೇ ಮೃತಪಟ್ಟು, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಚಾಲಕ, ತಿಮ್ಮನಹಳ್ಳಿ ಬಳಿಯ ಬೆಳವಾಡಿಯ ಕುಶಾಲಪ್ಪರ ರಾಮಯ್ಯ (55) ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಗುಬ್ಬಿ ತಾಲ್ಲೂಕು ಹಾಗಲವಾಡಿ ಹೋಬಳಿ ಗುಡ್ಡೇನಹಳ್ಳಿ ಬಳಿಯ ಚಿತ್ರದೇವಹಟ್ಟಿ ಗ್ರಾಮದ ಗೌಡ ಮಹೇಶ್ (40), ಬಿಳಿಕಲ್ ಹಟ್ಟಿಯ ಬಸವರಾಜು(50), ಬೆಳವಾಡಿ ಗ್ರಾಮದ ಕಾಟಯ್ಯ(55) ಹಾಗೂ ಗೌಡಜ್ಜ(55) ಗಾಯಗೊಂಡಿದ್ದಾರೆ.

ಶ್ರದ್ಧಾಂಜಲಿ

ಬಂಡೆ ಬೊಮ್ಮಸಂದ್ರ ಗ್ರಾಮದ ನಿವಾಸಿಯಾದ
ಶ್ರೀ ಎನ್ ಶಿವರಾಮ ರೆಡ್ಡಿ
ಇವರು ದಿನಾಂಕ: 01-04-2026 ಬುಧವಾರ ರಾತ್ರಿ 8:45 ಕ್ಕೆ ಸ್ವರ್ಗಸ್ತರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಅಂತಿಮ ಕಾರ್ಯ ದಿನಾಂಕ: 02-04-2026 ಗುರುವಾರದಂದು ಮಧ್ಯಾಹ್ನ: 03:00 ಕ್ಕೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯ ನಡೆಯಲಿದೆ.
ದುಃಖ ತಪ್ತರು: ಪತ್ನಿ ಸುಬ್ಬಲಕ್ಷ್ಮಮ್ಮ ಹಾಗೂ ಮಕ್ಕಳು ಮೊಮ್ಮಕ್ಕಳು, ಸಹೋದರರು, ಅಳಿಯಂದಿರು ಮತ್ತು ಕುಟುಂಬ ವರ್ಗದವರು.

ಬಂಕ್‌ಗಳ ಮುಂದೆ ಮಂಗಳವಾರ ರಾತ್ರಿಯಿಂದಲೇ ಸಾಲುಗಟ್ಟಿ ನಿಂತಿದ್ದ ವಾಹನಗಳು

# ಎಲ್‌ಪಿಜಿ ಕೊರತೆ: ಆಟೊಗಳ ಸಂಚಾರಕ್ಕೆ ತೊಂದರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಪಿಜಿ ಸಿಗದ ಕಾರಣ ಬುಧವಾರ ನಗರದಲ್ಲಿ ಹಲವು ಆಟೊಗಳು ರಸ್ತೆಗೆ ಇಳಿಯಲಿಲ್ಲ. ಬಂಕ್‌ಗಳ ಮುಂದೆ ಆಟೊಗಳು ಸಾಲುಗಟ್ಟಿ ನಿಂತಿರುವುದು ಹಲವೆಡೆ ಕಂಡು ಬಂತು.

ಟೋಲ್‌ಗೇಟ್, ನಾಗರಬಾವಿ, ರಾಜಾಜಿನಗರ, ಮಡಿವಾಳ, ಮೈಸೂರು ರಸ್ತೆ, ಕೋರಮಂಗಲ, ಸೇರಿದಂತೆ ಹಲವು ಕಡೆ ಬಂಕ್‌ಗಳಲ್ಲಿ ಆಟೊಗಳು ಮಂಗಳವಾರ ರಾತ್ರಿಯೇ ಸಾಲುಗಟ್ಟಿ ನಿಂತಿದ್ದವು. ಬುಧವಾರವೂ ಅದೇ ರೀತಿಯ ಪರಿಸ್ಥಿತಿ ಇತ್ತು.

ಆಟೊಗಳನ್ನು ಬಾಡಿಗೆಗೆ ಪಡೆಯುವ ಚಾಲಕರು ದಿನಕ್ಕೆ ಸರಾಸರಿ ₹300 ರಿಂದ ₹350 ಪಾವತಿಸುತ್ತಾರೆ. ದಿನಕ್ಕೆ ₹ 450ರಿಂದ ₹ 550 ಎಲ್‌ಪಿಜಿಗೆ ಬೇಕಾಗುತ್ತದೆ. ಆದರೆ, ಗ್ಯಾಸ್ ತುಂಬಿಸಲು ಗಂಟೆಗಟ್ಟಲೆ ಕಾಯುತ್ತಾ ನಿಲ್ಲುತ್ತಿರುವುದರಿಂದ ಪ್ರಯಾಣಿಕರನ್ನು ಕರೆದುಕೊಂಡು ಹೋಗಲು ಆಗುತ್ತಿಲ್ಲ ಎಂದು ಆಟೊ ಚಾಲಕರು ಅಲವತ್ತುಕೊಂಡಿದ್ದಾರೆ.

'ಗಳಿಸುವುದಕ್ಕಿಂತ ಅಧಿಕ ಪಾವತಿ ಮಾಡಬೇಕಿದೆ. ನಮ್ಮ ಸಂಘದಲ್ಲಿ 14 ಸಾವಿರ ಸದಸ್ಯರಿದ್ದು, ಶೇ 10ರಷ್ಟು ಸದಸ್ಯರು ಬುಧವಾರ ಆಟೊಗಳನ್ನು ರಸ್ತೆಗಿಳಿಸಿಲ್ಲ. ಪರಿಸ್ಥಿತಿ ಹೀಗೇ ಮುಂದುವರಿದರೆ ಮುಂಬರುವ ದಿನಗಳಲ್ಲಿ ಇನ್ನಷ್ಟು ಆಟೊಗಳು ಸಂಚಾರ ಸ್ಥಗಿತಗೊಳಿಸಬೇಕಾಗಬಹುದು' ಎಂದು ಆದರ್ಶ ಆಟೊ ಚಾಲಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸಿ. ಸಂಪತ್ ತಿಳಿಸಿದರು.

'ಬಾಡಿಗೆಗೆ ಪಡೆದ ಆಟೊ ಓಡಿಸಿ ಜೀವನ ನಡೆಸುತ್ತಿದ್ದೆ. ಕಳೆದ ಮೂರು ದಿನಗಳಿಂದ ಯಾವುದೇ ಲಾಭ ಗಳಿಸಲು ಸಾಧ್ಯವಾಗಿಲ್ಲ. ತಾತ್ಕಾಲಿಕವಾಗಿ ಈ ವೃತ್ತಿ ಸ್ಥಗಿತಗೊಳಿಸಿ ಬೇರೆಡೆ ಕೆಲಸ ಮಾಡುವುದು ಉತ್ತಮ. ನನ್ನ ಸಹೋದರನ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಯೋಚಿಸುತ್ತಿದ್ದೇನೆ' ಎಂದು ಆಟೊ ಚಾಲಕ ಮುರ್ಘಾಮಿಲ್ ಪಾಷ ಹೇಳಿದರು.

ಆಟೊ ಫ್ಲೀಟ್‌ನಲ್ಲಿನ ಕುಸಿತದ ಪರಿಣಾಮವಾಗಿ, ನಗರದಾದ್ಯಂತ ಪ್ರಯಾಣಿಕರು ವಿವಿಧ ಅಗ್ರಿಗೇಟರ್ ಪ್ಲಾಟ್‌ಫಾರ್ಮ್‌ಗಳಲ್ಲಿ ಆಟೊಗಳನ್ನು ಬುಕ್ ಮಾಡಲು ತೊಂದರೆ ಎದುರಿಸಿದರು. ಅನೇಕರು ಬೈಕ್ ಟ್ಯಾಕ್ಸಿಗಳತ್ತ ಮುಖ ಮಾಡಿದರು. ಈ ಮಧ್ಯೆ ಅಗ್ರಿಗೇಟರ್ ಕ್ಯಾಬ್, ಆಟೊಗಳು ಟಿಪ್ಸ್ ಜಾಸ್ತಿ ತೆಗೆದುಕೊಳ್ಳುತ್ತಿರುವುದು ಕಂಡು ಬಂದಿದೆ.

ರಾಜ್‌ಕುಮಾರ್ ರಸ್ತೆಯಲ್ಲಿ ಎಲ್‌ಪಿಜಿ ಫಿಲ್ಲಿಂಗ್ ಸ್ಟೇಷನ್ ಹೊರಗೆ ನಿಂತಿದ್ದ ಆಟೊಗಳು

### ದಾಸ್ತಾನು ಇಲ್ಲ ಎಂದು ಫಲಕ

ದಾಸರಹಳ್ಳಿ ಸುತ್ತಮುತ್ತಲ ಬಾಗಲಗುಂಟೆ, ಅಂದ್ರಹಳ್ಳಿ, ನಲಗದರಹಳ್ಳಿ, ಮಾದನಾಯಕನಹಳ್ಳಿ ಭಾಗದ ಎಲ್‌ಪಿಜಿ ಬಂಕ್‌ಗಳು ಬಂದ್ ಆಗಿವೆ. ಕೆಲವು ಬಂಕ್‌ಗಳಲ್ಲಿ ದಾಸ್ತಾನು ಇಲ್ಲ ಎಂಬ ಬೋರ್ಡ್ ಹಾಕಲಾಗಿದೆ.

ಬಾಗಲಗುಂಟೆಯ ತ್ರಿವೇಣಿ ಪೆಟ್ರೋಲ್ ಬಂಕ್‌ನಲ್ಲಿ ಎಲ್‌ಪಿಜಿ ಅನಿಲ ದೊರೆಯುತ್ತಿರುವುದರಿಂದ ಎಂಟನೇ ಮೈಲಿವರೆಗೂ ಆಟೊಗಳು ಸರತಿ ಸಾಲಿನಲ್ಲಿ ನಿಲ್ಲುವುದು ಸಾಮಾನ್ಯವಾಗಿದೆ.

ಅಲ್ಲಲ್ಲಿ ಚಾಲಕರು, ಬಂಕ್ ಮಾಲೀಕರು ಮತ್ತು ಸಿಬ್ಬಂದಿ ನಡುವೆ ಮಾತಿನ ಚಕಮಕಿ ನಡೆಯಿತು. ಚಿಕ್ಕಬಾಣಾವರ ಸಂಚಾರ ಹಾಗೂ ಬಾಗಲಗುಂಟೆ ಪೊಲೀಸರು ಮಧ್ಯಪ್ರವೇಶಿಸಿ ಸಮಾಧಾನಪಡಿಸಿದರು.

'ಸ್ಟಾಕ್ ಬಂದಿದ್ದರಿಂದ ಎಲ್‌ಪಿಜಿ ಗ್ಯಾಸ್ ನೀಡುತ್ತಿದ್ದೇವೆ. ಪ್ರತಿಯೊಬ್ಬರಿಗೂ ಸಿಗಲಿ ಎಂದು ₹500ಗೆ ಮಾತ್ರ ನೀಡುತ್ತಿದ್ದೇವೆ. ಸರತಿ ಸಾಲಿನಲ್ಲಿ ಕೆಲವೊಬ್ಬರು ನಿಲ್ಲದೆ, ಬಂದು ಗಲಾಟೆ ಮಾಡುತ್ತಿರುವುದರಿಂದ ಗೊಂದಲ ಉಂಟಾಗುತ್ತಿದೆ' ಎಂದು ಬಂಕ್‌ವೊಂದರ ವ್ಯವಸ್ಥಾಪಕರು ತಿಳಿಸಿದರು.

'ನಗರದಲ್ಲಿ ಬಾಡಿಗೆ ಸಿಗೋದೆ ಕಷ್ಟ. ಬೆಳಿಗ್ಗೆಯಿಂದ ಸಂಜೆವರೆಗೂ ₹500 ದುಡಿದರೆ ಹೆಚ್ಚು. ಇದರಲ್ಲಿ ಮನೆ ನಿರ್ವಹಣೆ ಮಾಡೋದು ಹೇಗೆ? ಆಟೊ ಚಾಲನೆ ಬಿಟ್ಟು ಬೇರೆ ಕೆಲಸ ಗೊತ್ತಿಲ್ಲ. ದರವೂ ಹೆಚ್ಚಳವಾಗಿದೆ. ಎಲ್‌ಪಿಜಿ ಸಮಸ್ಯೆಯಿಂದ ನಿತ್ಯ ತೊಂದರೆ ಅನುಭವಿಸುವಂತಾಗಿದೆ' ಎಂದು ಆಟೊರಿಕ್ಷಾ ಚಾಲಕರಾದ ಮಾದಾವರದ ಶಿವಮೂರ್ತಿ, ಚಿಕ್ಕಸಂದ್ರದ ಚಾಲಕ ಕಿರಣ್ ಕುಮಾರ್ ತಿಳಿಸಿದರು.

### 'ಸರ್ಕಾರ ನೆರವಿಗೆ ಬರಲಿ'

'ಮೂರು ವರ್ಷಗಳ ಈಚೆಗಿನ ಆಟೊಗಳಲ್ಲಿ ಮಾತ್ರ ಸಿಎನ್‌ಜಿ ಬಳಕೆ ಇದೆ. ಅದಕ್ಕಿಂತ ಹಿಂದಿನ ಲಕ್ಷಾಂತರ ಆಟೊಗಳಲ್ಲಿ ಎಲ್‌ಪಿಜಿ ಇಂಧನವನ್ನೇ ಬಳಸಲಾಗುತ್ತಿದೆ. ಸರ್ಕಾರ ಆಟೊ ಚಾಲಕರ ನೆರವಿಗೆ ಬಾರದೇ ಇದ್ದರೆ, ನಮ್ಮ ಬದುಕು ಬೀದಿಗೆ ಬೀಳಲಿದೆ' ಎಂದು ಸಾರಥಿ ಆಟೊ ಚಾಲಕರ ಸಂಘದ ಅಧ್ಯಕ್ಷ ರಾಮೇಗೌಡ ತಿಳಿಸಿದರು.

# ‘ಮೋದಿ ಸರ್ಕಾರ ಕನ್ನಡಿಗರನ್ನು ಶತ್ರುಗಳಂತೆ ಕಾಣುತ್ತಿದೆ’

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್ ಖರ್ಗೆ

ಬೆಂಗಳೂರು: ‘ಮೋದಿ ನೇತೃತ್ವದ ಸರ್ಕಾರವು ಕನ್ನಡಿಗರನ್ನು ಶತ್ರುಗಳಂತೆ ಕಾಣುತ್ತಿದೆ. ಪ್ರತಿ ಹಂತದಲ್ಲೂ, ಪ್ರತಿ ವಿಷಯದಲ್ಲೂ ರಾಜ್ಯಕ್ಕೆ ಅನ್ಯಾಯದ ಸರಣಿ ಮುಂದುವರಿಸಿದೆ’ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಟೀಕಿಸಿದ್ದಾರೆ.

‘ಮೋದಿ ಸರ್ಕಾರವು ಕರ್ನಾಟಕಕ್ಕೆ ಮಾಡುತ್ತಿರುವುದು ಅನ್ಯಾಯ ಮಾತ್ರವಲ್ಲ, ನಿಷ್ಕರುಣೆಯ ಕ್ರೌರ್ಯ. ಬಾಂಗ್ಲಾದೇಶ, ಅಫ್ಗಾನಿಸ್ತಾನಗಳಿಗೆ ತೋರಿದಷ್ಟು ದಯೆ ಕಾಳಜಿಯನ್ನೂ ಮೋದಿ ಸರ್ಕಾರವು ರಾಜ್ಯಕ್ಕೆ ತೋರುತ್ತಿಲ್ಲ. ಆ ದೇಶಗಳಿಗೆ ಅನುದಾನ ಕೊಡುವಷ್ಟು ಉದಾರತೆಯನ್ನೂ ತೋರುತ್ತಿಲ್ಲ’ ಎಂದಿದ್ದಾರೆ.

‘15ನೇ ಹಣಕಾಸು ಆಯೋಗದ ಅವಧಿ ಮುಕ್ತಾಯವಾಗಿರುವ ಹೊತ್ತಿನಲ್ಲಿ ಕರ್ನಾಟಕಕ್ಕೆ ಕೇಂದ್ರದ ಅನ್ಯಾಯದ ದೊಡ್ಡ ಸಾಕ್ಷಿಗಳು ಉಳಿದಿವೆ. ಈ ವಂಚನೆ ಕೇವಲ 15ನೇ ಹಣಕಾಸು ಆಯೋಗದ ಅನುದಾನಕ್ಕೆ ಸೀಮಿತವಲ್ಲ; ಬಜೆಟ್‌ನಿಂದ ಹಿಡಿದು ನೆರೆ, ಬರ ಪರಿಹಾರಗಳು, ತೆರಿಗೆ ಹಂಚಿಕೆ, ಕೇಂದ್ರ ಪುರಸ್ಕೃತ ಯೋಜನೆಗಳನ್ನು ಸೇರಿದಂತೆ ಎಲ್ಲದರಲ್ಲೂ ಕನ್ನಡಿಗರ ಮಲತಾಯಿ ಮಕ್ಕಳೇ’ ಎಂದು ತಮ್ಮ ಅಸಹನೆ ವ್ಯಕ್ತಪಡಿಸಿದ್ದಾರೆ.

‘ನರೇಗಾ ಯೋಜನೆ ಮಾರ್ಚ್ 31ಕ್ಕೆ ಕೊನೆಯಾಗಿದೆ. ಈ ಯೋಜನೆಯಲ್ಲಿ ಕರ್ನಾಟಕಕ್ಕೆ ₹1,943 ಕೋಟಿ ಅನುದಾನ ಬಾಕಿ ಇದೆ. ಈ ಬಗ್ಗೆ ಇದುವರೆಗೂ ಕೇಂದ್ರ ಸರ್ಕಾರ ಯಾವುದೇ ಸ್ಪಷ್ಟತೆ ನೀಡಿಲ್ಲ. ಏಪ್ರಿಲ್ 1ರಿಂದ ಜಾರಿಗೆ ಬರುತ್ತಿರುವ ಉದ್ಯೋಗ ಖಾತರಿಯ ವಿಬಿ ಜಿ ರಾಮ್ ಜಿ ಯೋಜನೆಯ ಸ್ವರೂಪವೂ ಇಲ್ಲ’ ಎಂದಿದ್ದಾರೆ.

‘15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಬರಬೇಕಿದ್ದ ₹15,583 ಕೋಟಿ ಹಣವನ್ನು ವಂಚಿಸಿರುವುದರ ಬಗ್ಗೆ ರಾಜ್ಯದ ಬಿಜೆಪಿ ನಾಯಕರು ತುಟಿ ಬಿಚ್ಚುವುದಿಲ್ಲ. ಬೆಂಗಳೂರಿನ ಅಭಿವೃದ್ಧಿಗೆ ಕೊಡಬೇಕಿದ್ದ ₹6 ಸಾವಿರ ಕೋಟಿಯಲ್ಲಿ ಕೊಟ್ಟಿದ್ದು ಶೂನ್ಯ. ಮೋದಿಯವರ ಈ ಆತ್ಮವಂಚನೆ ಮತ್ತು ಮೋಸದ ಆಟವನ್ನು ಪ್ರಶ್ನಿಸಿದ ದಿನ ಅವರು ನಿಜವಾದ ಜನಪರ ರಾಜಕಾರಣಿಗಳಾಗುತ್ತಾರೆ’ ಎಂದೂ ಹೇಳಿದ್ದಾರೆ.

# ‘ಬೆಂಗಳೂರು- ವಿಜಯಪುರ ಎಕ್ಸ್‌ಪ್ರೆಸ್ ರೈಲು ಆರಂಭಿಸಿ’

ಪ್ರಜಾವಾಣಿ ವಾರ್ತೆ

ಪಾಟೀಲ

ಬೆಂಗಳೂರು: ‘ಆಲಮಟ್ಟಿ-ವಂದಾಲ ನಡುವಿನ 9.60 ಕಿ.ಮೀ. ಜೋಡಿ ಹಳಿ ಕಾಮಗಾರಿ ಪೂರ್ಣಗೊಂಡಿದ್ದು, ಮಾರ್ಚ್ 25ರಿಂದ ಸಂಚಾರಕ್ಕೆ ಮುಕ್ತವಾಗಿದೆ. ಆದ್ದರಿಂದ, ಬೆಂಗಳೂರು-ವಿಜಯಪುರ ನಡುವೆ ಬಹುದಿನದ ಬೇಡಿಕೆಯಾಗಿರುವ ಎಕ್ಸ್‌ಪ್ರೆಸ್ ರೈಲು ಸೇವೆ ಆರಂಭಿಸಬೇಕು’ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ವಿ. ಸೋಮಣ್ಣ ಅವರಿಗೆ ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಪತ್ರ ಬರೆದಿದ್ದಾರೆ.

ಮಾರ್ಚ್ 30ರಂದು ಪತ್ರ ಬರೆದಿರುವ ಅವರು, ‘ಗದಗ-ಹೊಟಗಿ ಹಳಿ ದ್ವಿಪಥ ಯೋಜನೆಯ ಭಾಗವಾಗಿ ಆಲಮಟ್ಟಿ-ವಂದಾಲ ನಡುವಿನ ಕಾಮಗಾರಿ ಈಗ ಮುಗಿದಿದೆ. ಇದು ಮುಗಿದರೆ ಬೆಂಗಳೂರು-ವಿಜಯಪುರ ನಡುವೆ ಎಕ್ಸ್‌ಪ್ರೆಸ್ ರೈಲು ಆರಂಭಿಸುವುದಾಗಿ ಈ ಹಿಂದೆ ಹೇಳಿದ್ದೀರಿ. ಈಗ ಇದಕ್ಕೆ ಆದ್ಯತೆ ಕೊಡಬೇಕು. ಶೈಕ್ಷಣಿಕ, ವೈದ್ಯಕೀಯ, ವಾಣಿಜ್ಯ ವಹಿವಾಟು ಇತ್ಯಾದಿಗಾಗಿ ನಿತ್ಯವೂ ಬೆಂಗಳೂರಿಗೆ ಬರುವ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಸಾವಿರಾರು ಜನರಿಗೆ ಇದರಿಂದ ಅನುಕೂಲವಾಗಲಿದೆ’ ಎಂದಿದ್ದಾರೆ.

‘ಬೆಂಗಳೂರು-ವಿಜಯಪುರ ನಡುವೆ ರೈಲು ಪ್ರಯಾಣಕ್ಕೆ 15 ಗಂಟೆ ಹಿಡಿಯುತ್ತಿದೆ. ಇದನ್ನು 10 ಗಂಟೆಗಳಿಗೆ ಇಳಿಸಬೇಕಿದೆ. ಬೆಂಗಳೂರಿನಿಂದ ಹೊರಡುವ ರೈಲುಗಳಿಗೆ ಹುಬ್ಬಳ್ಳಿವರೆಗೆ ನಿಗದಿತ ನಿಲುಗಡೆ ನೀಡಬೇಕು, ನಂತರ ವಿಜಯಪುರಕ್ಕೆ ಸಾಗುವ ರೈಲುಗಳು ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮಾರ್ಗಗಳಲ್ಲಿ ಸಂಚರಿಸಲು ವ್ಯವಸ್ಥೆ ಮಾಡಬೇಕು’ ಎಂದು ಮನವಿ ಮಾಡಿದ್ದಾರೆ.

ರಾಜ್ಯಕ್ಕೆ ಕೇಂದ್ರದಿಂದ 15 ಸಾವಿರ ಕೋಟಿ ಖೋತಾ: ಕೇಂದ್ರದ ಬಿಜೆಪಿ ಸರ್ಕಾರದ ಮಲತಾಯಿ ಧೋರಣೆಯೇ?

- ಹೌದು
- ಇಲ್ಲ
- ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ


## ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

### ಟೆಂಡರ್‌ಗಾಗಿ ಆಹ್ವಾನ

(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಗುತ್ತಿಗೆದಾರರಿಂದ ದ್ವಿ-ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಪ್ರಧಾನ ಮುಖ್ಯ ಅಭಿಯಂತರರ ಕಚೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009

| ಕ್ರ ಸಂ. | ಕಾಮಗಾರಿಗಳ ಹೆಸರು | ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ |
|---|---|---|
| | ಸಂಖ್ಯೆ:ಬೆಂಜಮಂ/ಪ್ರಮುಅ/ಅಮುಅ(ಯುಎಫ್‌ಡಬ್ಲ್ಯೂ)/ತಾಂಸ(ಯುಎಫ್‌ಡಬ್ಲ್ಯೂ)/10012/2026–27 ದಿನಾಂಕ:31.03.2026 | |
| 1. | ಸ.ಕಾ.ನಿ.ಅ(ಯು.ಎಫ್.ಡಬ್ಲ್ಯೂ) ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ಉತ್ತರ ಪೂರ್ವ ಮತ್ತು ವಿವಿಧ ಸ್ಥಳಗಳಲ್ಲಿ ಇ.ಎಂ.ಎಫ್ ಫ್ಲೋ ಮೀಟರ್‌ಗಳ ದುರಸ್ತಿ, ಬದಲಿ ಕಾಮಗಾರಿ. | ₹ 395.32 ಲಕ್ಷಗಳು / ₹ 5.93 ಲಕ್ಷಗಳು |
| | ಸಂಖ್ಯೆ:ಬೆಂಜಮಂ/ಪ್ರಮುಅ/ಅಮುಅ(ಸಿಎಸ್&ಡಿಸಿಡಬ್ಲ್ಯೂ)/ತಾಂಸ/10014/2026–27 ದಿನಾಂಕ:31.03.2026 | |
| 2. | ಬೆಂಗಳೂರು ಜಲಮಂಡಳಿ ವ್ಯಾಪ್ತಿಯ ಸಕಾನಿಅ (ಕೇಂದ್ರ–1–2) ಉಪ–ವಿಭಾಗದಡಿಯ ಫ್ರೇಜರ್ ಟೌನ್–6 ರಲ್ಲಿ ನೀರು ಸರಬರಾಜು ವ್ಯವಸ್ಥೆಯ ಆಧುನೀಕರಣ ಮತ್ತು ಪುನರ್ ನಿರ್ಮಾಣದ ಕಾಮಗಾರಿ | ₹ 378.62 ಲಕ್ಷಗಳು / ₹ 5.68 ಲಕ್ಷಗಳು |
| | ಸಂಖ್ಯೆ:ಬೆಂಜಮಂ/ಪ್ರಮುಅ/ಅಮುಅ(ಯುಎಫ್‌ಡಬ್ಲ್ಯೂ)/ತಾಂಸ(ಯುಎಫ್‌ಡಬ್ಲ್ಯೂ)/10017/2026–27 ದಿನಾಂಕ:31.03.2026 | |
| 3. | ಸ.ಕಾ.ನಿ.ಅ(ಯು.ಎಫ್.ಡಬ್ಲ್ಯೂ) ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ಉತ್ತರ ಪಶ್ಚಿಮ ಮತ್ತು ವಿವಿಧ ಸ್ಥಳಗಳಲ್ಲಿ ಇ.ಎಂ.ಎಫ್ ಫ್ಲೋ ಮೀಟರ್‌ಗಳ ದುರಸ್ತಿ, ಬದಲಿ ಕಾಮಗಾರಿ. | ₹ 396.32 ಲಕ್ಷಗಳು / ₹ 5.95 ಲಕ್ಷಗಳು |

ಮೇಲ್ಕಂಡ ಕಾಮಗಾರಿಗಳಿಗೆ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ 16.04.2026ರ ಸಂಜೆ 4:00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ 17.04.2026ರ ಸಂಜೆ 4:30 ಗಂಟೆಯ ನಂತರ ತೆರೆಯಲಾಗುವುದು.
ಸಹಿ/–
ಪ್ರಧಾನ ಮುಖ್ಯ ಅಭಿಯಂತರರು

ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ) 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009

| ಕ್ರ ಸಂ. | ಕಾಮಗಾರಿಗಳ ಹೆಸರು | ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ |
|---|---|---|
| | ಸಂಖ್ಯೆ:ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)–2/ಉಮುಅ(ನಿ)–2/ತಾಂಸ(ಪ)/10009/2026–27 ದಿನಾಂಕ:31.03.2026 | |
| 4. | ಉತ್ತರ ಪಶ್ಚಿಮ–1 ವಿಭಾಗದಡಿಯಲ್ಲಿ 5.0 ಲಕ್ಷ ಲೀಟರ್‌ಗಳು ಸಂಪ್ ಕಂ ಪಂಪ್ ಹೌಸ್, 130 ಹೆಚ್‌ಪಿ ಸಬ್‌ಮರ್ಸಿಬಲ್ ಹೆಚ್‌ಎಸ್ ಸಿ ಪಂಪ್ ಸೆಟ್, 350 ಮಿ.ಮೀ ವ್ಯಾಸದ ಡಿಐ ರೈಸಿಂಗ್ ಮೈನ್, 5.0 ಲಕ್ಷ ಲೀಟರ್‌ಗಳ ಓ ಹೆಚ್ ಟಿ ನಿರ್ಮಾಣ ಮತ್ತು ಸಂಬಂಧಿಸಿದ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದೆ. (3ನೇ ಕರೆ) | ₹ 711.69 ಲಕ್ಷಗಳು / ₹ 10.68 ಲಕ್ಷಗಳು |

ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ 16.04.2026ರ ಸಂಜೆ 5:00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ 17.04.2026ರ ಸಂಜೆ 5:30 ಗಂಟೆಯ ನಂತರ ತೆರೆಯಲಾಗುವುದು.
ಸಹಿ/–
ಮುಖ್ಯ ಅಭಿಯಂತರರು (ಪಶ್ಚಿಮ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲೆ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಡಿಐಪಿಆರ್/ಸಿಪಿ/13/ಸಿಸಿಎಲ್/2026–27

## ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–01/04/2026–27 ದಿನಾಂಕ: 01.04.2026

### ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಪಿಡಬ್ಲ್ಯುಡಿ ದರ್ಜೆ–1 (ಸಿವಿಲ್) ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲ್ಲೂಕಿನಲ್ಲಿ ಜ್ಞಾನ, ಯೋಗಕ್ಷೇಮ ಮತ್ತು ಇನೋವೇಷನ್ ಸಿಟಿ (KWIN ಸಿಟಿ)ಯ ಸ್ಥಾಪನೆ ಮಾಡುವ ಕಾಮಗಾರಿ. (ಹಂತ–4 & ಹಂತ–5).
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 02.05.2026 ಸಂಜೆ 4.00 ಗಂಟೆಯವರೆಗೆ
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/19/Zen/2026-27

## ಕರ್ನಾಟಕ ರಾಜ್ಯಪಾಲರ ಸಚಿವಾಲಯ

ಲೋಕ ಭವನ, ಬೆಂಗಳೂರು.

No. GS 14 KOM 2025 Date : 02.04.2026

### ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, ಇಲ್ಲಿನ ಕುಲಪತಿ ಹುದ್ದೆಗೆ ಅರ್ಹತೆಯುಳ್ಳ ಪ್ರಾಧ್ಯಾಪಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ವಿಶ್ವವಿದ್ಯಾಲಯ ಧನ ಸಹಾಯಗಳ ಆಯೋಗದ ಮಾರ್ಗಸೂಚಿಗಳು ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಧಿನಿಯಮ, 1992 ರನ್ವಯ ಕನಿಷ್ಠ 10 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಅಥವಾ ತತ್ಸಮಾನ ಹುದ್ದೆಯ ಕಾರ್ಯಾನುಭವ ಹೊಂದಿರತಕ್ಕದ್ದು ಹಾಗೂ ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವ ಇತ್ಯಾದಿ ವಿವರಗಳೊಂದಿಗೆ ವೆಬ್ ಸೈಟ್ www.ksoumysuru.ac.in ನಲ್ಲಿ ಲಭ್ಯವಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಸ್ವಯಂಘೋಷಣೆಯೊಂದಿಗೆ “ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ಪಿ.ಬಿ. ನಂ. 5033, ಲೋಕ ಭವನ, ಬೆಂಗಳೂರು–560001” ಇವರಿಗೆ ದಿನಾಂಕ: 10.05.2026ರ ಸಂಜೆ 5.30ರೊಳಗೆ ತಲುಪುವಂತೆ ನಾಲ್ಕು ಪ್ರತಿಗಳಲ್ಲಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಹಾಗೂ ಅರ್ಜಿಯ soft copy ಯನ್ನು email ಮೂಲಕ : us.university.rb@karnataka.gov.in ಗೆ ಕಳುಹಿಸುವುದು.
ಸಹಿ/–
(ಆರ್. ಪ್ರಭುಶಂಕರ್)
ರಾಜ್ಯಪಾಲರ ವಿಶೇಷ ಕಾರ್ಯದರ್ಶಿ
DIPR/CP/6496/NR/2025-26

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬೆಂಅಪ್ರಾ/ಆರ್.ಎಂ.ಪಿ–2041/15/2026–27 ದಿನಾಂಕ: 01.04.2026

### ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ–2041ರ ತಯಾರಿಕೆ ಕಾರ್ಯಕ್ಕೆ ಅರ್ಹ ಸಂಸ್ಥೆಯ ಆಯ್ಕೆ ಕುರಿತು ಗ್ಲೋಬಲ್ ಟೆಂಡರ್

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಪರಿಷ್ಕೃತ ಮಹಾಯೋಜನೆ–2041ರ ತಯಾರಿಕೆಯನ್ನು ಕೈಗೊಂಡಿದ್ದು, ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ–2041 ತಯಾರಿಕೆ ಕಾರ್ಯಕ್ಕೆ ಅರ್ಹ ಸಂಸ್ಥೆಯ ಸೇವೆಯನ್ನು ಪಡೆದುಕೊಳ್ಳಲು ಉದ್ದೇಶಿಸಿರುತ್ತದೆ.
ಅರ್ಹತೆ ಮಾನದಂಡ, ಕೆಲಸದ ವ್ಯಾಪ್ತಿ, ಇತರೆ ಷರತ್ತುಗಳು ಮತ್ತು ನಿಬಂಧನೆಗಳ ವಿವರಗಳನ್ನು ಒಳಗೊಂಡ ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಇಲಾಖೆಯ ವೆಬ್‌ಸೈಟ್ https://www.kppp.karnataka.gov.in ನಿಂದ ಪಡೆದುಕೊಳ್ಳಬಹುದಾಗಿರುತ್ತದೆ. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 30.04.2026ರ ಸಂಜೆ 5.30 ಗಂಟೆಯಾಗಿರುತ್ತದೆ.
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ/ಎಲ್ಲಾ ಪ್ರಸ್ತಾವನೆಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.
ಸಹಾಯವಾಣಿ/ವಾಟ್ಸ್‌ಪ್: 9483166622 (24X7). @BDAOfficialGok
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

## ಕರ್ನಾಟಕ ಗೃಹ ಮಂಡಳಿ

3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

### ಟೆಂಡರ್ ಅಧಿಸೂಚನೆ

(ಕೆಪಿಪಿ ಪೋರ್ಟಲ್ ಮೂಲಕ)

ಟೆಂಡರ್ ಪ್ರಕಟಣೆ ಸಂಖ್ಯೆ: CE/AEF-Chunchanakuppe/High Tech Multi-storeyed Apartment/KHB/2025-26/SE0372, Date: 26.03.2026.
ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಚುಂಚನಕುಪ್ಪೆ ದೊಡ್ಡ ಆಲದಮರದ ರಸ್ತೆಯಲ್ಲಿನ ಸರ್ವೆ ನಂ. 22/3ರಲ್ಲಿ 2 ಎಕರೆ 17 ಗುಂಟೆ ಜಾಗದಲ್ಲಿ ಕ್ಲಬ್ ಹೌಸ್, ಈಜುಕೊಳ, ಜಿಮ್, ಗ್ರಂಥಾಲಯ, ಒಳಾಂಗಣ ಕ್ರೀಡಾಂಗಣ, ಹೈಟೆಕ್ ಬಹುಮಹಡಿ ವಸತಿ ಸಮುಚ್ಚಯ ನಿರ್ಮಾಣ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (ಎಇಎಫ್) ನೇಮಕಾತಿಗಾಗಿ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15.04.2026, ಸಂಜೆ 4.00 ಗಂಟೆಯವರೆಗೆ.
ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರೆ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511 . Website: https://kppp.karnataka.gov.in
DIPR/CP/YC/10/2026-27 ಸಹಿ/– ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಂಗಳೂರು

## ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯಿತಿ

ದೂರವಾಣಿ ಸಂಖ್ಯೆ:08262–220936 E-Mail: zpedckm@rediffmail.com
ಟೆಂಡರ್ ಪ್ರಕಟಣೆ ಸಂಖ್ಯೆ:29/2025–26/3ನೇ ಕರೆ 3664 ದಿನಾಂಕ: 31–03–2026

### ಟೆಂಡರ್ ಪ್ರಕಟಣೆ :– (3ನೇ ಕರೆ)

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ, ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ.65.12 ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ ರೂ.29.44 ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KW-2& 3 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು, ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್ ಲೋಡ್ ಮಾಡಿದ ಡಾಕ್ಯೂಮೆಂಟ್ ಗಳನ್ನು ದಿನಾಂಕ :31.03.2026 ರಿಂದ ದಿನಾಂಕ :15.04.2026 ರ ವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್ ಲೋಡ್ ಮಾಡುವುದು, ತಾಂತ್ರಿಕ ಬಿಡ್ಡನ್ನು ದಿನಾಂಕ:17.04.2026 ರಂದು ಸಂಜೆ 5.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:22.04.2026 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

## ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ

ಪ್ರಕಟಣೆ ಸಂ: ಐಎಫ್‌ಟಿ–54/ಜೆಇ/2025–26 ದಿನಾಂಕ:– 31.03.2026

### ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 54/ಜೆಇ/2025–26 ದಿನಾಂಕ: 31.03.2026.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ :5054–03–337–0–17–154 ಯೋಜನೆ (ರಾಜ್ಯ ಹೆದ್ದಾರಿ ಸುಧಾರಣೆ) ಅಡಿ 1 ಕಾಮಗಾರಿ ರೂ. 500.00 ಲಕ್ಷ (ಇಂಡೆಂಟ್ ಸಂ : 32214–2ನೇ ಕರೆ) ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.
ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ ದಿನಾಂಕ: 15.04.2026 ಸಂಜೆ 4.00 ಗಂಟೆಯವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ 16.04.2026 ಸಂಜೆ 4.30 ಗಂಟೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.
ವಾಸಾಇ/ಡಿಜಿ/02/ಕೆಎಸ್‌ಎಂಸಿಎ/2026–27
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

## ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)

### ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆವಿಕಂ ಇವರು ಕೆಪಿಪಿ ಪ್ಲಾಟ್‌ಫಾರಂ ಮೂಲಕ ಅರ್ಹ ಬಿಡ್‌ದಾರರಿಂದ ವಿಚಾರಣೆ ಸಂಖ್ಯೆ: ಬೆವಿಕಂ/2026–27/ಇಎಲ್/ವರ್ಕ್_ಇಂಡೆಂಟ್ 1069ರಂತೆ ಬೆವಿಕಂನ ಬೆಂಗಳೂರು ಗ್ರಾಮೀಣ ವೃತ್ತದ ನೆಲಮಂಗಲ ವಿಭಾಗ ವ್ಯಾಪ್ತಿಯಲ್ಲಿ ಎಲ್.ಟಿ. ವಿದ್ಯುತ್ ಜಾಲತಾನವನ್ನು ಉನ್ನತೀಕರಿಸಲು ಅಸ್ತಿತ್ವದಲ್ಲಿರುವ ಎಲ್.ಟಿ. ಮೇಲುಮಾರ್ಗಗಳನ್ನು ಎಲ್.ಟಿ. ಕವರ್ಡ್ ಕಂಡಕ್ಟರ್ ಮತ್ತು ಎಲ್.ಟಿ. ಎ.ಬಿ. ಕೇಬಲ್‌ಗೆ ಬದಲಾಯಿಸುವ ಕಾಮಗಾರಿಯನ್ನು ಒಂದು ವರ್ಷದ ಅವಧಿಗೆ ದರ ಗುತ್ತಿಗೆ ಭಾಗಶಃ ಟರ್ನ್‌ಕೀ ಆಧಾರದ ಮೇಲೆ ಕೈಗೊಳ್ಳಲು ಟೆಂಡರನ್ನು ಆಹ್ವಾನಿಸಿದೆ.
ಬಿಡ್ ದಸ್ತಾವೇಜುಗಳ ಲಭ್ಯತೆ: 04.04.2026. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 04.05.2026, 17:00 ಗಂಟೆ. ಬಿಡ್ ದಸ್ತಾವೇಜು ತೆರೆಯುವುದು: 05.05.2026, 17:15 ಗಂಟೆಗೆ.
ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆಯಬಹುದು. ಆಸಕ್ತ ಬಿಡ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಬಿಡ್ಡುದಾರರು ಕೆಪಿಪಿ ಸಹಾಯವಾಣಿ ಸಂಪರ್ಕ ಸಂಖ್ಯೆ (+91–8046010000 +91–8068948777) ಅಥವಾ ಇಮೇಲ್ support@eprochelpdesk.comಗೆ ಸಂಪರ್ಕಿಸಲು ಕೋರಲಾಗಿದೆ.
ಹೆಚ್ಚಿನ ಮಾಹಿತಿಯನ್ನು ಕೆಳಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
“ಬೆಸ್ಕಾಂ ಮಿತ್ರ” Mobile APP ಡೌನ್‌ಲೋಡ್ ಮಾಡಿಕೊಳ್ಳಿ
ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ.) ಖರೀದಿ, ಬೆವಿಕಂ

## ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಯಗಚಿ ಯೋಜನಾ ವಿಭಾಗ, ಬೇಲೂರು, ಹಾಸನ ಜಿಲ್ಲೆ

### ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 13/2025–26 ದಿನಾಂಕ: 31–03–2026 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆಗಳಲ್ಲಿ ದರ್ಜೆ–II ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಾರದರ್ಶಕ ಕಾಯಿದೆ KW-3 ರ ಅನ್ವಯ ಐಟಂವಾರು ಅಲ್ಪಾವಧಿ ಟೆಂಡರ್‌ಗಳನ್ನು E-Procurement PlatForm (https://kppp.karnataka.gov.in) ನಲ್ಲಿ ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಯಗಚಿ ಯೋಜನಾ ವಿಭಾಗ, ಬೇಲೂರು ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿವೆ. (1)ಟೆಂಡರ್ ಪ್ರೊಸೆಸಿಂಗ್ ಫೀ: https://kppp.karnataka.gov.in ನಲ್ಲಿ ನೋಡುವುದು (2) E-Procurement ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ: ದಿನಾಂಕ: 02–04–2026 ರಿಂದ ದಿನಾಂಕ: 10–04–2026 ವರೆಗೆ ಸಂಜೆ 4.00 ಘಂಟೆವರೆಗೆ (3) ಟೆಂಡರ್ ತೆರೆಯುವ ದಿನಾಂಕ: 13–04–2026 ಬೆಳಿಗ್ಗೆ 11.00 ಘಂಟೆಗೆ (4) ಕಾಮಗಾರಿಗಳ ಸಂಖ್ಯೆ: 01 (ಒಂದು) (5) ಕೆಲಸದ ಕಾಲಮಿತಿ : 06 ತಿಂಗಳು (ಮಳೆಗಾಲ ಸೇರಿ) (6) ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ: ರೂ.83.72 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) (7) ಇ.ಎಂ.ಡಿ. ಮೊತ್ತ ರೂ. 1.67 ಲಕ್ಷಗಳು (8)ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ ಇಲಾಖೆ ದರ್ಜೆ–III ಮತ್ತು ಮೇಲ್ಪಟ್ಟ ವರ್ಗ. ಸೂಚನೆ: 1. ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2. ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು KPP portal https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಕಾನೀನಿನಿ, ಯಗಚಿ ಯೋಜನಾ ವಿಭಾಗ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/01/ಕೆಎಸ್‌ಎಂಸಿಎ/2026–27

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಕರ್ನಾಟಕ ಸರ್ಕಾರ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯ,
ಬಿ4/3 ವಿವೇಕ ನಗರ ಪಶ್ಚಿಮ,ವಿಜಯಪುರ–586103
ಕಛೇರಿ ವಿಳಾಸ: ದೂರವಾಣಿ ಸಂಖ್ಯೆ:– 08352–276354
ಇ–ಮೇಲ್ ವಿಳಾಸ:– dcpobijapur@gmail.com

### ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ವಿಜಯಪುರ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ ಹಾಗೂ ಬಸ್ ಸ್ಟ್ಯಾಂಡ್ ಮಕ್ಕಳ ಸಹಾಯವಾಣಿ ಕಛೇರಿಗೆ ಅವಶ್ಯವಿರುವ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯೋಜನೆ ಮಾಡಲು ಮಾನವ ಸಂಪನ್ಮೂಲ ಸೇವೆಯನ್ನು ಗುರುತಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000ರ ಪ್ರಕಾರ E-Procurement ಮೂಲಕ ಪಡೆಯಲು ಅಲ್ಪಾವಧಿ ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಪ್ರಕಟಣೆ ವಿವರ ಕೆಳಗಿನಂತಿದೆ.
1) ಟೆಂಡರ್ ಪ್ರಾರಂಭಿಸುವ ದಿನಾಂಕ : 01.04.2026
2) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 08.04.2026 ಸಾಯಂಕಾಲ 5.00 ಘಂಟೆ.
3) ಟೆಂಡರ್ ಅಂದಾಜು ಮೌಲ್ಯ ರೂ. 75,00,000/–
4) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತವನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು. ರೂ.1,50,000/–
5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ :09.04.2026 ಸಮಯ ಸಾಯಂಕಾಲ 5:15 ಘಂಟೆ.
6) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ : 10.04.2026 ಸಮಯ ಸಾಯಂಕಾಲ 5:30 ಘಂಟೆ.
7) ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿವೇಕ ನಗರ ಪಶ್ಚಿಮ, ವಿಜಯಪುರ ದೂರವಾಣಿ ಸಂಖ್ಯೆ: 08352–295261, e-mail id: dcpobijapur@gmail.com
Website: www.eproc.karnataka.gov.in
ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿಜಯಪುರ
ವಾಸಾಸಂಇ/ವಿಜಯಪುರ/004/ಕೆಎಸ್‌ಎಂಸಿಎ/2026–27

## ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ – 586201
ತಾ: ನಿಡಗುಂದಿ, ಜಿ:ವಿಜಯಪುರ.
ಸಂ:ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ–ವಿಭಾಗ/ಡಿ.ಎಮ್/Inlet/2025–26/2105 ದಿನಾಂಕ:27.03.2026

### ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ.ಎಲ್.ಬಿ.ಸಿ ವಿಭಾಗ, ಆಲಮಟ್ಟಿ, ತಾ: ನಿಡಗುಂದಿ ಜಿಲ್ಲೆ: ವಿಜಯಪುರ ಇವರು ಶೇಕಡಾವಾರು ಟೆಂಡರನ್ನು KPWD Class-II & above ಗುತ್ತಿಗೆದಾರರಿಂದ “Restoration of inlets at Ch: 114.500, 117.200, 126.200 Km and approach slab at Ch: 126.300 Km and CC Lining of CLIS East Main Canal” ಕಾಮಗಾರಿಗೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಕೆ.ಟಿ.ಟಿ.ಪಿ ಕಾಯ್ದೆ ನಿಯಮ–28 ರನ್ವಯ KW-2 ರಲ್ಲಿ ಏಕ–ಲಕೋಟೆ ಪದ್ಧತಿಯನ್ನು ಅನುಸರಿಸಲಾಗುವದು. ಗುತ್ತಿಗೆದಾರರು ಭದ್ರತಾ ಠೇವಣಿ ಸಹಿತ ಏಕ ಲಕೋಟೆಯಲ್ಲಿ ಟೆಂಡರನ್ನು ಸಂದಾಯ ಮಾಡುವಂತೆ ಕೋರಲಾಗಿದೆ. ಕಾಮಗಾರಿಯ ಟೆಂಡರಗಿಟ್ಟ ಮೊತ್ತ ರೂ. 22.95 ಲಕ್ಷಗಳು.
ಇಂಡೆಂಟ್ ಸಂಖ್ಯೆ: KBJNL/2025-26/CN/WORK_INDENT 2787
ವರ್ಗ: ಸಾಮಾನ್ಯ
ಟೆಂಡರ ಪ್ರಕ್ರಿಯೆಯ ವಿವಿಧ ಹಂತಗಳು:
1) ಟೆಂಡರ ಡಾಕುಮೆಂಟನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸುವ & ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ ದಿನಾಂಕ: 31.03.2026 ರಿಂದ 16.04.2026 ರ ಸಾಯಂಕಾಲ 5.00 ಘಂಟೆಯವರೆಗೆ.
2) ತಾಂತ್ರಿಕ ಬಿಡ್/ಆರ್ಥಿಕ ಬಿಡ್ ತೆರೆಯುವ ದಿನಾಂಕ: 18.04.2026 ಬೆಳಿಗ್ಗೆ 11.00 ಘಂಟೆಯ ನಂತರ.
ಯಾವದೇ ಸಂದರ್ಭದಲ್ಲಾದರೂ, ಯಾವದೇ ಕಾರಣ ನೀಡದೇ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯ ಅವಧಿಯಲ್ಲಿ ಅಥವಾ https://kppp.karnataka.gov.in/#/portal/portal ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/847/ಕೆಎಸ್‌ಎಂಸಿಎ/2025–26

## ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029. ಕರ್ನಾಟಕ
ಫೋನ್: 080–29753354/56, ಇ–ಮೇಲ್: karbuildworkerswelfare@gmail.com

No: KBOCWWB/NOTIFICATIONs/2025-26 Date:31-03-2026

### ಇ–ಟೆಂಡರ್ ಪ್ರಕಟಣೆ

ಈ ಅಧಿಸೂಚನೆ ಮತ್ತು ಟೆಂಡರ್ ದಾಖಲೆಯಲ್ಲಿ ವಿವರಿಸಿದ ನಿಯಮಗಳ ಪ್ರಕಾರ ಟೆಂಡರನ್ನು (ಎರಡು ಬಿಡ್ ವ್ಯವಸ್ಥೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಕೆಳಗೆ ತಿಳಿಸಿರುವ ಟೆಂಡರ್‌ಗಳನ್ನು ಈ ಮೂಲಕ ಆಹ್ವಾನಿಸಲಾಗಿದೆ
1. ಕರ್ನಾಟಕ ರಾಜ್ಯಾದ್ಯಂತ ಕಾರ್ಮಿಕ ಇಲಾಖೆಯ ಕಚೇರಿಗಳಿಗೆ ಆಲ್–ಇನ್–ಒನ್ ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು, ಸ್ಕ್ಯಾನರ್‌ಗಳು ಮತ್ತು ಯುಪಿಎಸ್‌ಗಳ ಪೂರೈಕೆ, ವಿತರಣೆ ಮತ್ತು ಸ್ಥಾಪನೆಗಾಗಿ ಟೆಂಡರ್
2. ಪ್ಯಾಕೇಜ್ (ಬಿ–1) ಮೈಸೂರು ವಿಭಾಗದ ಕಾರ್ಯಕ್ಕಾಗಿ ಯೋಜನಾ ನಿರ್ವಹಣಾ ಸಲಹೆಗಾರರ ಸೇವೆಗಳು – ಶ್ರಮಿಕ್ ವಸತಿ ಶಾಲೆಗಳ ನಿರ್ಮಾಣ (4 ಸಂಖ್ಯೆ) (6 ನೇ ತರಗತಿಯಿಂದ 12 ನೇ ತರಗತಿಯವರೆಗೆ) 1. ಯಲಗೊಂಡಹಳ್ಳಿ, ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ. 2. ಹಬ್ಬನಘಟ್ಟ ಗ್ರಾಮ, ಅರಸೀಕೆರೆ ತಾಲೂಕು, ಹಾಸನ ಜಿಲ್ಲೆ, 3. ಅಂಜಾರು ಗ್ರಾಮ, ಉಡುಪಿ ತಾಲೂಕು & ಜಿಲ್ಲೆ & 4. ಕುರಿಯ ಗ್ರಾಮ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ.
3. ಪ್ಯಾಕೇಜ್ (ಬಿ–2) ಮೈಸೂರು ವಿಭಾಗದ ಕಾರ್ಯಕ್ಕಾಗಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ಸೇವೆಗಳು – ಶ್ರಮಿಕ್ ವಸತಿ ಶಾಲೆಗಳ ನಿರ್ಮಾಣ (4 ಸಂಖ್ಯೆ) (6ನೇ ತರಗತಿಯಿಂದ 12ನೇ ತರಗತಿಯವರೆಗೆ) 1. ಚೊರನಹಳ್ಳಿ ಗ್ರಾಮ, ಮೈಸೂರು ತಾಲೂಕು & ಜಿಲ್ಲೆ 2.ಯಡಿಯೂರು ಹಳ್ಳಿ ಚಾಮರಾಜನಗರ ತಾಲ್ಲೂಕು & ಜಿಲ್ಲೆ, 3. ಬೀರೇಶ್ವರ ಗ್ರಾಮ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ & 4. ಚನ್ನಾಪುರ ಗ್ರಾಮ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.
ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಯವರು ಕೆ.ಪಿ.ಪಿ.ಪೋರ್ಟಲ್ www.kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಕೆ.ಪಿ.ಪಿ.ಪೋರ್ಟಲ್‌ನಂತೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/–ಜಂಟಿ ಕಾರ್ಯದರ್ಶಿ, ಕ.ಕ.ಇ.ನಿ.ಕಾ.ಕ.ಮಂಡಳಿ
ವಾಸಾಸಂಇ/ವಾಪ್ರ/18/ಹೈಟೆಕ್ ಮೀಡಿಯಾ/2026–27

## ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ) ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–2/ಟೆಂಡರ/2025–26/9134 ದಿನಾಂಕ: 31/03/2026

### ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025–26 ನೇ ಸಾಲಿನ ಲೆಕ್ಕ ಶೀರ್ಷಿಕೆ 3054–ಜಿಮುರ ನಿರ್ವಹಣೆ ಅಡಿ 4 ಕಾಮಗಾರಿಗಳು, 3054–ರಾಹೆ ನಿರ್ವಹಣೆ ಅಡಿ 1 ಕಾಮಗಾರಿ, 4059–ಮಾನ್ಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 2 ಕಾಮಗಾರಿಗಳು 5054–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ – ಬಂಡವಾಳ ವೆಚ್ಚ ಅಡಿ 1 ಕಾಮಗಾರಿ ಹಾಗೂ 4059–ಮಾನ್ಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ – ಎಸ್.ಸಿ.ಪಿ. (CMIDP), ಹೀಗೆ ಒಟ್ಟು 9 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 20.00 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 132.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಕ್ರ.ಸಂ. 1, 3, 5 ರಿಂದ 7 & 9 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 10–04–2026 ರಂದು (11.00 ಗಂಟೆಗೆ) 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 13–04–2026 (ಸಾಯಂಕಾಲ 5.30 ಗಂಟೆಯವರೆಗೆ) 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 16–04–2026 (ಸಾಯಂಕಾಲ 5.00 ಗಂಟೆಯವರೆಗೆ) 4)ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (Two Cover System): 18–04–2026 (ಸಾಯಂಕಾಲ 4.30 ಗಂಟೆಗೆ) 5) ಹಣಕಾಸು ಬಿಡ್ಡನ್ನು ತೆರೆಯುವ ದಿನಾಂಕ (Two Cover System): “ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ” 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕ್ರ.ಸಂ. 2, 4 ಮತ್ತು 8 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 16–04–2026 ರಂದು (11.00 ಗಂಟೆಗೆ) 2) ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 18–04–2026 (ಸಾಯಂಕಾಲ 5.30 ಗಂಟೆಯವರೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 21–04–2026 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ (Two Cover System): 23–04–2026 (ಸಾಯಂಕಾಲ 4.30 ಗಂಟೆಗೆ) 5)ಹಣಕಾಸು ಬಿಡ್ಡನ್ನು ತೆರೆಯುವ ದಿನಾಂಕ (Two Cover System): “ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ” 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-12/KSMCA/2026-27

# ತಾಳೆಯಾಗದ 1.10 ಕೋಟಿ ಮತದಾರರ ವಿವರ

## ರಾಜ್ಯದಲ್ಲಿ ಎಸ್‌ಐಆರ್ ಪೂರ್ವಭಾವಿ ಪ್ರಕ್ರಿಯೆ ಶೇ 80ರಷ್ಟು ವಿವರಗಳಷ್ಟೇ ಹೋಲಿಕೆ

• ಜಯಸಿಂಹ ಆರ್.

ಮತದಾರರ ಪಟ್ಟಿ ಪರಿಶೀಲನೆ

**ಬೆಂಗಳೂರು:** ರಾಜ್ಯದಲ್ಲಿ 2025ರ ಡಿಸೆಂಬರ್‌ನಲ್ಲಿ ಆರಂಭವಾಗಿದ್ದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಪೂರ್ವ ಭಾವಿ ಪ್ರಕ್ರಿಯೆಯು ಅಂತಿಮ ಹಂತಕ್ಕೆ ಬಂದಿದ್ದು, 5.57 ಕೋಟಿ ಮತದಾರರ ಪೈಕಿ 1.10 ಕೋಟಿ ಜನರ ವಿವರ ಇನ್ನೂ ತಾಳೆಯಾಗಿಲ್ಲ.

ಚುನಾವಣಾ ಆಯೋಗವು 11 ರಾಜ್ಯಗಳಲ್ಲಿ ಎಸ್‌ಐಆರ್ ನಡೆಸಿದೆ. ಎಸ್‌ಐಆರ್‌ಗೆ ಪೂರ್ವಭಾವಿಯಾಗಿ ರಾಜ್ಯದಲ್ಲಿ 2002ರ ಮತ್ತು 2025ರ ಮತದಾರರ ಪಟ್ಟಿಯನ್ನು ನಾಲ್ಕು ಹಂತದಲ್ಲಿ ಹೋಲಿಸಿ ನೋಡಲಾಗಿದೆ. 2025ರ ಮತದಾರರ ಪಟ್ಟಿಯ ಪ್ರಕಾರ ರಾಜ್ಯದಲ್ಲಿ 5.57 ಕೋಟಿ ಮತದಾರರು ನೋಂದಣಿ ಆಗಿದ್ದಾರೆ. ಇದೇ ಮಾರ್ಚ್ 26ರ ವೇಳೆಗೆ 4.46 ಕೋಟಿ ಮತದಾರರ ವಿವರಗಳಷ್ಟೇ ಹೋಲಿಕೆಯಾಗಿವೆ.

2002ರ ಮತ್ತು 2025ರ ಮತದಾರರ ಪಟ್ಟಿಗಳ ಮತಗಟ್ಟೆ ಮಟ್ಟದ ಹೋಲಿಕೆ, ವಿಧಾನಸಭಾ ಕ್ಷೇತ್ರವಾರು ಹೋಲಿಕೆ, ಜಿಲ್ಲಾವಾರು ಹೋಲಿಕೆ ಮಾಡಿ ನೋಡಲಾಗಿದೆ. ನಂತರದ ಹಂತದಲ್ಲಿ ಆಯೋಗವು ಮತಗಟ್ಟೆ ಅಧಿಕಾರಿಗಳ (ಬಿಎಲ್‌ಒ) ಮೇಲ್ವಿಚಾರಕರಿಗೆ ನೂತನ ತಂತ್ರಾಂಶ ಒದಗಿಸಿದ್ದು, 2025ರ ಮತದಾರರ ಪಟ್ಟಿಯಲ್ಲಿ ಇರುವವರ ಪೋಷಕರ ವಿವರಗಳನ್ನು ಅದರಲ್ಲಿ ಪರಿಶೀಲಿಸಬಹುದಾಗಿದೆ. ಇಷ್ಟೂ ಹಂತಗಳ ಪರಿಶೀಲನೆಯ ನಂತರವೂ 1.10 ಕೋಟಿ ಮತದಾರರ ವಿವರಗಳು ತಾಳೆಯಾಗಿಲ್ಲ. ಇದು ರಾಜ್ಯದ ಒಟ್ಟು ಮತದಾರರ ಶೇ 20ರಷ್ಟಾಗುತ್ತದೆ.

2025ರ ಮತದಾರರ ಪಟ್ಟಿಯಲ್ಲಿ ಇರುವವರ ಪೈಕಿ, 2002ರ ಮತದಾರರ ಪಟ್ಟಿಯಲ್ಲಿ ವಿವರ ಲಭ್ಯವಾದವರ ಸಂಖ್ಯೆ 2.25 ಕೋಟಿ ಮಾತ್ರ. 2002ರ ಮತದಾರರ ಪಟ್ಟಿಯಲ್ಲಿ ಇಲ್ಲದೇ ಇರುವ ಮತದಾರರ ಪೋಷಕರ ವಿವರಗಳನ್ನು ಹೋಲಿಸಿ ನೋಡಲಾಗಿದೆ. ಆಗ ಇನ್ನೂ 2.21 ಕೋಟಿ ಮತದಾರರ ವಿವರಗಳು ತಾಳೆಯಾಗಿವೆ.

**'ನನ್ನ ಮತ, ನನ್ನ ಹಕ್ಕು' ಆಕ್ಷೇಪ:** ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪೂರ್ವಭಾವಿ ಪ್ರಕ್ರಿಯೆಯು ಪಾರದರ್ಶಕವಾಗಿಲ್ಲ ಎಂದು 'ನನ್ನ ಮತ, ನನ್ನ ಹಕ್ಕು' ಸಂಘಟನೆಯು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಅವರಿಗೆ ಆಕ್ಷೇಪಣಾ ಪತ್ರ ಸಲ್ಲಿಸಿದೆ.

'ಯಾವುದೇ ಕೈಪಿಡಿ ಇಲ್ಲದೆ ಎಸ್‌ಐಆರ್ ಪೂರ್ವಭಾವಿ ಪ್ರಕ್ರಿಯೆ ನಡೆಸಲಾಗುತ್ತಿದೆ. ಈ ಪ್ರಕ್ರಿಯೆಯ ಅಂದಂದಿನ ವಿವರಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡುತ್ತಿಲ್ಲ. ಈ ಪ್ರಕ್ರಿಯೆ ಹೇಗೆ ನಡೆಯುತ್ತಿದೆ? ಅದರ ಸ್ಥಿತಿಗತಿ ಏನು ಎಂಬುದರ ಬಗ್ಗೆ ಜನರಿಗೆ ಮಾಹಿತಿಯೇ ಇಲ್ಲ' ಎಂದು ಆಕ್ಷೇಪ ಎತ್ತಿದೆ.

'ಆಯೋಗವು ಒದಗಿಸಿದ ದಾಖಲೆಗಳಲ್ಲಿ 4.46 ಕೋಟಿ ಮತದಾರರ ವಿವರ ತಾಳೆಯಾಗಿದೆ ಎಂದು ತೋರಿಸಲಾಗಿದೆ. ಆದರೆ, ಬಿಎಲ್‌ಒಗಳು ಮತ್ತು ಆಯೋಗದ ತಂತ್ರಾಂಶವು ಹೋಲಿಸಿ ನೋಡಿದ ಮತದಾರರ ಸಂಖ್ಯೆ 19.13 ಲಕ್ಷ ಮಾತ್ರ. ಹೀಗಿರುವಾಗ 4.46 ಕೋಟಿ ಮತದಾರರ ವಿವರ ತಾಳೆಯಾಗಿದೆ ಎಂದು ಯಾವ ಆಧಾರದಲ್ಲಿ ಹೇಳುತ್ತೀರಿ' ಎಂದು ಪ್ರಶ್ನಿಸಿದೆ.

ಸಂಘಟನೆಯ ಪರವಾಗಿ ಐಶ್ವರ್ಯ, ವಿನಯ್ ಶ್ರೀನಿವಾಸ, ಶ್ರೀಪಾದ ಭಟ್, ಗೀತಾ ಭಟ್, ಲೇಖಾ ಅಡವಿ, ಐಸಾಕ್ ಅಮೃತ್‌ರಾಜ್ ಈ ಪತ್ರಕ್ಕೆ ಸಹಿ ಮಾಡಿದ್ದಾರೆ.

### ಲೋಪದ ಅಪಾಯ: ಕಳವಳ

'2002ರ ಮತದಾರರ ಪಟ್ಟಿಯಲ್ಲಿ ಇಲ್ಲದೇ ಇರುವವರ ವಿವರಗಳನ್ನು ಅವರ ಪೋಷಕರ ಮತದಾರರ ಚೀಟಿ (ಎಪಿಕ್) ವಿವರಗಳೊಂದಿಗೆ ಹೋಲಿಸಿ ನೋಡಲಾಗುತ್ತಿದೆ. ಇದಕ್ಕಾಗಿ ಚುನಾವಣಾಧಿಕಾರಿ ಕಚೇರಿಯು ಒಂದು ತಂತ್ರಾಂಶವನ್ನು ಒದಗಿಸಿದೆ. ಈ ತಂತ್ರಾಂಶವು ವಿವರಗಳನ್ನು ಹೋಲಿಸಿ ಕ್ಷಿಪ್ರವಾಗಿ ಮಾಹಿತಿ ಒದಗಿಸುತ್ತದೆ. ಆದರೆ ನಿಖರತೆ ಕಡಿಮೆ. ತಂತ್ರಾಂಶವನ್ನೇ ಆಧರಿಸಿದ ಹೋಲಿಕೆಯಲ್ಲಿ ಲೋಪವಾಗುವ ಅಪಾಯವಿದೆ' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಪಾಲಿಕೆಯಲ್ಲಿನ ಬಿಎಲ್‌ಒ ಮೇಲ್ವಿಚಾರಕರೊಬ್ಬರು ಕಳವಳ ವ್ಯಕ್ತಪಡಿಸಿದರು.

'ತಂತ್ರಾಂಶದಲ್ಲಿ ಮತದಾರರ ಹೆಸರು ಮತ್ತು ಅವರ ತಂದೆಯ ಹೆಸರು ಹಾಕಿದರೆ, ತಂದೆಯ ಹೆಸರಿನಲ್ಲಿ ಇರುವ ಎಲ್ಲ ಮತದಾರರ ವಿವರಗಳನ್ನು ಅದು ಒದಗಿಸುತ್ತದೆ. ಮತದಾರರು ಒದಗಿಸಿದ ಅವರ ತಂದೆಯ ಜನ್ಮದಿನಾಂಕ ಮತ್ತು ತಂತ್ರಾಂಶವು ಒದಗಿಸಿದ ಜನ್ಮದಿನಾಂಕ ಹಾಗೂ ವಿಳಾಸವನ್ನು ಪರಸ್ಪರ ಹೋಲಿಸಿ, ವಿಲೇವಾರಿ ಮಾಡಬೇಕಿದೆ. ಆದರೆ ಹಲವು ಸಂದರ್ಭಗಳಲ್ಲಿ ಜನ್ಮದಿನಾಂಕ ಜನವರಿ 1 ಅಥವಾ ಜೂನ್ 1 ಎಂದು ಇರುತ್ತದೆ. ಇತರ ವಿವರಗಳು ಹೋಲಿಕೆ ಆಗದೇ ಇದ್ದರೂ ಹೆಸರು ಮತ್ತು ಜನ್ಮದಿನಾಂಕದ ಆಧಾರದಲ್ಲಿ ಬಿಎಲ್‌ಒಗಳು ವಿಲೇವಾರಿ ಮಾಡಿದ ಉದಾಹರಣೆಗಳು ಸಾಕಷ್ಟಿವೆ' ಎಂದು ವಿವರಿಸಿದರು.

## ಸುದ್ದಿ 2 ನಿಮಿಷ

### ವಿಜಯ್ ಪ್ರಚಾರದ ವೇಳೆ ಭದ್ರತಾ ಲೋಪ: ಟಿವಿಕೆ ಆರೋಪ

**ಚೆನ್ನೈ (ಪಿಟಿಐ):** 'ವೈ' ಶ್ರೇಣಿಯ ಭದ್ರತೆ ಹೊಂದಿರುವ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸಂಸ್ಥಾಪಕ, ನಟ ವಿಜಯ್ ಅವರು ಪೆರಂಬೂರಿನಲ್ಲಿ ಮಾರ್ಚ್ 30ರಂದು ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದ ಸಂದರ್ಭದಲ್ಲಿ ಸರಿಯಾದ ಭದ್ರತೆ ಒದಗಿಸಿರಲಿಲ್ಲ ಎಂದು ಟಿವಿಕೆ ಬುಧವಾರ ಆರೋಪಿಸಿದೆ.

ಈ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿರುವ ಟಿವಿಕೆ ಪಕ್ಷದ ಜಂಟಿ ಪ್ರಧಾನ ಕಾರ್ಯದರ್ಶಿ ಸಿಟಿಆರ್ ನಿರ್ಮಲ್ ಕುಮಾರ್, 'ವಿಜಯ್ ಅವರಿಗೆ 'ವೈ' ಭದ್ರತೆ ನೀಡಬೇಕಾಗಿದ್ದ ರಾಜ್ಯ ಸರ್ಕಾರ, ಭದ್ರತಾ ವ್ಯವಸ್ಥೆಯಲ್ಲಿ ಲೋಪವೆಸಗಿದೆ' ಎಂದು ಆರೋಪಿಸಿದ್ದಾರೆ.

ಮುಂದೆ ನಡೆಯಲಿರುವ ವಿಜಯ್ ಅವರ ಚುನಾವಣಾ ಪ್ರಚಾರ ರ‍್ಯಾಲಿ ಮತ್ತು ಸಾರ್ವಜನಿಕ ಸಭೆಗಳಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಮತ್ತು ಸಂಚಾರ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಅವರು ಪತ್ರದಲ್ಲಿ ಮನವಿ ಮಾಡಿದ್ದಾರೆ.

### ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಬಿಜೆಪಿ ದೂರು

**ಬೆಂಗಳೂರು:** 'ನಮ್ಮ ಪಕ್ಷದ ನಾಯಕರ ವಿರುದ್ಧ ಅವಹೇಳನಕಾರಿ ಮಾತುಗಳನ್ನು ಆಡುತ್ತಿರುವ ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಬಿಜೆಪಿಯು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ದೂರು ನೀಡಿದೆ.

ದೂರು ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ, 'ದಾವಣಗೆರೆ ದಕ್ಷಿಣ, ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಪ್ರಚಾರದ ವೇಳೆ ಪ್ರದೀಪ್ ಅವರು ಬಿಜೆಪಿ ನಾಯಕರನ್ನು ಟೀಕಿಸುತ್ತಿದ್ದಾರೆ. ಚುನಾವಣಾ ನೀತಿ ಸಂಹಿತೆಗೆ ವಿರುದ್ಧವಾಗಿ ಮಾತನಾಡುತ್ತಿದ್ದು, ಅವರ ವಿರುದ್ಧ ತಕ್ಷಣ ಕ್ರಮ ತೆಗೆದುಕೊಳ್ಳದಿದ್ದರೆ, ಹೋರಾಟ ನಡೆಸುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ಬಿಜೆಪಿಯ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಹರೀಶ್ ಮಾತನಾಡಿ, 'ಶಿಕ್ಷಕರ ಸಂಘದ ಅಧ್ಯಕ್ಷ, ಸರ್ಕಾರಿ ನೌಕರ ಚಂದ್ರಶೇಖರ್ ನುಗ್ಗಿ ಅವರು ಮುಖ್ಯಮಂತ್ರಿ ಜತೆ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾರೆ. ಅವರನ್ನು ಸೇವೆಯಿಂದ ವಜಾ ಮಾಡಬೇಕು ಎಂದೂ ದೂರು ನೀಡಿದ್ದೇವೆ' ಎಂದರು.

'ಕಾಂಗ್ರೆಸ್ ಪಕ್ಷ ಧರ್ಮದ ಆಧಾರದಲ್ಲಿ ಚುನಾವಣೆ ನಡೆಸುತ್ತಿದೆ. ಇದು ನೀತಿ ಸಂಹಿತೆಯ ಉಲ್ಲಂಘನೆ. ಪ್ರದೀಪ್ ಈಶ್ವರ್ ವಿರುದ್ಧ ಕ್ರಮ ಕೈಗೊಂಡು ಅವರನ್ನು ಕ್ಷೇತ್ರಗಳಿಂದ ಹೊರಕ್ಕೆ ಕಳುಹಿಸುವಂತೆ ಒತ್ತಾಯಿಸಿದ್ದೇವೆ' ಎಂದು ಹೇಳಿದರು.

## ನಾನು ಅನ್ನದ ರಾಮಯ್ಯ: ಸಿ.ಎಂ

ಪ್ರಜಾವಾಣಿ ವಾರ್ತೆ

**ದಾವಣಗೆರೆ:** 'ನಾನು ಬಡವರ ಪಾಲಿನ ಅನ್ನದ ರಾಮಯ್ಯನೇ ಹೊರತು ಸಾಲದರಾಮಯ್ಯ ಅಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಪ್ರತಿಪಾದಿಸಿದರು.

ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರ ಬುಧವಾರ ಮತಯಾಚಿಸಿದ ಅವರು, ರೋಡ್ ಶೋ, ಬಹಿರಂಗ ಸಭೆಗಳಲ್ಲಿ ಸರ್ಕಾರದ ಆರ್ಥಿಕ ಸ್ಥಿತಿಯನ್ನು ವಿವರಿಸಿದರು.

'ವಿರೋಧ ಪಕ್ಷದ ನಾಯಕ ಆರ್. ಅಶೋಕ ನನ್ನನ್ನು 'ಸಾಲದ ರಾಮಯ್ಯ' ಎಂದು ಟೀಕಿಸುತ್ತಿದ್ದಾರೆ. ನರೇಂದ್ರ ಮೋದಿ ಎಷ್ಟು ಸಾಲ ಮಾಡಿದ್ದಾರೆ ಎಂಬುದು ಅಶೋಕಗೆ ಗೊತ್ತಿದೆಯೇ? ಈವರೆಗಿನ ಎಲ್ಲ ಪ್ರಧಾನಿಗಳಿಗಿಂತ ಹೆಚ್ಚು ಸಾಲ ಮಾಡಿದ ನರೇಂದ್ರ ಮೋದಿ ಅವರನ್ನು ಏನೆಂದು ಕರೆಯಬೇಕು' ಎಂದು ಪ್ರಶ್ನಿಸಿದರು.

'ಬಿಜೆಪಿ ಮೇಲ್ವರ್ಗದ ಪರವಾದ ಆರ್ಥಿಕ ಸಿದ್ಧಾಂತದ ಜೊತೆಗಿದೆ. ಕಾಂಗ್ರೆಸ್ ತಳಸಮುದಾಯದ ಪರವಾದ ಆರ್ಥಿಕ ಸಿದ್ಧಾಂತ ಪ್ರತಿಪಾದಿಸುತ್ತದೆ. ಹೀಗಾಗಿ, 'ಪಂಚ ಗ್ಯಾರಂಟಿ' ಸೇರಿದಂತೆ ಬಡವರ ಪರ ಯೋಜನೆಗಳನ್ನು ಬಿಜೆಪಿ ಟೀಕಿಸುತ್ತದೆ' ಎಂದರು.

**'5ರಿಂದ ಪ್ರಚಾರಕ್ಕೆ ಸಚಿವ ಜಮೀರ್':** 'ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಏ.5ರಿಂದ ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯ ಪ್ರಚಾರಕ್ಕೆ ಬರಲಿದ್ದಾರೆ' ಎಂದು ಮುಖ್ಯಮಂತ್ರಿ ತಿಳಿಸಿದರು.

## ಅಸ್ಸಾಂ ಚುನಾವಣಾ ರ‍್ಯಾಲಿಯಲ್ಲಿ ಕಾಂಗ್ರೆಸ್ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ

# 'ನುಸುಳುಕೋರರ ವೋಟ್ ಬ್ಯಾಂಕ್ ಸೃಷ್ಟಿ'

**ಗೊಗಮುಖ್/ಅಸ್ಸಾಂ (ಪಿಟಿಐ):** 'ಅಸ್ಸಾಂನಲ್ಲಿ ಕಾಂಗ್ರೆಸ್ ಆಡಳಿತಕ್ಕೆ ಬಂದರೆ ನುಸುಳುಕೋರರ ರಕ್ಷಣೆಗಾಗಿ ಹೊಸ ಕಾನೂನನ್ನೇ ಜಾರಿಗೊಳಿಸಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಧೆಮಾಜಿ ಜಿಲ್ಲೆಯ ಗೊಗಮುಖ್‌ನಲ್ಲಿ ಬುಧವಾರ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಬಹುಸಂಖ್ಯಾತ ಸಮುದಾಯವನ್ನು ಅಲ್ಪಸಂಖ್ಯಾತರನ್ನಾಗಿ ಪರಿವರ್ತಿಸಿ, ಅಸ್ಸಾಂನಲ್ಲಿ ನುಸುಳುಕೋರರ ಶಾಶ್ವತ ವೋಟ್ ಬ್ಯಾಂಕ್ ಸೃಷ್ಟಿಸಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ' ಎಂದು ದೂರಿದರು.

'ಕಾಂಗ್ರೆಸ್ ದೇಶವನ್ನು ವಿಭಜಿಸಲು ಹೊರಟಿದೆ, ಅಂಬೇಡ್ಕರ್ ರಚಿಸಿದ ಸಂವಿಧಾನವನ್ನೂ ಇರಿದು ಗಾಸಿಗೊಳಿಸಿದೆ' ಎಂದು ಆರೋಪಿಸಿದ ಪ್ರಧಾನಿ, 'ಕಾಂಗ್ರೆಸ್‌ಗೆ ದೆಹಲಿಯಲ್ಲಿ ಗಾಂಧಿ ಕುಟುಂಬ ಮತ್ತು ಅಸ್ಸಾಂನಲ್ಲಿ ಗೊಗೊಯಿ ಕುಟುಂಬದ ರಕ್ಷಣೆ ಮಾತ್ರ ಮುಖ್ಯ' ಎಂದರು.

'ಬಿಜೆಪಿ ಆಡಳಿತಕ್ಕೆ ಮರಳಿದರೆ ಏಕರೂಪದ ನಾಗರಿಕ ಸಂಹಿತೆ ಜಾರಿಗೊಳಿಸಲಾಗುವುದು, ಬುಡಕಟ್ಟು ಜನರ ಹಿತಾಸಕ್ತಿ ರಕ್ಷಿಸಲಾಗುವುದು ಮುಖ್ಯವಾಗಿ ಉತ್ತಮ ಆಡಳಿತದ ಮೂಲಕ ಅಸ್ಸಾಂನ ಅಸ್ಮಿತೆ ಉಳಿಯಲಿದೆ. ನುಸುಳುಕೋರರಿಗೆ ಅವಕಾಶವೇ ಇರುವುದಿಲ್ಲ' ಎಂದು ಹೇಳಿದರು.

'ಕಾಂಗ್ರೆಸ್‌ಗೆ ಬ್ರಹ್ಮಪುತ್ರಾ ನದಿಗೆ ಮೂರು ಸೇತುವೆಗಳನ್ನು ನಿರ್ಮಿಸಲು 60ರಿಂದ 65 ವರ್ಷಗಳು ಬೇಕಾದವು. ಆದರೆ, ಬಿಜೆಪಿ 10 ವರ್ಷಗಳಲ್ಲಿ ಐದು ಸೇತುವೆಗಳನ್ನು ನಿರ್ಮಿಸಿ, ಅಭಿವೃದ್ಧಿಗೆ ಹೊಸ ಮುನ್ನೋಟ ನೀಡಿದೆ' ಎಂದರು.

ಬಿಜೆಪಿ ಚುನಾವಣಾ ಪ್ರಣಾಳಿಕೆಯಲ್ಲಿ ಅಸ್ಸಾಂಗೆ ₹1,800 ಕೋಟಿ ಮೊತ್ತದ ಅಭಿವೃದ್ಧಿ ಪ್ಯಾಕೇಜ್ ಘೋಷಿಸಿದೆ.

ಅಸ್ಸಾಂನ 126 ವಿಧಾನಸಭಾ ಕ್ಷೇತ್ರಗಳಿಗೆ ಏಪ್ರಿಲ್ 9ರಂದು ಚುನಾವಣೆ ಹಾಗೂ ಮೇ 4ರಂದು ಮತ ಎಣಿಕೆ ನಡೆಯಲಿದೆ.

### 'ಬಂಟಿ ಔರ್ ಬಬ್ಲಿ' ಸರ್ಕಾರ: ಖೇರಾ

**ಗುವಾಹಟಿ (ಪಿಟಿಐ):** 'ಅಸ್ಸಾಂನ ಜನರನ್ನು ಬಿಜೆಪಿ ವಂಚಿಸುತ್ತಿದೆ. ಬಿಜೆಪಿ ಮುಖಂಡರ ಸಂಪತ್ತು ಮಾತ್ರ 10 ವರ್ಷಗಳಲ್ಲಿ ಎರಡು ಪಟ್ಟು ಹೆಚ್ಚಿದೆ' ಎಂದು ಕಾಂಗ್ರೆಸ್ ಮುಖಂಡ ಪವನ್ ಖೇರಾ ಆರೋಪಿಸಿದ್ದಾರೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಸ್ಸಾಂನಲ್ಲಿ 'ಬಂಟಿ ಔರ್ ಬಬ್ಲಿ' ಸರ್ಕಾರ ಇದೆ. ಈ ಚಿತ್ರದ ಮೊದಲ ಭಾಗ ಈಗ ಪ್ರದರ್ಶನಗೊಳ್ಳುತ್ತಿದೆ. ಜನರು ಮತ ಚಲಾಯಿಸುವ ಮೂಲಕ ಇದರ ಎರಡನೆಯ ಭಾಗ ಬಿಡುಗಡೆಯಾಗದಂತೆ ತಡೆಯಬೇಕು' ಎಂದರು.

ಅಸ್ಸಾಂನಲ್ಲಿ ಬುಧವಾರ ಚುನಾವಣಾ ರ‍್ಯಾಲಿಯ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ದಿಬ್ರುಗಢ ಜಿಲ್ಲೆಯ ಚಹಾತೋಟಕ್ಕೆ ಭೇಟಿ ನೀಡಿದರು. ಕಾರ್ಮಿಕ ಮಹಿಳೆಯರು ಅವರನ್ನು ಸ್ವಾಗತಿಸಿದರು ಪಿಟಿಐ ಚಿತ್ರ

### ಅಸ್ಸಾಂ ಸಿ.ಎಂ ವಿರುದ್ಧ ಪ್ರಿಯಾಂಕಾ ವಾಗ್ದಾಳಿ

ಪ್ರಿಯಾಂಕಾ

**ಗುವಾಹಟಿ (ಪಿಟಿಐ):** ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ವಿರುದ್ಧ ಬುಧವಾರ ವಾಗ್ದಾಳಿ ನಡೆಸಿದರು.

'ಸಂಪನ್ಮೂಲಭರಿತವಾದ ರಾಜ್ಯದಲ್ಲಿ ಜನರಿಗೆ ಏನೂ ಇಲ್ಲ, ಆದರೆ ಕುಟುಂಬವೊಂದು ಮಾತ್ರ ಎಲ್ಲವನ್ನೂ ಲೂಟಿ ಹೊಡೆಯುತ್ತಿದೆ' ಎಂದು ಆರೋಪಿಸಿದರು.

ಸರಣಿ ಚುನಾವಣಾ ರ‍್ಯಾಲಿಗಳಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. 'ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಜನರನ್ನು ಬೆದರಿಸಿ ಆಡಳಿತ ನಡೆಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಶರ್ಮಾ ಅವರು ಹೇಡಿಗಳು' ಎಂದು ಟೀಕಿಸಿದರು.

'ಅಸ್ಸಾಂನಲ್ಲಿ ಒಂದು ಕುಟುಂಬವು ಎಲ್ಲವನ್ನೂ ಲೂಟಿ ಹೊಡೆಯುತ್ತಿದೆ. ಗಣಿ, ಭೂಮಿ ಮತ್ತಿತರ ಸಂಪನ್ಮೂಲಗಳನ್ನು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಹಸ್ತಾಂತರಿಸಿದೆ' ಎಂದು ದೂರಿದರು.

'ಡಬಲ್ ಎಂಜಿನ್ ಸರ್ಕಾರ ಎಂದು ಬಿಜೆಪಿ ಹೇಳುತ್ತಿದೆ. ಆದರೆ ವಾಸ್ತವದಲ್ಲಿ ಅದು ಡಬಲ್ ಗುಲಾಮಿ ಸರ್ಕಾರ. ಅಮೆರಿಕದ ಸೇವೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮುಳುಗಿದ್ದಾರೆ, ಹಿಮಂತ ಬಿಸ್ವಾ ಶರ್ಮಾ ಅವರು ಮೋದಿ ಸೇವೆಯಲ್ಲಿ ತೊಡಗಿದ್ದಾರೆ' ಎಂದು ಹೇಳಿದರು.

## ಸಾಲ; ದಾಖಲೆ ಬಹಿರಂಗಪಡಿಸಿ

**ದಾವಣಗೆರೆ:** 'ಮುಖ್ಯಮಂತ್ರಿ ಸಿದ್ದರಾಮಯ್ಯ ಯಾರ ಅವಧಿಯಲ್ಲಿ ಎಷ್ಟು ಸಾಲ ಆಗಿದೆ ಎಂದು ದಾಖಲೆಗಳನ್ನು ಬಹಿರಂಗಪಡಿಸಲಿ. ವಾಸ್ತವಾಂಶ ಮರೆಮಾಚಿ ತಮ್ಮನ್ನು ಸಮರ್ಥಿಸಿಕೊಳ್ಳುವ ಸ್ಥಿತಿ ಮುಖ್ಯಮಂತ್ರಿ ಅವರಿಗೆ ಬರಬಾರದಿತ್ತು' ಎಂದು ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಎಷ್ಟು ಸಾಲ ಮಾಡಿದ್ದೆವು, ಅವರ ಕಾಲದಲ್ಲಿ ಎಷ್ಟು ಮಾಡಿದ್ದಾರೆ ಎಂಬ ದಾಖಲೆ ನೀಡಲಿ' ಎಂದರು.

'ನಮ್ಮ ಅವಧಿಯಲ್ಲಿ ₹ 50,000 ಕೋಟಿ ಸಾಲ ಆಗಿದ್ದರೆ, ಅವರ ಅವಧಿಯಲ್ಲಿ ₹ 1.40 ಲಕ್ಷ ಕೋಟಿ ಆಗಿದೆ. ಸಿದ್ದರಾಮಯ್ಯ ಚುನಾವಣೆ ಕಾರಣಕ್ಕೆ ಸುಳ್ಳು ಹೇಳುತ್ತಿದ್ದಾರೆ' ಎಂದು ಹೇಳಿದರು.

> 15 ವರ್ಷಗಳಿಂದ ಜೈವಿಕ ಅನಿಲ ಘಟಕ ಇದೆ. ಅದನ್ನೇ ಬಳಸುತ್ತೇವೆ. ತುರ್ತು ಇದ್ದಾಗ ಮತ್ತು ಹೆಚ್ಚು ಜನರು ಬಂದಾಗ, ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಬಳಸುತ್ತೇವೆ
> **ರೇಣುಕಾ ಕಾಮನ್ನಾಚೆ,** ಗ್ರಾಮಸ್ಥೆ

> ನಮ್ಮಲ್ಲಿ ಅರ್ಧಕ್ಕಿಂತ ಹೆಚ್ಚು ಮನೆಗಳಲ್ಲಿ ಜೈವಿಕ ಅನಿಲ ಘಟಕಗಳಿವೆ. ಇಂದಿಗೂ ಅವು ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ ಅಡುಗೆ ಅನಿಲ ಕೊರತೆ ಸಮಸ್ಯೆ ನಮಗೆ ಕಾಡಿಲ್ಲ
> **ಸುನೀತಾ ಪಾಟೀಲ,** ಪಿಡಿಒ

## ಈ ಊರುಗಳಲ್ಲಿಲ್ಲ ಸಿಲಿಂಡರ್ ಚಿಂತೆ

ಒಂದನೇ ಪುಟದಿಂದ...

'ನಮ್ಮ ಮನೆಯಲ್ಲಿ ಜೈವಿಕ ಅನಿಲ ಘಟಕ 35 ವರ್ಷಗಳಿಂದ ಇದೆ. ನಮ್ಮದು ಅವಿಭಜಿತ ಕುಟುಂಬವಾಗಿದ್ದು, ಎಂದಿಗೂ ಅಡುಗೆ ಇಂಧನದ ಕೊರತೆ ಎದುರಿಸಲಿಲ್ಲ. ಅನಿಲ ಉತ್ಪಾದನೆ ನಂತರ ಉಳಿವ ತ್ಯಾಜ್ಯ ಹೊಲಕ್ಕೆ ಗೊಬ್ಬರವಾಗಿ ಬಳಸುತ್ತೇವೆ' ಎಂದು ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಮಹಾದೇವಿ ಮನಗುತ್ತಕರ ಹೇಳಿದರು.

'ಹಿಂದೆ ಖಾದಿ ಮತ್ತು ಗ್ರಾಮೋದ್ಯೋಗ ನಿಗಮ ಜೈವಿಕ ಅನಿಲ ಘಟಕ ಸ್ಥಾಪಿಸಲು ಅವಕಾಶ ನೀಡುತ್ತಿತ್ತು. ಜನಜಾಗರಣ ಸಂಸ್ಥೆ ಮೂಲಕ ಶಿವಾಜಿ ಕಾಗಣೀಕರ ಅದನ್ನು ಮುಂದುವರಿಸಿದರು. ಇಂದು ಜಿಲ್ಲೆಯಲ್ಲಿ ಅತಿಹೆಚ್ಚು ಕಾರ್ಯನಿರ್ವಹಿಸುವ ಜೈವಿಕ ಅನಿಲ ಘಟಕಗಳಿವೆ' ಎನ್ನುತ್ತಾರೆ ಪರಿಸರವಾದಿ ದಿಲೀಪ ಕಾಮತ.

# 'ರೋಹಿಣಿ ವಿರುದ್ಧ ತನಿಖೆಗೆ ಒಪ್ಪಿಗೆ ಕೊಡಿ'

**ಮುಖ್ಯಾಂಶಗಳು**

- ₹13ರ ಕೈಚೀಲಕ್ಕೆ ₹52
- ಡಿಪಿಎಆರ್ ನಿರ್ಧಾರಕ್ಕೆ ತರಾಟೆ

> ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ–1988ಕ್ಕೆ 2018ರಲ್ಲಿ ತರಲಾದ ತಿದ್ದುಪಡಿಯಲ್ಲಿ ಕಲಂ 17ಎ ಅನ್ನು ಮುಗ್ಧರ ಪಾಲಿನ ಗುರಾಣಿಯಾಗಿ ಪರಿಚಯಿಸಲಾಗಿದೆ. ಇದು ಅಪರಾಧಿಗಳಿಗೆ ಆಶ್ರಯ ನೀಡುವುದಕ್ಕಾಗಿ ಅಲ್ಲ
> **ಎಂ.ನಾಗಪ್ರಸನ್ನ,** ನ್ಯಾಯಮೂರ್ತಿ

ಒಂದನೇ ಪುಟದಿಂದ...

ರೋಹಿಣಿ ಸಿಂಧೂರಿ ವಿರುದ್ಧ ತನಿಖೆ ಕೈಗೊಳ್ಳಬೇಕೆಂಬ ಅರ್ಜಿದಾರರ ಪೂರ್ವಾನುಮತಿ ಕೋರಿಕೆಯನ್ನು ನಿರಾಕರಿಸಿದ್ದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಆದೇಶವನ್ನು ರದ್ದುಗೊಳಿಸಿದೆ.

'ಈ ಆದೇಶದ ಪ್ರತಿ ಸ್ವೀಕರಿಸಿದ ದಿನದಿಂದ 4 ವಾರಗಳಲ್ಲಿ ನ್ಯಾಯದ ಹಿತದೃಷ್ಟಿಯಿಂದ ತನಿಖೆಗೆ ಆದೇಶ ನೀಡಬೇಕು' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದೆ.

'ಭ್ರಷ್ಟಾಚಾರದಂತಹ ಗಂಭೀರ ಆರೋಪಗಳನ್ನು ಆರಂಭದಲ್ಲೇ ನಂದಿಸುವುದು ಸಾಧುವಲ್ಲ. ತನಿಖೆಯ ಮೂಲಕ ನಿಜಾಂಶ ಬಯಲು ಮಾಡಲು ಅವಕಾಶ ನೀಡಬೇಕು. ಆಗ ಮಾತ್ರ ಜನರಿಗೆ ಸತ್ಯ ಅರ್ಥವಾಗುತ್ತದೆ. ಹಾಲಿ ಪ್ರಕರಣದ ಆರೋಪಗಳು ಸಾರ್ವಜನಿಕ ಪ್ರಾಮಾಣಿಕತೆಯ ಹೃದಯವನ್ನೇ ಜಖಂಗೊಳಿಸುವಂತಿವೆ. ರೋಹಿಣಿ ಸಿಂಧೂರಿ ಕೇವಲ ಆಡಳಿತಾತ್ಮಕ ಲೋಪ ಎಸಗಿದ್ದಾರೆ ಎಂಬುದಲ್ಲ. ಇವರ ನಿರ್ಧಾರದಿಂದ ಸಾರ್ವಜನಿಕ ಬೊಕ್ಕಸಕ್ಕೆ ಗಂಭೀರವಾದ ನಷ್ಟ ಉಂಟಾಗಿರುವುದು ಗಮನಾರ್ಹ' ಎಂದು ನ್ಯಾಯಪೀಠ ವಿವರಿಸಿದೆ.

'ತನಿಖೆಗೆ ಪೂರ್ವಾನುಮತಿ ನೀಡಲು ನಿರಾಕರಿಸಿರುವ ನಿರ್ಧಾರ ವಸ್ತುನಿಷ್ಠ ಮತ್ತು ತರ್ಕಬದ್ಧವಾಗಿಲ್ಲ. ಆರೋಪಗಳ ಗಂಭೀರತೆಯನ್ನು ಗಮನವಿಟ್ಟು ಪರಿಶೀಲಿಸಿ ನ್ಯಾಯೋಚಿತ ನಿರ್ಧಾರ ಕೈಗೊಳ್ಳಲು ಇಲಾಖೆ ವಿಫಲವಾಗಿದೆ. ಅಷ್ಟೇ ಅಲ್ಲ, ಇದು ಅಧಿಕಾರಿ ವರ್ಗದ ಯಾಂತ್ರಿಕ ಕಸರತ್ತಿನಂತೆ ಕಾಟಾಚಾರದ ಪ್ರತಿಬಿಂಬವಾಗಿದೆ' ಎಂದು ಡಿಪಿಎಆರ್ ನಿರ್ಧಾರವನ್ನು ನ್ಯಾಯಪೀಠ ಟೀಕಿಸಿದೆ.

'ಇಲಾಖಾ ವಿಚಾರಣೆಗಳು ಮತ್ತು ಕ್ರಿಮಿನಲ್ ವಿಚಾರಣೆಗಳು ವಿಭಿನ್ನ ತಳಹದಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ಪರಿಗಣಿಸಲಾಗುವ ಪುರಾವೆ ಮತ್ತು ಉದ್ದೇಶದ ಮಾನದಂಡಗಳನ್ನು ಪ್ರತ್ಯೇಕ ಕಾನೂನುಗಳಿಂದ ನಿಯಂತ್ರಿಸಲಾಗುತ್ತದೆ. ಇಲಾಖಾ ವಿಚಾರಣೆಯಲ್ಲಿ ಅಧಿಕಾರಿಯನ್ನು ದೋಷಮುಕ್ತಗೊಳಿಸಿದ ಮಾತ್ರಕ್ಕೆ ಕ್ರಿಮಿನಲ್ ತನಿಖೆಯನ್ನು ತಡೆಯಲಾಗದು ಎಂಬುದು ನ್ಯಾಯಾಂಗ ಪರಾಮರ್ಶೆಯಲ್ಲಿ ಇತ್ಯರ್ಥವಾಗಿರುವ ಅಂಶ' ಎಂಬುದನ್ನು ಮೆಲುಕುಹಾಕಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಬಿಪಿನ್ ಹೆಗಡೆ ವಾದ ಮಂಡಿಸಿದ್ದರು.

### ಬೊಕ್ಕಸಕ್ಕೆ ₹7.65 ಕೋಟಿ ನಷ್ಟ ಆರೋಪ

'ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಿಸಬೇಕು ಮತ್ತು ಪ್ಲಾಸ್ಟಿಕ್ ಬಳಕೆಗೆ ಇತಿಶ್ರೀ ಹಾಡಿ ಬಟ್ಟೆಯ ಕೈಚೀಲಗಳನ್ನು ಬಳಸಬೇಕು ಎಂದು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ಅವರು ಜಿಲ್ಲೆಯ ನಗರ, ಗ್ರಾಮಾಂತರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶಿಸಿದ್ದರು.

'ಇದಕ್ಕಾಗಿ ಮುಕ್ತ ಮಾರುಕಟ್ಟೆಯಲ್ಲಿ ಪ್ರತಿ ಚೀಲಕ್ಕೆ ₹13 ಇದ್ದರೆ ಅವುಗಳನ್ನು ಪ್ರತಿ ಚೀಲಕ್ಕೆ ₹52ರಷ್ಟು ದರ ನೀಡಿ ಖರೀದಿಸಲಾಗಿದೆ. ಈ ಮೂಲಕ ಸರ್ಕಾರದ ಬೊಕ್ಕಸಕ್ಕೆ ₹7.65 ಕೋಟಿ ನಷ್ಟ ಉಂಟು ಮಾಡಲಾಗಿದೆ. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಪ್ರಯೋಜನ ನೀಡುವ ಉದ್ದೇಶದಿಂದ ಕಲ್ಯಾಣ ಯೋಜನೆಗಳಿಗೆ ಮೀಸಲಿಟ್ಟ ಹಣವನ್ನು ಈ ಕೈಚೀಲಗಳ ಖರೀದಿಗೆ ಬಳಸಲಾಗಿದೆ. ಗ್ರಾಮ ಸ್ವರಾಜ್ಯದ ಎಲ್ಲ ಕನಸುಗಳನ್ನು ಗಾಳಿಗೆ ತೂರಿ ಭ್ರಷ್ಟಾಚಾರ ಎಸಗಲಾಗಿದೆ' ಎಂದು ಅರ್ಜಿದಾರರು ಆರೋಪಿಸಿದ್ದರು.

ಅಕ್ರಮದ ಕುರಿತಂತೆ, ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ಬಗ್ಗೆ ಎನ್.ಆರ್.ರವಿಚಂದ್ರೇಗೌಡ 2021ರ ಅಕ್ಟೋಬರ್ 13ರಂದು ಮೈಸೂರು ಜಿಲ್ಲಾ ಭ್ರಷ್ಟಚಾರ ನಿಗ್ರಹ ದಳಕ್ಕೆ (ಎಸಿಬಿ) ದೂರು ನೀಡಿದ್ದರು.

### ಭ್ರಷ್ಟಾಚಾರ ಕ್ಯಾನ್ಸರ್, ಸಾಂಕ್ರಾಮಿಕ

'ಸಾರ್ವಜನಿಕ ಸೇವಕರು ತಮ್ಮ ಅಧಿಕೃತ ಕಾರ್ಯ ಅಥವಾ ಕರ್ತವ್ಯಗಳನ್ನು ನಿರ್ವಹಿಸುವಾಗ ಮಾಡಿದ ಶಿಫಾರಸುಗಳು ಅಥವಾ ನಿರ್ಧಾರಗಳಿಗೆ ಸಂಬಂಧಿಸಿದ ಅಪರಾಧಗಳ ವಿಚಾರಣೆ ಅಥವಾ ತನಿಖೆಗೆ ಅನುಮತಿ ನೀಡುವುದು ಸಾಂವಿಧಾನಿಕ ಮತ್ತು ಶಾಸನಬದ್ಧ ಕಡ್ಡಾಯ ನಿಲುವಾಗಿರಬೇಕು. ಯಾಕೆಂದರೆ, ಭ್ರಷ್ಟಾಚಾರ ಒಂದು ಪಿಡುಗು. ಇದನ್ನು ಕ್ಯಾನ್ಸರ್, ಪ್ಲೇಗ್ ಮತ್ತು ಸಾಂಕ್ರಾಮಿಕ ಎಂದು ವಿವಿಧ ರೀತಿಯಲ್ಲಿ ವರ್ಣಿಸಲಾಗಿದೆ' ಎಂಬ ಸುಪ್ರೀಂ ಕೋರ್ಟ್ ತೀರ್ಪನ್ನು ನ್ಯಾಯಪೀಠ ಆದೇಶದಲ್ಲಿ ಉಲ್ಲೇಖಿಸಿದೆ.

'ಭ್ರಷ್ಟಚಾರವನ್ನು ನಿಯಂತ್ರಿಸದೇ ಹೋದರೆ ಅದು ರಾಜಕೀಯ ಕ್ಷೇತ್ರವನ್ನೇ ಅಸ್ಥಿರಗೊಳಿಸುತ್ತದೆ. ಪ್ರಜಾಪ್ರಭುತ್ವ ಸಂಸ್ಥೆಗಳನ್ನು ನಾಶಮಾಡುವ ಸಾಮರ್ಥ್ಯ ಭ್ರಷ್ಟಾಚಾರಕ್ಕಿದೆ. ಭ್ರಷ್ಟಾಚಾರವು ರಾಷ್ಟ್ರದ ಶತ್ರು. ಭ್ರಷ್ಟ ಸಾರ್ವಜನಿಕ ಸೇವಕರು ಯಾವುದೇ ಶ್ರೇಣಿ ಅಥವಾ ಅಂತಸ್ತನ್ನು ಹೊಂದಿದ್ದರೂ ಕಾಯ್ದೆಗೆ ಅನುಗುಣವಾಗಿ ಅಂಥವರನ್ನು ಪತ್ತೆಹಚ್ಚಿ ಶಿಕ್ಷಿಸುವುದಕ್ಕೆ ಹಿಂಜರಿಕೆ ಸಲ್ಲ' ಎಂಬುದನ್ನು ನ್ಯಾಯಪೀಠ ಪುನರುಚ್ಚರಿಸಿದೆ.

# 'ವೇತನ ಯಾಕೆ ನೀಡುತ್ತಿಲ್ಲ'

**ಬಾಗಲಕೋಟೆ:** 'ಆರ್ಥಿಕ ಸ್ಥಿತಿ ಸುಭದ್ರವಾಗಿದ್ದರೆ ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಿಗೆ 10 ತಿಂಗಳಿನಿಂದ ಪಿಂಚಣಿ ಏಕೆ ನೀಡಿಲ್ಲ? ವಿವಿಧ ವಿಶ್ವವಿದ್ಯಾಲಯಗಳ ಅತಿಥಿ ಉಪನ್ಯಾಸಕರಿಗೆ 2 ತಿಂಗಳಿನಿಂದ ಗೌರವಧನ ಏಕೆ ನೀಡಿಲ್ಲ? ಪೊಲೀಸ್ ಇಲಾಖೆ ಸಿಬ್ಬಂದಿಗೆ ವೇತನ ನೀಡಲು ಯಾಕೆ ವಿಳಂಬವಾಗಿದೆ' ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಸರ್ಕಾರಿ ನೌಕರರ ವೇತನ ನೀಡಲು ಸಾಲ ಮಾಡಲಾಗುತ್ತಿದೆ. ಸೌಲಭ್ಯ ಯಾಕೆ ನೀಡಲಾಗಿಲ್ಲ ಎಂಬುದನ್ನು ತಿಳಿದುಕೊಳ್ಳಲು ಆರ್ಥಿಕ ತಜ್ಞನೇ ಆಗಬೇಕಿಲ್ಲ. ರಾಜ್ಯದ ಆರ್ಥಿಕ ಸ್ಥಿತಿಯ ನಿಜಚಿತ್ರಣ ಬಿಚ್ಚಿಡುವ ಶ್ವೇತಪತ್ರ ಹೊರಡಿಸಿ, ಸತ್ಯ ಮರೆಮಾಚಬೇಡಿ' ಎಂದು ಆಗ್ರಹಿಸಿದರು.

'ಉಪಚುನಾವಣೆಯಲ್ಲಿ ಸೋಲಲಿದೆ ಎಂಬ ಹತಾಶೆಯೋ, ಬಾಗಲಕೋಟೆಯ ಬಿಸಿಲಿನ ಪರಿಣಾಮವೋ ಗೊತ್ತಿಲ್ಲ. ಆರ್ಥಿಕ ಜ್ಞಾನ ಇಲ್ಲ ಎಂದು ಟೀಕಿಸುತ್ತಿದ್ದಾರೆ. ಸರ್ಕಾರದ ಬಂದ ಒಂದೇ ತಿಂಗಳಿನಲ್ಲಿ ನೇರ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದ್ದೀರಿ. ಹಣ ಇಲ್ಲದ ಕಾರಣ ಒಳಮೀಸಲಾತಿ, ನ್ಯಾಯಾಲಯದ ನೆಪ ಹೇಳಿ ಮೂರು ವರ್ಷಗಳಿಂದ ನೇಮಕಾತಿ ಮಾಡಿಕೊಳ್ಳುತ್ತಿಲ್ಲ. 2.80 ಲಕ್ಷ ಹುದ್ದೆಗಳು ಖಾಲಿ ಬಿದ್ದಿರುವುದರಿಂದ ಯುವಕರು ಬೀದಿಗೆ ಬಂದು ಹೋರಾಟ ಮಾಡುವಂತಾಗಿದೆ' ಎಂದರು.

'ಕಾಂಗ್ರೆಸ್‌ನವರಿಗೆ ನಾಚಿಕೆ, ಮಾನ, ಮರ್ಯಾದೆ ಇಲ್ಲ. ಮನೆ, ಮನೆಗೆ ಹೋಗಿ ಗ್ಯಾರಂಟಿ ನಿಲ್ಲಿಸುವ ಬೆದರಿಕೆ ಹಾಕಲಾಗುತ್ತಿದೆ. ಇಂತಹ ಭಂಡಾಟ, ಸುಳ್ಳಾಟ ಕಾಂಗ್ರೆಸ್‌ಗೆ ನೆರವಾಗುವುದಿಲ್ಲ. ಸರ್ಕಾರಿ ನೌಕರರಿಗೆ ವೇತನ ನೀಡಲು ಸಾಲ ಮಾಡಲಾಗುತ್ತಿದೆ' ಎಂದರು.

## ವಿಧಾನಸಭಾ ಉಪ ಚುನಾವಣೆ: ಉಭಯ ಕ್ಷೇತ್ರಗಳಲ್ಲೂ ಜಾತಿ ಲೆಕ್ಕಾಚಾರ ಜೋರು

# ಜೆಡಿಎಸ್ ಬಲ ಬಿಜೆಪಿಗೆ ಲಾಭ ತರುವುದೇ?

• ಬಸವರಾಜ ಹವಾಲ್ದಾರ

**ಬಾಗಲಕೋಟೆ:** ಬಾಗಲಕೋಟೆ ಕ್ಷೇತ್ರದ ಉಪಚುನಾವಣಾ ಪ್ರಚಾರದಲ್ಲಿ ಬಿಜೆಪಿಗೆ, ಎನ್‌ಡಿಎ ಅಂಗಪಕ್ಷವಾದ ಜೆಡಿಎಸ್ ಕೂಡಾ ಸಾಥ್ ನೀಡಿದೆ. ಜೆಡಿಎಸ್ ಮುಖಂಡರು, ಕಾರ್ಯಕರ್ತರೂ ಪ್ರಚಾರದಲ್ಲಿ ಭಾಗಿಯಾಗಿದ್ದಾರೆ.

ಜಿಲ್ಲೆಯ ಬಾದಾಮಿ ಕ್ಷೇತ್ರ ಹೊರತುಪಡಿಸಿದರೆ ಉಳಿದೆಡೆ ಜೆಡಿಎಸ್ ಪ್ರಾಬಲ್ಯವಿಲ್ಲ. ಕಳೆದ ಬಾರಿ ಬಾಗಲಕೋಟೆ ಕ್ಷೇತ್ರದಲ್ಲಿ ಜೆಡಿಎಸ್‌ನ ಡಾ.ದೇವರಾಜ ಪಾಟೀಲ 3,470 ಮತ ಗಳಿಸಿದ್ದರು.

2018ರಲ್ಲಿ ಬಾದಾಮಿ ಕ್ಷೇತ್ರದಿಂದ ಡಾ.ದೇವರಾಜ ಪಾಟೀಲ ಅವರಿಗೆ ಕಾಂಗ್ರೆಸ್ ಟಿಕೆಟ್ ಘೋಷಣೆಯಾಗಿತ್ತು. ಕೊನೆಗಳಿಗೆಯಲ್ಲಿ ಸಿದ್ದರಾಮಯ್ಯ ಅವರೇ ಸ್ಪರ್ಧಿಸಿದ್ದರಿಂದ ಇವರಿಗೆ ಅವಕಾಶ ಆಗಿರಲಿಲ್ಲ. 2023ರಲ್ಲಿ ಅವರು ಬಾಗಲಕೋಟೆ ಕ್ಷೇತ್ರದಿಂದ ಟಿಕೆಟ್ ಕೇಳಿದ್ದರು. ಕಾಂಗ್ರೆಸ್ ಟಿಕೆಟ್ ನೀಡದ್ದರಿಂದ ಜೆಡಿಎಸ್‌ನಿಂದ ಸ್ಪರ್ಧಿಸಿದ್ದರು.

ಎನ್‌ಡಿಎ ಅಂಗಪಕ್ಷವಾಗಿರುವ ಜೆಡಿಎಸ್ ಬಿಜೆಪಿ ಪರ ಪ್ರಚಾರ ಮಾಡುತ್ತಿದ್ದರೂ, ಕಳೆದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ದೇವರಾಜ ಪಾಟೀಲ ಅವರನ್ನು ಬಿಜೆಪಿ ಸೆಳೆದಿತ್ತು. ಇತ್ತೀಚೆಗೆ ಅವರು ಪಕ್ಷಕ್ಕೆ ಸೇರ್ಪಡೆ ಆಗಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಎಚ್.ವೈ. ಮೇಟಿ ಹಾಗೂ ಡಾ.ದೇವರಾಜ ಪಾಟೀಲ ಕುರುಬ ಸಮುದಾಯಕ್ಕೆ ಸೇರಿದವರು. ಪಾಟೀಲ ಅವರೇ ಸ್ಪರ್ಧಿಸಿದಾಗ ಅವರಿಗೆ ಕಡಿಮೆ ಮತಗಳು ಬಂದಿದ್ದವು. ಈ ಬಾರಿ ಅವರ ಸಮುದಾಯದವರೇ ಆದ ಎಚ್.ವೈ. ಮೇಟಿ ಅವರ ಪುತ್ರ ಉಮೇಶ ಮೇಟಿ ಅವರು ಸ್ಪರ್ಧಿಸಿರುವುದರಿಂದ ಚರಂತಿಮಠರು ಎಷ್ಟು ಮತಗಳನ್ನು ಸೆಳೆಯಬಲ್ಲರು ಎಂಬುದು ಪ್ರಶ್ನೆಯಾಗಿದೆ.

ವಿಧಾನಸಭಾ ಚುನಾವಣೆ ನಂತರ ಪಾಟೀಲರು ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಳ್ಳದ್ದರಿಂದ ಜೆಡಿಎಸ್ ಮುಖಂಡರು ಬೇರೆಡೆ ನೆಲೆ ಕಂಡುಕೊಂಡಿದ್ದಾರೆ. ಸಂಘಟನೆ ಕುಗ್ಗಿದೆ.

'ಏ.5ರಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಪ್ರಚಾರ ಮಾಡುವರು' ಎಂದು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಹನುಮಂತ ಮಾವಿನಮರದ ಹೇಳಿದರು.

'ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಭದ್ರ ನೆಲೆಯನ್ನು ಹೊಂದದ ಜೆಡಿಎಸ್‌ನ ಲಾಭ ಬಿಜೆಪಿಗೆ ಈ ಉಪ ಚುನಾವಣೆಯಲ್ಲಿ ಎಷ್ಟರ ಮಟ್ಟಿಗೆ ದೊರಕಲಿದೆ' ಎಂಬುದನ್ನು ಕಾದು ನೋಡಬೇಕಿದೆ.

> ಜೆಡಿಎಸ್ ಕಾರ್ಯಕರ್ತರು ಸಕ್ರಿಯವಾಗಿ ಬಿಜೆಪಿ ನಾಯಕರೊಂದಿಗೆ ಪ್ರಚಾರ ಮಾಡುತ್ತಿದ್ದೇವೆ. ಬಿಜೆಪಿಗೆ ನಮ್ಮ ಮತಗಳ ಸೇರ್ಪಡೆಗೆ ಯತ್ನಿಸುತ್ತಿದ್ದೇವೆ
> **ಹನುಮಂತ ಮಾವಿನಮರದ,** ಜೆಡಿಎಸ್ ಅಧ್ಯಕ್ಷ, ಬಾಗಲಕೋಟೆ

> ಮೈತ್ರಿಯ ಕಾರಣಕ್ಕೆ ಮುಸ್ಲಿಮರ ಒಂದಷ್ಟು ಮತಗಳು ಎನ್‌ಡಿಎ ಅಭ್ಯರ್ಥಿಗೆ ಸಿಗಬಹುದು. ಈ ಚುನಾವಣೆಯಲ್ಲಿ ಗೆಲುವಿನ ವಿಶ್ವಾಸವಿದೆ
> **ಎಚ್.ಎಸ್.ಶಿವಶಂಕರ್,** ಜೆಡಿಎಸ್ ಮಾಜಿ ಶಾಸಕ, ಹರಿಹರ ಕ್ಷೇತ್ರ

### ಎನ್‌ಡಿಎ ಮೈತ್ರಿಕೂಟದಿಂದ ವಿವಿಧ ಸಮುದಾಯಗಳ ಮತ ಸೆಳೆಯುವ ಯತ್ನ

• ಜಿ.ಬಿ.ನಾಗರಾಜ್

**ದಾವಣಗೆರೆ:** ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣಾ ಕಣದಲ್ಲಿ ಕಾಂಗ್ರೆಸ್ ವಿರುದ್ಧದ ಸೆಣಸಾಟಕ್ಕೆ ಬಿಜೆಪಿ ಅಭ್ಯರ್ಥಿಗೆ ಜೆಡಿಎಸ್ ಬಲ ಸಿಕ್ಕಿದೆ. ಕ್ಷೇತ್ರದಲ್ಲಿ ನೆಲೆ ಉಳಿಸಿಕೊಂಡಿರುವ ಜೆಡಿಎಸ್, ಎನ್‌ಡಿಎ ಮೈತ್ರಿಕೂಟಕ್ಕೆ ಮುಸ್ಲಿಂ ಹಾಗೂ ಇತರ ಸಮುದಾಯಗಳ ಮತಗಳನ್ನು ಸೆಳೆಯುವ ಪ್ರಯತ್ನ ಮಾಡುತ್ತಿದೆ.

ಉಪ ಚುನಾವಣಾ ಕಣದಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಬಿಜೆಪಿಯ ಟಿ.ಶ್ರೀನಿವಾಸ ದಾಸಕರಿಯಪ್ಪ ಇದ್ದಾರೆ. ಮೈತ್ರಿಕೂಟದ ಅಭ್ಯರ್ಥಿ ಪರವಾಗಿ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಅಖಾಡಕ್ಕೆ ಇಳಿದಿದ್ದಾರೆ. ಬಿಜೆಪಿ ನಾಯಕರಷ್ಟೇ ಮತ ಸೆಳೆಯುವಲ್ಲಿ ನಿರತರಾಗಿದ್ದಾರೆ.

ಮುಸ್ಲಿಂ ಬಾಹುಳ್ಯದ ಈ ಕ್ಷೇತ್ರದಲ್ಲಿ ದಶಕದ ಹಿಂದೆ ಜೆಡಿಎಸ್ ಪ್ರಭಾವಿಯಾಗಿತ್ತು. 2013ರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಕೆರೆಕಟ್ಟೆ ಸೈಯದ್ ಸೈಫುಲ್, ಬಿಜೆಪಿಗಿಂತ ಹೆಚ್ಚು ಮತ ಪಡೆದಿದ್ದರು. 2023ರಲ್ಲಿ ಜೆ.ಅಮಾನುಲ್ಲಾ ಖಾನ್ ಜೆಡಿಎಸ್ ಅಭ್ಯರ್ಥಿಯಾಗಿ ಗಮನಸೆಳೆದಿದ್ದರು.

ಹರಿಹರ ಕ್ಷೇತ್ರದ ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಅವರು ಜೆಡಿಎಸ್, ಕಾರ್ಯಕರ್ತರು ಮುಖಂಡರನ್ನು ಒಗ್ಗೂಡಿಸಿ ಎನ್‌ಡಿಎ ಅಭ್ಯರ್ಥಿಯ ಬೆನ್ನಿಗೆ ನಿಂತಿದ್ದಾರೆ.

ಮೈತ್ರಿಕೂಟದ ಅಭ್ಯರ್ಥಿ ಘೋಷಣೆಯಾದ ದಿನದಿಂದ ಚುನಾವಣಾ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಜೆಡಿಎಸ್ ಜೊತೆಗಿದ್ದ ಮುಸ್ಲಿಂ ಮತಗಳನ್ನು ಮೈತ್ರಿಕೂಟದ ಅಭ್ಯರ್ಥಿಯತ್ತ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ.

ಪ್ರತಿ ಬಾರಿ ಸಾಲವನ್ನು ಪಡೆದಾಗಲೂ ನೀವು ನಿಮ್ಮ ಭವಿಷ್ಯವನ್ನು ಕಳೆದುಕೊಳ್ಳುತ್ತಿರುತ್ತೀರಿ
ನಾಥನ್ ಡಬ್ಲ್ಯು. ಮೋರಿಸ್, ಹಣಕಾಸು ತಜ್ಞ

ದುಡ್ಡಿನಂಥಾ ಮಾತು

# ವಲಯವಾರು ಹೂಡಿಕೆಗೆ ಫಂಡ್ ಆಫ್ ಫಂಡ್ಸ್

• ಚಿಂತನ್ ಹಾರಿಯಾ

ಷೇರುಪೇಟೆಗಳಲ್ಲಿ ಒಂದೇ ವಲಯಕ್ಕೆ ಸೇರಿದ ಕಂಪನಿಗಳ ಷೇರುಗಳು ಬಹುಕಾಲದವರೆಗೆ ಉತ್ತಮ ಸಾಧನೆ ತೋರುವುದು ಬಹಳ ಅಪರೂಪ. ಇಲ್ಲಿ ಉತ್ತಮ ಸಾಧನೆ ತೋರುವ ವಲಯಗಳು ಬದಲಾಗುತ್ತಿರುತ್ತವೆ. ಆರ್ಥಿಕತೆಯ ಗತಿಯಲ್ಲಿ ಆಗುವ ವ್ಯತ್ಯಾಸ, ವ್ಯವಸ್ಥೆಯ ನೀತಿಗಳಲ್ಲಿ ಬರುವ ಪರಿವರ್ತನೆ, ಜಾಗತಿಕ ಮಟ್ಟದಲ್ಲಿ ಆಗುವ ಪಲ್ಲಟಗಳು ಈ ಬದಲಾವಣೆಗಳನ್ನು ತರುತ್ತಿರುತ್ತವೆ. ಈ ಬದಲಾವಣೆಗಳಿಂದ ಸಿಗುವ ಲಾಭವನ್ನು ತಮ್ಮದಾಗಿಸಿಕೊಳ್ಳಲು ಬಯಸುವ ಹೂಡಿಕೆದಾರರಿಗೆ ವಲಯವಾರು ಹೂಡಿಕೆಯು ಬಹಳ ಆಕರ್ಷಕವಾಗಿ ಕಾಣುತ್ತದೆ.

ಆದರೆ, ಸರಿಯಾದ ಸಮಯದಲ್ಲಿ ಸರಿಯಾದ ವಲಯವನ್ನು ಆಯ್ಕೆ ಮಾಡಿ ಹೂಡಿಕೆ ಮಾಡುವುದು ವಾಸ್ತವದಲ್ಲಿ ಸುಲಭದ ಕೆಲಸವಲ್ಲ. ಹೀಗಿರುವಾಗ, ಬಹುವಲಯಗಳಲ್ಲಿ ಹಣ ತೊಡಗಿಸುವ, ಪ್ಯಾಸಿವ್ ಹೂಡಿಕೆ ಶೈಲಿಯನ್ನು ಅನುಸರಿಸುವ ಫಂಡ್ ಆಫ್ ಫಂಡ್ಸ್ (ಎಫ್‌ಒಎಫ್) ಈ ಸವಾಲನ್ನು ಪರಿಹರಿಸುವ ಪ್ರಯತ್ನ ಮಾಡುತ್ತವೆ. ಇವು ವಿವಿಧ ವಲಯಗಳಲ್ಲಿ ಹಣವನ್ನು ತೊಡಗಿಸುವ ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್‌ಗಳಲ್ಲಿ (ಇಟಿಎಫ್) ಹಣ ಹೂಡಿಕೆ ಮಾಡುತ್ತವೆ. ಈ ಹೂಡಿಕೆಯು ಒಂದೇ ಪೋರ್ಟ್‌ಫೋಲಿಯೊ ಮೂಲಕ ಆಗುತ್ತದೆ.

ಒಂದೊಂದು ಸಂದರ್ಭದಲ್ಲಿ ಒಂದೊಂದು ವಲಯದಲ್ಲಿ ಹೆಚ್ಚಿನ ಚಟುವಟಿಕೆ ಕಾಣಿಸುತ್ತಿರುತ್ತದೆ. ಅರ್ಥ ವ್ಯವಸ್ಥೆಯಲ್ಲಿ ಭಿನ್ನ ಸಂದರ್ಭಗಳಲ್ಲಿ ಭಿನ್ನ ವಲಯಗಳು ಹೆಚ್ಚಿನ ಲಾಭ ತಂದುಕೊಡುತ್ತಿರುತ್ತವೆ. ಉದಾಹರಣೆಗೆ ಹೇಳುವುದಾದರೆ, ಸಾಲ ನೀಡಿಕೆಯು ಹೆಚ್ಚಾಗಿ ಇರುವ ಸಂದರ್ಭಗಳಲ್ಲಿ ಬ್ಯಾಂಕಿಂಗ್ ಹಾಗೂ ಹಣಕಾಸು ಸೇವಾ ವಲಯಕ್ಕೆ ಹೆಚ್ಚು ಲಾಭ ದಕ್ಕಬಹುದು. ಜಾಗತಿಕ ಮಟ್ಟದಲ್ಲಿ ಹಣದುಬ್ಬರ ಹೆಚ್ಚಿರುವ ಸಂದರ್ಭಗಳಲ್ಲಿ ಅಥವಾ ಪೂರೈಕೆ ವ್ಯವಸ್ಥೆಯಲ್ಲಿ ಸಮಸ್ಯೆಗಳು ಇರುವ ಸಂದರ್ಭಗಳಲ್ಲಿ ಸರಕು ಹಾಗೂ ಇಂಧನ ವಲಯಗಳಲ್ಲಿ ಹೆಚ್ಚಿನ ಗಳಿಕೆ ಕಾಣಬಹುದು. ಅರ್ಥ ವ್ಯವಸ್ಥೆಯ ಭಿನ್ನ ಅಂಶಗಳಾದ ಬಡ್ಡಿ ದರ, ಸರಕುಗಳ ಬೆಲೆ, ಸರ್ಕಾರದ ಕಡೆಯಿಂದ ಆಗುವ ವೆಚ್ಚಗಳು, ಜಾಗತಿಕ ಮಟ್ಟದಲ್ಲಿನ ಬೇಡಿಕೆ ಮುಂತಾದವು ವಿವಿಧ ವಲಯಗಳಲ್ಲಿ ಏರಿಳಿತಗಳಿಗೆ ಕಾರಣ ಆಗುತ್ತವೆಯಾದ ಕಾರಣ, ಯಾವ ವಲಯದಲ್ಲಿ ಯಾವ ಸಂದರ್ಭದಲ್ಲಿ ಹೂಡಿಕೆ ಮಾಡಬೇಕು ಎಂಬುದನ್ನು ನಿಖರವಾಗಿ ಮುನ್ನಂದಾಜಿಸುವುದು ಬಹಳ ಸಂಕೀರ್ಣವಾದ ಕೆಲಸ.

ವಾಸ್ತವ ವಿಚಾರ ಹೇಳುವುದಾದಲ್ಲಿ ಬಹುತೇಕ ಹೂಡಿಕೆದಾರರು ಇಂತಹ ಶಿಸ್ತು ಕಾಯ್ದುಕೊಳ್ಳಲು ಕಷ್ಟಪಡುತ್ತಾರೆ. ಯಾವ ವಲಯದಲ್ಲಿ ಹೂಡಿಕೆ ಮಾಡಬೇಕು ಎಂಬ ವಿಚಾರದಲ್ಲಿ ಹೂಡಿಕೆದಾರರ ವರ್ತನೆಗಳು ಹೆಚ್ಚು ಪ್ರಭಾವ ಬೀರುತ್ತವೆ. ಅದಾಗಲೇ ಹೆಚ್ಚು ಲಾಭ ನೀಡಿರುವ ವಲಯಗಳನ್ನು ಹೂಡಿಕೆದಾರರು ಬಹಳ ಆಶಾವಾದದಿಂದ ಅಥವಾ ಆ ವಲಯದಲ್ಲಿ ಹೂಡಿಕೆ ಮಾಡದೆ ಇದ್ದರೆ ತಾವು ಏನನ್ನೋ ಕಳೆದುಕೊಂಡುಬಿಡಬಹುದು ಎಂಬ ಭೀತಿಯಿಂದ ಸಾಮಾನ್ಯವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಅದೇ ರೀತಿ, ಅವರು ಕೆಲವು ಸಂದರ್ಭಗಳಲ್ಲಿ, ನಕಾರಾತ್ಮಕ ಧೋರಣೆ ಅಥವಾ ನಷ್ಟದ ಭೀತಿಗೆ ಒಳಗಾಗಿ ವಲಯವೊಂದರಲ್ಲಿನ ಹೂಡಿಕೆಯನ್ನು ಬಹುಬೇಗ ಹಿಂದಕ್ಕೆ ಪಡೆದುಬಿಡಬಹುದು.

ಕಲೆ: ಸಂತೋಷ್ ಸಸಿಹಿತ್ಲು

## ದಕ್ಷತೆಯು ಫಂಡ್ ಆಫ್ ಫಂಡ್ಸ್‌ನ ಪ್ರಯೋಜನ

ದಕ್ಷತೆಯು ಫಂಡ್ ಆಫ್ ಫಂಡ್ಸ್‌ನ ಇನ್ನೊಂದು ಪ್ರಯೋಜನ. ಬೇರೆ ಬೇರೆ ವಲಯಗಳಲ್ಲಿ ತಾವಾಗಿಯೇ ಹಣ ತೊಡಗಿಸುವ ಬಯಕೆ ಇರುವ ಸಣ್ಣ ಹೂಡಿಕೆದಾರರಿಗೆ ಬೇರೆ ಬೇರೆ ಇಟಿಎಫ್‌ಗಳ ಮೇಲೆ ಗಮನ ಇರಿಸಬೇಕಾದ, ಸರಿಯಾದ ಸಮಯಕ್ಕೆ ಹೂಡಿಕೆ ಹಣವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾವಣೆ ಮಾಡಬೇಕಾದ, ಪೋರ್ಟ್‌ಫೋಲಿಯೊದಲ್ಲಿನ ಬದಲಾವಣೆಗಳಿಂದಾಗಿ ಆಗುವ ತೆರಿಗೆ ಪರಿಣಾಮಗಳನ್ನು ನಿಭಾಯಿಸಬೇಕಾದ ಸಂದರ್ಭ ಎದುರಾಗುತ್ತದೆ. ಆದರೆ ಫಂಡ್ ಆಫ್ ಫಂಡ್ಸ್ ಮೂಲಕ ಮಾಡಿದ ಹೂಡಿಕೆಗಳಲ್ಲಿ ಇಂತಹ ಬದಲಾವಣೆಗಳು ಒಂದು ಪೋರ್ಟ್‌ಫೋಲಿಯೊ ಮಟ್ಟದಲ್ಲಿ ಆಗಿರುತ್ತವೆ, ಆಂತರಿಕವಾಗಿ ಬದಲಾವಣೆಗಳು ಆಗುತ್ತಿದ್ದರೂ ಹೂಡಿಕೆದಾರರು ಒಂದೇ ಹೂಡಿಕೆ ಮೂಲಕ ಅವುಗಳನ್ನು ನಿಭಾಯಿಸುತ್ತಿರುತ್ತಾರೆ.

ಹೂಡಿಕೆದಾರರ ವಲಯದಲ್ಲಿ ಪ್ಯಾಸಿವ್ ಹೂಡಿಕೆ ಕ್ರಮದ ಕಡೆ ಒಲವು ವ್ಯಕ್ತವಾಗುತ್ತಿದೆ. ಇದಕ್ಕೆ ಪೂರಕವಾಗಿದೆ ಫಂಡ್ ಆಫ್ ಫಂಡ್ಸ್ ಮೂಲಕ ಬಹುವಲಯಗಳಲ್ಲಿ ಹಣ ತೊಡಗಿಸುವ ವಿಧಾನ. ತಮ್ಮಲ್ಲಿನ ಪಾರದರ್ಶಕತೆ, ನಿರ್ದಿಷ್ಟವಾದ ನಿಯಮ ಆಧಾರಿತ ವ್ಯವಸ್ಥೆ, ಸಕ್ರಿಯವಾಗಿ ನಿರ್ವಹಣೆ ಆಗುವ ಫಂಡ್‌ಗಳಿಗಿಂತ ಕಡಿಮೆ ವೆಚ್ಚ ಮುಂತಾದ ಕಾರಣಗಳಿಂದಾಗಿ ಈಗ ಒಂದು ದಶಕದ ಅವಧಿಯಲ್ಲಿ ಇಟಿಎಫ್‌ಗಳು ಜನಪ್ರಿಯತೆ ಪಡೆದುಕೊಂಡಿವೆ. ಹೆಸರು ಮಾಡಿದ ವಲಯಗಳ ಸೂಚ್ಯಂಕಗಳನ್ನು ಅನುಕರಣೆ ಮಾಡುವ ಮೂಲಕ ಇಟಿಎಫ್‌ಗಳು, ಆ ಸೂಚ್ಯಂಕ ತಂದುಕೊಡುವ ಲಾಭಕ್ಕೆ ಸರಿಸಮನಾದ ಲಾಭವನ್ನು ತಾವೂ ನೀಡಲು ಯತ್ನಿಸುತ್ತವೆ. ಈ ಇಟಿಎಫ್‌ಗಳು ವಿವಿಧ ಷೇರುಗಳ ಆಯ್ಕೆ ಮೂಲಕ ಸೂಚ್ಯಂಕಕ್ಕಿಂತ ಹೆಚ್ಚಿನ ಮಟ್ಟದ ಲಾಭ ತಂದುಕೊಡಲು ಯತ್ನಿಸುವುದಿಲ್ಲ.

ಆದರೆ, ಪ್ಯಾಸಿವ್ ವಿಧಾನದ ಮೂಲಕ ಅಥವಾ ಸಕ್ರಿಯ ವಿಧಾನದ ಮೂಲಕ ವಲಯ ಆಧಾರಿತವಾಗಿ ಹೂಡಿಕೆ ಮಾಡುವಾಗ ಅದರದ್ದೇ ಆದ ರಿಸ್ಕ್‌ಗಳು ಇರುತ್ತವೆ ಎಂಬುದನ್ನು ಹೂಡಿಕೆದಾರರು ಅರಿತುಕೊಳ್ಳಬೇಕು. ಯಾವುದೇ ವಲಯದ ಮೇಲಿನ ಹೂಡಿಕೆಯು ಅಸ್ಥಿರವಾಗಿ ಇರಬಹುದು. ಸರ್ಕಾರದ ನೀತಿಗಳಲ್ಲಿನ ಬದಲಾವಣೆ, ಸರಕುಗಳ ಬೆಲೆ, ತಾಂತ್ರಿಕ ಜಗತ್ತಿನಲ್ಲಿ ಆಗುವ ಮಹತ್ವದ ಸ್ಥಿತ್ಯಂತರಗಳು, ಗ್ರಾಹಕರ ಕಡೆಯಿಂದ ಬೇಡಿಕೆಯಲ್ಲಿ ಆಗುವ ವ್ಯತ್ಯಾಸಗಳು ಈ ಹೂಡಿಕೆಗಳ ಮೇಲೆ ಪರಿಣಾಮ ಬೀರಬಹುದು. ನಿರ್ದಿಷ್ಟವಾದ ಉದ್ದಿಮೆಗಳ ಮೇಲೆ ಅತಿಯಾದ ಹೂಡಿಕೆ ಇದ್ದಾಗ ಮೌಲ್ಯದಲ್ಲಿನ ಏರಿಳಿತಗಳು ಕೂಡ ಬಹಳ ತೀವ್ರವಾಗಿಯೇ ಇರುತ್ತವೆ. ಹೀಗಾಗಿ ಈ ಬಗೆಯ ಹೂಡಿಕೆಗಳು ದೀರ್ಘ ಅವಧಿಗೆ ಹಣ ತೊಡಗಿಸಬಲ್ಲವರಿಗೆ, ಮಾರುಕಟ್ಟೆಯ ಏರಿಳಿತಗಳನ್ನು ತಾಳಿಕೊಳ್ಳಬಲ್ಲವರಿಗೆ ಮಾತ್ರ ಹೆಚ್ಚು ಸೂಕ್ತವಾಗುತ್ತವೆ.

ಒಟ್ಟಾರೆಯಾಗಿ ಹೇಳುವುದಿದ್ದರೆ ಪ್ಯಾಸಿವ್ ವಿಧಾನದ ಮೂಲಕ ಬೇರೆ ಬೇರೆ ವಲಯಗಳಲ್ಲಿ ಹಣ ತೊಡಗಿಸುವ ಫಂಡ್ ಆಫ್ ಫಂಡ್ಸ್, ಹೂಡಿಕೆಯಲ್ಲಿ ವೈವಿಧ್ಯವನ್ನು ಸಾಧಿಸಲು ನೆರವಾಗುತ್ತವೆ.

ಭಾವನೆಗಳನ್ನು ಆಧರಿಸಿ ತೆಗೆದುಕೊಳ್ಳುವ ಇಂತಹ ತೀರ್ಮಾನಗಳು ಹೂಡಿಕೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ ಎಂಬುದನ್ನು ಇತಿಹಾಸ ಹೇಳುತ್ತದೆ. ಉದಾಹರಣೆಗೆ ಹೇಳುವುದಾದರೆ, ನಿರ್ದಿಷ್ಟ ವಲಯವೊಂದರ ಬಗ್ಗೆ ಅತಿಯಾದ ಉತ್ಸಾಹ ಕಂಡುಬಂದ ನಂತರದಲ್ಲಿ, ಆ ವಲಯದ ಷೇರುಗಳ ಮೌಲ್ಯದಲ್ಲಿ ಕುಸಿತ ಕಂಡುಬಂದಿದ್ದು ಇದೆ.

ವಿವಿಧ ವಲಯಗಳಲ್ಲಿ ಹಣ ತೊಡಗಿಸುವಾಗ ಹೂಡಿಕೆದಾರರ ವರ್ತನೆಗಳಿಂದ ಉಂಟಾಗುವ ಎಡವಟ್ಟುಗಳನ್ನು ನಿಭಾಯಿಸುವ ಕೆಲಸವನ್ನು ಪ್ಯಾಸಿವ್ ವಿಧಾನವನ್ನು ಪಾಲಿಸುವ, ಬಹು ವಲಯಗಳಲ್ಲಿ ಹಣ ತೊಡಗಿಸುವ ಫಂಡ್ ಆಫ್ ಫಂಡ್‌ಗಳು ಮಾಡುತ್ತವೆ. ಬೇರೆ ಬೇರೆ ವಲಯಗಳಲ್ಲಿ ಹೂಡಿಕೆ ಮಾಡಲು ಇವು ಹೆಚ್ಚು ವ್ಯವಸ್ಥಿತವಾದ ಮಾರ್ಗವೊಂದನ್ನು ಅನುಸರಿಸುತ್ತವೆ. ನಿರ್ದಿಷ್ಟವಾದ ವಲಯವೊಂದರ ಕಂಪನಿಗಳಲ್ಲಿ ಹೂಡಿಕೆ ಮಾಡುವ ಫಂಡ್‌ಗಳಲ್ಲಿ ಹಣ ತೊಡಗಿಸುವ ಬದಲು ಅಥವಾ ಆ ವಲಯದ ಷೇರುಗಳಲ್ಲಿ ನೇರವಾಗಿ ಹಣ ತೊಡಗಿಸುವ ಬದಲು ಇವು ಬೇರೆ ಬೇರೆ ವಲಯಗಳಿಗೆ ಸೇರಿದ ಇಟಿಎಫ್‌ಗಳಲ್ಲಿ ಹಣ ತೊಡಗಿಸುತ್ತವೆ.

ಇಟಿಎಫ್‌ಗಳು ಪ್ಯಾಸಿವ್ ಹೂಡಿಕೆ ವಿಧಾನವನ್ನು ಅನುಸರಿಸುತ್ತವೆ. ಇವು ನಿರ್ದಿಷ್ಟವಾದ ಸೂಚ್ಯಂಕವನ್ನು, ನಿರ್ದಿಷ್ಟವಾದ ವಲಯವನ್ನು ಅನುಕರಣೆ ಮಾಡಿ, ಆ ಸೂಚ್ಯಂಕದಲ್ಲಿ ಯಾವ ಕಂಪನಿಗಳ ಷೇರುಗಳಿಗೆ ಯಾವ ಪ್ರಮಾಣದ ಪ್ರಾಧಾನ್ಯ ಇದೆಯೋ ಅದೇ ಪ್ರಮಾಣದಲ್ಲಿ ಹಣ ಹೂಡಿಕೆ ಮಾಡುತ್ತವೆ. ಇದರಿಂದಾಗಿ ಹೂಡಿಕೆದಾರರಿಗೆ ನಿರ್ದಿಷ್ಟವಾದ ವಲಯವೊಂದರ ಎಲ್ಲ ಕಂಪನಿಗಳಲ್ಲಿ ಬಂಡವಾಳ ತೊಡಗಿಸಲು ಸಾಧ್ಯವಾಗುತ್ತದೆ. ಹೂಡಿಕೆಗೆ ಆ ವಲಯದ ಕಂಪನಿಗಳನ್ನು ಆಯ್ಕೆ ಮಾಡಬೇಕಾದ ಕೆಲಸ ಅವರಿಗೆ ಇರುವುದಿಲ್ಲ.

ಈಗ ಫಂಡ್ ಆಫ್ ಫಂಡ್ಸ್ ಮೂಲಕ ಹೂಡಿಕೆ ಮಾಡಿದಾಗ ಇನ್ನೊಂದು ಹಂತದ ವೈವಿಧ್ಯವನ್ನು ಸಾಧಿಸಲು, ಪೋರ್ಟ್‌ಫೋಲಿಯೊ ನಿರ್ವಹಣೆ ಮಾಡಲು ಆಗುತ್ತದೆ. ಒಂದು ವಲಯದ ಇಟಿಎಫ್ ಬದಲು, ಫಂಡ್ ಆಫ್ ಫಂಡ್ಸ್ ಹಲವು ವಲಯಗಳ ಇಟಿಎಫ್‌ಗಳಲ್ಲಿ ಹೂಡಿಕೆ ಮಾಡುತ್ತವೆ. ಈ ಮೂಲಕ ಅವು ಅರ್ಥ ವ್ಯವಸ್ಥೆಯ ಹಲವು ವಲಯಗಳು ಹೂಡಿಕೆದಾರರಿಗೆ ಸಿಗುವಂತೆ ಮಾಡುತ್ತವೆ.

ಷೇರುಪೇಟೆಯಲ್ಲಿ ಎಲ್ಲ ಕಾಲಕ್ಕೂ ಒಂದೇ ವಲಯವು ಗಳಿಕೆಯಲ್ಲಿ ಮುಂಚೂಣಿಯಲ್ಲಿ ಇರುವುದಿಲ್ಲ. ಹೀಗಿರುವಾಗ, ಬಹು ವಲಯಗಳಲ್ಲಿ ಹೂಡಿಕೆ ಮಾಡುವ ವಿಧಾನವು ಬೇರೆ ಬೇರೆ ವಲಯಗಳಲ್ಲಿನ ಬೆಳವಣಿಗೆಯ ಪ್ರಯೋಜನವನ್ನು ತಮ್ಮದಾಗಿಸಿಕೊಳ್ಳುವ ಸಾಧ್ಯತೆಯನ್ನು ತೆರೆದುಕೊಡುತ್ತದೆ. ಸರ್ಕಾರದ ನಿಯಮಗಳಲ್ಲಿನ ಬದಲಾವಣೆಯ ಕಾರಣದಿಂದಾಗಿ, ಬೇಡಿಕೆಯಲ್ಲಿನ ಇಳಿಕೆಯಿಂದಾಗಿ ಅಥವಾ ಇನ್ನಾವುದೋ ಒತ್ತಡದಿಂದಾಗಿ ಯಾವುದೋ ಒಂದು ವಲಯದ ಗಳಿಕೆ ಚೆನ್ನಾಗಿ ಇಲ್ಲದಿದ್ದರೂ ಇತರ ವಲಯಗಳಿಂದ ಸಿಗುವ ಗಳಿಕೆಯು ಹೂಡಿಕೆದಾರರಿಗೆ ಅನುಕೂಲಕರವಾಗಿ ಒದಗಿ ಬರಬಹುದು. ವಿವಿಧ ವಲಯಗಳಲ್ಲಿ ಹಣ ತೊಡಗಿಸುವ ಮೂಲಕ ಫಂಡ್ ಆಫ್ ಫಂಡ್ಸ್ ಒಂದೇ ವಲಯದಲ್ಲಿನ ಹೂಡಿಕೆಯಿಂದ ಸೃಷ್ಟಿ ಆಗಬಹುದಾದ ರಿಸ್ಕ್‌ನ ತೀವ್ರತೆಯನ್ನು ಕಡಿಮೆ ಮಾಡುತ್ತವೆ.

ಈ ಬಗೆಯ ಹೂಡಿಕೆಯಲ್ಲಿನ ಇನ್ನೊಂದು ಮಹತ್ವದ ಅಂಶ ಪೋರ್ಟ್‌ಫೋಲಿಯೊದಲ್ಲಿ ಆಗುವ ಮರುಹೊಂದಾಣಿಕೆ. ಬಹು ವಲಯಗಳಲ್ಲಿ ಹೂಡಿಕೆ ಮಾಡುವ ಫಂಡ್ ಆಫ್ ಫಂಡ್ಸ್‌ನಲ್ಲಿ ನಿರ್ದಿಷ್ಟ ವಲಯಕ್ಕೆ ನೀಡಿರುವ ಆದ್ಯತೆಯನ್ನು ಕಾಲಕಾಲಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳಬಹುದು, ಈ ಮೂಲಕ ಅರ್ಥವ್ಯವಸ್ಥೆಯಲ್ಲಿ ಆಗುವ ಬದಲಾವಣೆಗೆ ಸರಿಹೊಂದುವಂತೆ ಪೋರ್ಟ್‌ಫೋಲಿಯೊ ರೂಪುಗೊಳ್ಳಬಹುದು.

*ಲೇಖಕ ಐಸಿಐಸಿಐ ಪ್ರುಡೆನ್ಶಿಯಲ್ ಆಸ್ತಿ ನಿರ್ವಹಣಾ ಕಂಪನಿಯ ಹೂಡಿಕೆ ಕಾರ್ಯತಂತ್ರ ವಿಭಾಗದ ಮುಖ್ಯಸ್ಥ*

## ದೇಶದಲ್ಲಿ ಸಾಲದ ಚಿತ್ರಣ ಹೇಗಿದೆ?

• ಗಂಜಿ ಆದಿಶೇಷ

ದೇಶದಲ್ಲಿನ ಜನರು ಏಕೆ ಸಾಲ ತೆಗೆದುಕೊಳ್ಳುತ್ತಾರೆ, ಯಾವ ವಿಧಾನದ ಮೂಲಕ ಸಾಲ ತೆಗೆದುಕೊಳ್ಳುತ್ತಾರೆ, ಸಾಲದ ಉದ್ದೇಶ ಏನು ಎಂಬ ಬಗ್ಗೆ ಬ್ಯಾಂಕೇತರ ಹಣಕಾಸು ಕಂಪನಿ, ಹೋಂ ಕ್ರೆಡಿಟ್ 'ಭಾರತದಲ್ಲಿನ ಜನರು ಹೇಗೆ ಸಾಲ ಮಾಡುತ್ತಾರೆ–2025' ಎಂಬ ಸಮೀಕ್ಷೆ ಮಾಡಿದೆ.

### ಜನ ಸಾಲ ಮಾಡಲು ಕಾರಣವೇನು?

| ಕಾರಣ | ಪ್ರಮಾಣ |
|---|---|
| ಸ್ಮಾರ್ಟ್‌ಫೋನ್/ಗೃಹೋಪಕರಣಗಳ ಖರೀದಿ | 46% |
| ಹೊಸ ವಹಿವಾಟು ಆರಂಭಿಸಲು/ ವಹಿವಾಟು ವಿಸ್ತರಿಸಲು | 25% |
| ಮನೆಯ ನವೀಕರಣ/ನಿರ್ಮಾಣ | 12% |
| ಶಿಕ್ಷಣ | 4% |
| ದ್ವಿಚಕ್ರ ವಾಹನ/ ಕಾರು ಖರೀದಿ | 4% |
| ವೈದ್ಯಕೀಯ ತುರ್ತು | 4% |
| ಮನೆ/ಆಸ್ತಿ ಖರೀದಿ | 2% |




### ಸಾಲ ಪಡೆಯಲು ಆದ್ಯತೆಯ ಮೂಲಗಳು

- 65% ಇಎಂಐ
- 25% ಕ್ರೆಡಿಟ್ ಕಾರ್ಡ್
- 3% ಡಿಜಿಟಲ್ ಸಾಲದ ಆ್ಯಪ್‌ಗಳು
- 1% ಸಾಲ ನೀಡುವ ಇತರ ಕಂಪನಿಗಳು

### ಸಾಲದ ನೆರವಿನ ಅಗತ್ಯ ಇವುಗಳಿಗೆ ಇದೆ




### ಸಾಲ ತೆಗೆದುಕೊಳ್ಳಲು ಇರುವ ಅಡಚಣೆಗಳು

| ಅಡಚಣೆ | ಪ್ರಮಾಣ |
|---|---|
| ಸಾಲದ ಸುಳಿಯಲ್ಲಿ ಸಿಲುಕುವ ಭೀತಿ | 36% |
| ಹೆಚ್ಚಿನ ಬಡ್ಡಿದರ ಅಥವಾ ಇಎಂಐ ಹೊರೆ | 31% |
| ಸಾಲ ತೆಗೆದುಕೊಳ್ಳಲು ಕುಟುಂಬದ ಅಸಮ್ಮತಿ | 19% |
| ಸಾಲದ ಕಂಪನಿಗಳ ಮೇಲಿನ ನಂಬಿಕೆಯ ಕೊರತೆ | 8% |
| ಸಾಲದ ಆಯ್ಕೆಗಳ ಬಗ್ಗೆ ಕಡಿಮೆ ಅರಿವು | 3% |
| ಹೋಲಿಕೆ, ಸಾಲದ ಕುರಿತು ತೀರ್ಮಾನದ ಗೊಂದಲ | 2% |

**ಮಾಹಿತಿ ಸಂಗ್ರಹ**
17 ಪ್ರಮುಖ ನಗರಗಳಿಂದ (ಮಹಾನಗರಗಳು, 1 ಮತ್ತು 2ನೇ ಹಂತದ ನಗರಗಳು)

**18-55 ವರ್ಷ**
ಸಮೀಕ್ಷೆಯಲ್ಲಿ ಪಾಲ್ಗೊಂಡವರ ವಯೋಮಾನ (ಪುರುಷರು ಶೇ 83 ಮತ್ತು ಮಹಿಳೆಯರು ಶೇ 17ರಷ್ಟು)

**₹34 ಸಾವಿರ**
ಕುಟುಂಬದ ಸರಾಸರಿ ಮಾಸಿಕ ಆದಾಯ ಇಷ್ಟು ಹೊಂದಿರುವವರು ಸಮೀಕ್ಷೆಯಲ್ಲಿ ಭಾಗಿ

---

## 'ನೀಟ್' ದಿಕ್ಸೂಚಿ — ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ/ಸಿಇಟಿ ಪರೀಕ್ಷೆ

### PHYSICS

**7) The speed of light in medium $M_1$ and $M_2$ are $1.5 \times 10^8$ ms$^{-1}$ and $2 \times 10^8$ ms$^{-1}$ respectively. A ray travels from medium $M_1$ to the medium $M_2$ with an angle of incidence $\theta$. The ray suffers total internal reflection. Then the value of the angle of incidence $\theta$ is.**

(a) $> \sin^{-1}\left(\frac{3}{4}\right)$ (b) $< \sin^{-1}\left(\frac{3}{4}\right)$

(c) $= \sin^{-1}\left(\frac{3}{4}\right)$ (d) $\le \sin^{-1}\left(\frac{3}{4}\right)$

**Ans:- a**

**Expln-** For total internal reflection, the angle of incidence of light in denser medium must be greater than the critical angle for the pair of media in contact, i.e., i > C

We have, $\frac{1}{\sin C} = \frac{v_2}{v_1}$

Given $v_1 = M_1 = 1.5\times10^8\, ms^{-1}$; $v_2 = M_2 = 2\times10^8\, ms^{-1}$

Here, $C = \sin^{-1}\left(\frac{M_1}{M_2}\right)$

$\therefore i > \sin^{-1}\left(\frac{M_1}{M_2}\right) \Rightarrow i > \sin^{-1}\left(\frac{1.5\times10^8}{2\times10^8}\right)$

$\Rightarrow i > \sin^{-1}\left(\frac{3}{4}\right)$

**8) A pipe open at both ends has a fundamental frequency f in air. The pipe is now dipped vertically in a water drum to half of its length. The fundamental frequency of the air column is now equal to:**

(1) $2f$ (2) $\frac{f}{2}$

(3) $f$ (4) $\frac{3f}{2}$

**Ans:- 3**

**Expln:- Fundamental frequency of open pipe (at both ends)=**

$$f = \frac{v}{2L} \quad ...(i)$$



**Now immersed in water open pipe behaves as closed pipe.**




$$f' = \frac{v}{4\left(\frac{L}{2}\right)} = \frac{v}{2L} \quad ...(ii)$$

$f = f'$

**9) A logic circuit provides the output Y as per the following truth table :**

| A | B | Y |
|---|---|---|
| 0 | 0 | 1 |
| 0 | 1 | 0 |
| 1 | 0 | 1 |
| 1 | 1 | 0 |

**The expression for the output Y is :**

a) $A.B + \bar{A}$ b) $A.\bar{B} + \bar{A}$

c) $\bar{B}$ d) B

**Ans (c)**

**Expln:-**

| A | B | Y |
|---|---|---|
| 0 | 0 | 1 |
| 0 | 1 | 0 |
| 1 | 0 | 1 |
| 1 | 1 | 0 |

According to given truth table, output is independent on value of A

$\therefore$ Output $Y = \bar{B}$

**10) Three conductors draw currents of 1 A, 2 A and 3 A respectively, when connected in turn across a battery. If they are connected in series and the combination is connected across the same battery, the current drawn is**

(a) $\frac{2}{7}$ A (b) $\frac{3}{7}$ A

(c) $\frac{4}{7}$ A (d) $\frac{5}{7}$ A

**Ans:- c**

**Expn-** Let the three conductors are $R_1$, $R_2$ and $R_3$ and the current drawn by them 1 A, 2 A and 3 A respectively when connected in turn across a battery.

$\therefore V = R_1,\ V = 2R_2$ and $V = 3R_3$

So, $R_1 = V,\ R_2 = \frac{V}{2}$ and $R_3 = \frac{V}{3}$

When the conductors are connected in series, across the same battery, then




$V = I[R_1 + R_2 + R_3]$

$\Rightarrow V = I\left[V + \frac{V}{2} + \frac{V}{3}\right] \Rightarrow 1 = I\left[\frac{6+3+2}{6}\right] \Rightarrow I = \frac{6}{11}$ A

**11) When a potential difference of $10^3$V is applied between A and B, a charge of 0.75 mC is value of C is (in μ F)**




(a) $\frac{1}{2}$ (b) 2

(c) 2.5 (d) 3

**Ans:- (b)**

(Contd....)

### CHEMISTRY

*MULTIPLE CHOICE QUESTIONS*

**42) Prolonged exposure of chloroform in humans may cause damage to the liver. It is due to the formation of the following compound:**

a). $CH_2Cl_2$ b) $Cl_2$

c) $CCl_4$ d) $COCl_2$

**Ans: (d)**

**Expln:-** When chloroform is oxidised, it forms phosgene which is poisonous.

$$CHCl_3 \xrightarrow{[O]} COCl_2 + HCl$$

**43) A brown ring is formed in the ring test for $NO_3^-$ ion. It is due to the formation of ............**

a) $[Fe(H_2O)_5(NO)]^{2+}$ b) $FeSO_4.NO_2$

c) $[Fe(H_2O)(NO)_2]^{2+}$ d) $FeSO_4.HNO_3$

**Ans:-a**

**44) Match List-I with List-II for the following reaction pattern**

Glucose $\xrightarrow{Reagent}$ Product $\longrightarrow$ Structural prediction

| List – I (Reagents) | List-II (Structural prediction) |
|---|---|
| a. Acetic anhydride | i. Glucose has an aldehyde group |
| b. Bromine water | ii. Glucose has a straight chain of six carbon atoms |
| c. Hydroiodic acid | iii. Glucose has five hydroxyl group |
| d. Hydrogen cyanide | iv. Glucose has a carbonyl group |

a) a-iv b-iii, c-ii d-i

b) a-iii b-i c-ii d-iv

c) a-i b-ii c-iii d-iv

d) a-iii b-ii, c-i d-iv

**Ans:- b**

**45) An organic compound 'A' burns with a sooty flame. It is negative towards Tollen's reagent test and positive for Borsche's reagent test. The compound 'A' is -**

a) Benzaldehyde b) Acetophenone

c) Acetone d) Salicylic acid

**Ans:- b**

**46) In electrophilic aromatic substitution reaction, the nitro group is meta directing because it**

a) increases electron density at meta position

b) increases electron density at ortho and para positions

c) decreases electron density at ortho and para positions

d) decreases electron density at meta position

**Ans:- c**

**47) The correct arrangement for the ions in the increasing order of their radii is........**

a) $Na^+, Cl^-, Ca^{2+}$ b) $Ca^{2+}, K^+, S^{2-}$

c) $Na^+, AL^{3+}, Be^{2+}$ d) $Cl^-, F^-, S^{2-}$

**Ans:- b**

***Expln:-***

| Species | At No. | No. of $e^-$ |
|---|---|---|
| $Ca^{2+}$ | 20 | 18 |
| $K^+$ | 19 | 18 |
| $S^{2-}$ | 16 | 18 |

The species $Ca^{2+}$, $K^+$ and $S^{2-}$ are isoelectronic. For isoelectronic ions, the radius decreases as the nuclear charge increases. Hence, the increasing order of their radii is $Ca^{2+} < K^+ < S^{2-}$

**48) 0.06% (w/v) aqueous solution of urea is isotonic with**

a) 0.6% glucose solution

b) 0.1 M glucose solution

c) 0.06% glucose solution

d) 0.01 M glucose solution

Ans: **(d)**

Expln :–Molarity of urea solution $= \frac{0.06\times10}{60} = 0.01$ M.

**49) With regard to the photoelectric effect, identify the correct statement among the following:**

**a)** Number of electrons ejected increases with the increase in work function

**b)** Number of electrons ejected increases with the increase in the intensity of incident light

**c)** Energy of ejected electrons increases with the increase in the intensity of incident light

**d)** Numbers of electrons ejected increases with the increase in the frequency of the incident light

**Ans: (b)**

**Expln:-** Photoelectric effect is the emission of electrons from a certain metal surface when it is irradiated with photons or light. The minimum frequency required to eject an electron from a metal surface is called threshold frequency. ($\upsilon_o$)

The equation for the photoelectric effect is:

$H\upsilon = h\upsilon_o + KE$,

where $\upsilon$ = frequency of the incident radiation

Here $h\upsilon_o$ is the work function.

The number of electrons ejected does not depend on work function.

The number of electrons ejected increases with the increase in the intensity of incident light, an increase in the intensity of incident light means that the number of photons incident per unit surface area of the metal increases. (Provided the incident photons has its frequency more than the threshold frequency)

The energy of the ejected electrons increases with an increase in the frequency of incident light.

**50) In $H_2 - O_2$ fuel cell the reaction occurring at cathode is**

a) $O_2(g) + 2H_2O\ (l) + 4e^- \rightarrow 4\overline{O}H\ (aq)$

b) $H^+(aq) + \overline{O}H\ (aq) \rightarrow H_2O\ (l)$

(Contd......)

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

# ಅಭಿಮತ

**ಸುಭಾಷಿತ**

ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ. ಆದರೆ, ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ.

–ಸ್ವಾಮಿ ವಿವೇಕಾನಂದ

**ಸಂಪಾದಕೀಯ**

## ಕೇಂದ್ರ ಕಾರಾಗೃಹ ಅವ್ಯವಸ್ಥೆ ಸುಧಾರಣೆ ವಿಳಂಬ ಆಗದಿರಲಿ

**ಬೆಂಗಳೂರಿನ** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳು ಮೊಬೈಲ್ ಫೋನ್ ಮತ್ತು ಸ್ಟ್ರೀಮಿಂಗ್ ಸೇವೆಗಳನ್ನು ಬಳಸುವ ವಿಡಿಯೊಗಳು ಬಹಿರಂಗಗೊಂಡಿವೆ. ಜೈಲಿನೊಳಗಿನವರೇ ಈ ವಿಡಿಯೊಗಳನ್ನು ಚಿತ್ರಿಸಿ ಬಹಿರಂಗಗೊಳಿಸಿದ್ದಾರೆ ಎನ್ನಲಾಗಿದೆ. ಕಾರಾಗೃಹದಲ್ಲಿನ ಆಡಳಿತ ವೈಫಲ್ಯದ ಸರಣಿಗೆ ಸಂಬಂಧಿಸಿದ ಹೊಸ ಅಧ್ಯಾಯ ಇದಾಗಿದೆ. ಜೈಲಿನ ಒಳಗೆ ಮೊಬೈಲ್, ಟಿ.ವಿ., ಹಾಗೂ ನೆಟ್‌ಫ್ಲಿಕ್ಸ್ ವೀಕ್ಷಣೆಗೆ ಅವಕಾಶ ಸೇರಿದಂತೆ ಕೈದಿಗಳಿಗೆ ಐಷಾರಾಮಿ ಸೌಲಭ್ಯ ಕಲ್ಪಿಸಲಾಗಿದೆ ಎನ್ನುವ ವಿಡಿಯೊ ಪ್ರಸಂಗವನ್ನು ಪ್ರತ್ಯೇಕ ಘಟನೆಯಾಗಿ ನೋಡದೆ, ಸಾಂದರ್ಭಿಕವಾಗಿ ನೋಡಬೇಕಾಗಿದೆ. ನಟ ದರ್ಶನ್‌ಗೆ ವಿಶೇಷ ಸೌಲಭ್ಯ ಕಲ್ಪಿಸಿಕೊಟ್ಟಿದ್ದುದು ಬಹಿರಂಗಗೊಂಡು ತೀವ್ರ ಮುಜುಗರಕ್ಕೆ ಒಳಗಾದ ನಂತರ, ಕಾರಾಗೃಹ ವ್ಯವಸ್ಥೆಗೆ ಸಂಬಂಧಿಸಿದಂತೆ ಕಠಿಣ ಕ್ರಮಗಳನ್ನು ಕೈಗೊಳ್ಳುವ ಉದ್ದೇಶದಿಂದ ಹಿರಿಯ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಅವರನ್ನು ಡಿಜಿಪಿ (ಕಾರಾಗೃಹ) ಆಗಿ ಸರ್ಕಾರ ನೇಮಿಸಿತ್ತು. ಇತ್ತೀಚಿನ ವಿಡಿಯೊದಲ್ಲಿ ಕೈದಿಗಳಿಗೆ ಡಿಜಿಪಿ ಅವರೇ ಫೋನ್‌ಗಳನ್ನು ಸರಬರಾಜು ಮಾಡುತ್ತಿದ್ದಾರೆಂದು ಆರೋಪಿಸಲಾಗಿದೆ. ಇಡೀ ಪ್ರಕರಣದಲ್ಲಿ ಕೆಳಹಂತದ ಅಧಿಕಾರಿಗಳ, ಬಹುಶಃ ಜೈಲಿನೊಳಗೆ ಕಾರ್ಯ ನಿರ್ವಹಿಸುವ ಅಧಿಕಾರಿಗಳ ಕೈವಾಡ ಇರುವಂತಿದೆ. ತಮ್ಮ ಅವ್ಯವಹಾರಕ್ಕೆ ಅಡೆತಡೆ ಎದುರಾದ ಹಿನ್ನೆಲೆಯಲ್ಲಿ ಅವರು ಈ ತಂತ್ರ ರೂಪಿಸಿರುವ ಸಾಧ್ಯತೆಯಿದೆ. ಪ್ರಸ್ತುತ ನಡೆಯುತ್ತಿರುವ ಕಾರಾಗೃಹಗಳ ಸುಧಾರಣೆ ಪ್ರಕ್ರಿಯೆಗೆ ಹಿನ್ನಡೆ ಉಂಟುಮಾಡುವ ಸಂಘಟಿತ ಪ್ರಯತ್ನದ ರೂಪದಲ್ಲಿಯೂ ಪ್ರಸಕ್ತ ಘಟನೆಯನ್ನು ನೋಡಬಹುದಾಗಿದೆ.

ಕೇಂದ್ರ ಕಾರಾಗೃಹದಲ್ಲಿನ ಅವ್ಯವಸ್ಥೆಯ ಸರಣಿ ಮುಂದುವರಿದಿದೆ. ಹಿತೇಂದ್ರ ವರದಿಯನ್ನು ವಿಳಂಬವಿಲ್ಲದೆ ಅನುಷ್ಠಾನಗೊಳಿಸುವ ಮೂಲಕ ಕಾರಾಗೃಹಗಳ ಸುಧಾರಣೆಗೆ ಸರ್ಕಾರ ಮುಂದಾಗಬೇಕು.

ಕೇಂದ್ರ ಕಾರಾಗೃಹದಲ್ಲಿನ ಹದಗೆಟ್ಟಿರುವ ವ್ಯವಸ್ಥೆಗೆ ರಚನಾತ್ಮಕ ನ್ಯೂನತೆಗಳೇ ಮುಖ್ಯ ಕಾರಣಗಳಾಗಿವೆ. ಎಡಿಜಿಪಿ ಆರ್. ಹಿತೇಂದ್ರ ಅವರು ಸಲ್ಲಿಸಿರುವ ವರದಿಯು, ತೀವ್ರ ಸಿಬ್ಬಂದಿ ಕೊರತೆ, ದುರ್ಬಲ ಕಣ್ಗಾವಲು, ಹಳತಾದ ಮೊಬೈಲ್ ಜಾಮರ್‌ಗಳು ಹಾಗೂ ಆಡಳಿತಾತ್ಮಕ ಲೋಪಗಳಿಂದ ಕಾರಾಗೃಹ ಬಳಲುತ್ತಿರುವುದನ್ನು ಗುರ್ತಿಸಿದೆ. ಸುಮಾರು 4,834 ಕೈದಿಗಳು ಜೈಲಿನೊಳಗಿದ್ದು, ಅವರ ನಿರ್ವಹಣೆಗೆ 571 ಸಿಬ್ಬಂದಿಯಷ್ಟೇ ಇದ್ದಾರೆ. ಮಂಜೂರಾಗಿರುವ ಹುದ್ದೆಗಳಲ್ಲಿ ಸುಮಾರು ಶೇ 40ರಷ್ಟು, ಅಂದರೆ 388 ಹುದ್ದೆಗಳನ್ನು ತುಂಬಬೇಕಾಗಿದೆ. ಮಾದರಿ ಜೈಲು ಸಂಹಿತೆಯ ಪ್ರಕಾರ ಪ್ರತಿ ಆರು ಕೈದಿಗಳಿಗೆ ಓರ್ವ ಸಿಬ್ಬಂದಿ ಇರಬೇಕಾಗುತ್ತದೆ. ಆದರೆ, ಪರಪ್ಪನ ಅಗ್ರಹಾರದ ಜೈಲಿನಲ್ಲಿ 40 ಕೈದಿಗಳಿಗೆ ಒಬ್ಬರಂತೆ ಸಿಬ್ಬಂದಿಯ ಅನುಪಾತವಿದೆ. ಈ ಸಿಬ್ಬಂದಿಯನ್ನು ಪಾಳಿಗಳಲ್ಲಿ ನಿಯೋಜಿಸಿದಾಗ, ಭದ್ರತಾ ವ್ಯವಸ್ಥೆ ಸಹಜವಾಗಿಯೇ ದುರ್ಬಲಗೊಳ್ಳಲಿದೆ. ಕಾರಾಗೃಹದ ಕಣ್ಗಾವಲು ಸಾಮರ್ಥ್ಯದಲ್ಲೂ ಸಮಸ್ಯೆಗಳಿವೆ. ಇಲ್ಲಿರುವ 332 ಕ್ಯಾಮೆರಾಗಳಿಂದ ಜೈಲಿನಲ್ಲಿನ ಶೇ 7ರಷ್ಟು ಕೈದಿಗಳ ಚಲನವಲನ ಗಮನಿಸಲಷ್ಟೇ ಸಾಧ್ಯವಿದೆ. ದೆಹಲಿಯ ತಿಹಾರ್ ಜೈಲಿನಲ್ಲಿರುವ 8,000 ಕ್ಯಾಮೆರಾಗಳ ಸಂಖ್ಯೆಯನ್ನು ಗಮನಿಸಿದರೆ, ಪರಪ್ಪನ ಅಗ್ರಹಾರದ ಜೈಲಿನಲ್ಲಿನ ಕೊರತೆ ಸ್ಪಷ್ಟವಾಗುತ್ತದೆ. ಈಗ ಜೈಲಿನಲ್ಲಿ ಬಳಕೆಯಾಗುತ್ತಿರುವ ಮೊಬೈಲ್ ಜಾಮರ್‌ಗಳು ಹಳೆಯ ತಂತ್ರಜ್ಞಾನ ಹೊಂದಿದ್ದು, 5ಜಿ ನೆಟ್‌ವರ್ಕ್‌ಗೆ ತಡೆಯೊಡ್ಡುವಲ್ಲಿ ಅವು ನಿರುಪಯುಕ್ತವಾಗಿವೆ. ಹಾಗಾಗಿಯೇ ಕೈದಿಗಳಿಗೆ ಸಂವಹನ ಮಾರ್ಗಗಳು ಸುಲಭವಾಗಿ ಲಭಿಸುವಂತಾಗಿದೆ. ಕೈದಿಗಳ ದಟ್ಟಣೆಯ ಸಮಸ್ಯೆ ಪರಿಹರಿಸಲಿಕ್ಕಾಗಿ ಹೊಸ ಜೈಲು ಯೋಜನೆಗಳನ್ನು ತ್ವರಿತವಾಗಿ ಕೈಗೊಳ್ಳುವಂತೆಯೂ ಹಿತೇಂದ್ರ ಸಮಿತಿ ಶಿಫಾರಸು ಮಾಡಿದೆ. 2021ರಿಂದ 2025ರ ಅವಧಿಯಲ್ಲಿ ಜೈಲಿನೊಳಗಿನ ಕಾನೂನುಬಾಹಿರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ 154 ಪ್ರಕರಣಗಳು ದಾಖಲಾಗಿವೆ. ಇವು, ಪೊಲೀಸ್ ಠಾಣೆ ಹಂತದಲ್ಲಿಯೇ ಸಿಲುಕಿಕೊಂಡಿದ್ದು, ಯಾವುದೇ ಪ್ರಕರಣದಲ್ಲಿ ಇದುವರೆಗೆ ಯಾರಿಗೂ ಶಿಕ್ಷೆಯಾಗಿಲ್ಲ ಎನ್ನುವುದು ಕಳವಳಕಾರಿ ಸಂಗತಿ.

ಹಿತೇಂದ್ರ ವರದಿಯನ್ನು ಸರ್ಕಾರ ತಕ್ಷಣವೇ ಅನುಷ್ಠಾನಕ್ಕೆ ತರುವ ಮೂಲಕ ಜೈಲುಗಳ ಸುಧಾರಣೆಗೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಖಾಲಿ ಇರುವ ಹುದ್ದೆಗಳನ್ನು ಆದ್ಯತೆಯ ಮೇರೆಗೆ ಭರ್ತಿ ಮಾಡುವುದರ ಜೊತೆಗೆ, ತಂತ್ರಜ್ಞಾನವನ್ನು ಉನ್ನತ ದರ್ಜೆಗೆ ಏರಿಸಬೇಕಾಗಿದೆ. ಬಹುಮುಖ್ಯವಾಗಿ, ಸಿಬ್ಬಂದಿ ವರ್ಗಾವಣೆಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಮಂಡಳಿಯೊಂದನ್ನು ಸ್ಥಾಪಿಸುವುದು ಹಾಗೂ ಆಯಾ ಕ್ಷಣದ ವಿದ್ಯಮಾನಗಳ ಪರಾಮರ್ಶೆಗೆ ವಿಚಕ್ಷಣಾ ಕೇಂದ್ರವೊಂದನ್ನು ರಚಿಸುವುದು ಅಗತ್ಯವಾಗಿದೆ. ಈ ರಚನಾತ್ಮಕ ಬದಲಾವಣೆಗಳನ್ನು ಜಾರಿಗೊಳಿಸದೆ ಹೋದಲ್ಲಿ, ಕಾರಾಗೃಹದಲ್ಲಿನ ಆಡಳಿತ ವೈಫಲ್ಯದ ಸರಣಿಯ ಹೊಸ ಅಧ್ಯಾಯಕ್ಕೆ ಸರ್ಕಾರವೇ ಆಹ್ವಾನ ಕೊಟ್ಟಂತಾಗುತ್ತದೆ.

## ನಂಟಿನ ವ್ಯಾಖ್ಯಾನ ಬದಲಾಯಿತೆ?

**ವಿಶ್ಲೇಷಣೆ**

**ಪ್ರತಿಭಾ ನಂದಕುಮಾರ್**

> ಲಿವ್ ಇನ್ ಸಂಬಂಧದ ಕುರಿತ ಅಲಹಾಬಾದ್ ಹೈಕೋರ್ಟ್ ತೀರ್ಪು ಹಾಗೂ ಲಿವ್ ಇನ್‌ನಲ್ಲಿ ಇರುವವರನ್ನೂ ವಿವಾಹಿತರು ಎಂದು ಗುರ್ತಿಸುವ ಕೇಂದ್ರ ಸರ್ಕಾರದ ತೀರ್ಮಾನ, ಹೆಣ್ಣು–ಗಂಡಿನ ಸಂಬಂಧವನ್ನು ಹೊಸ ದೃಷ್ಟಿಕೋನದಲ್ಲಿ ನೋಡುತ್ತಿವೆ. ಆದರೆ, ವ್ಯಾಖ್ಯಾನ ಬದಲಾದರೂ, ಹೆಣ್ಣನ್ನು ನೋಡುವ ದೃಷ್ಟಿಕೋನದಲ್ಲಿ ಬದಲಾವಣೆಯೇನೂ ಆಗಿಲ್ಲ!

ನಮ್ಮ ಸಂಸ್ಕೃತಿಯಲ್ಲಿ ನ್ಯಾಯ–ನೀತಿ ಅವಳಿ ಪದಗಳು. ಅವೆರಡೂ ಜೊತೆಯಾಗಿಯೇ ಸಾಗುತ್ತವೆ ಎನ್ನುವುದು ತಲೆಮಾರುಗಳ ನಂಬಿಕೆ. ನ್ಯಾಯಶಾಸ್ತ್ರವು ನೀತಿಯ ಆಧಾರದ ಮೇಲೆ ನಿಂತಿದೆ ಎಂದು ಇದುವರೆಗೆ ನಾವು ತಿಳಿದಿದ್ದೆವು. ಆದರೆ, ಮದುವೆಯಾದ ವ್ಯಕ್ತಿಯೊಬ್ಬ ಮತ್ತೊಬ್ಬಳ ಜೊತೆ ಲಿವ್ ಇನ್ ಸಂಬಂಧದಲ್ಲಿರುವುದು ಅಪರಾಧವಲ್ಲ, ನ್ಯಾಯ ಮತ್ತು ನೀತಿಗೆ ಸಂಬಂಧವಿಲ್ಲ, ಅವೆರಡೂ ಬೇರೆ ಬೇರೆ, ಸಾಮಾಜಿಕ ಒಪ್ಪಿತದ ಆಧಾರದ ಮೇಲೆ ನ್ಯಾಯ ತೀರ್ಮಾನಿಸಲಾಗದು ಎಂದು ಅಲಹಾಬಾದ್ ನ್ಯಾಯಾಲಯವು ಇತ್ತೀಚೆಗೆ ನೀಡಿದ ಒಂದು ತೀರ್ಪಿನಲ್ಲಿ ಘೋಷಿಸಿದೆ.

ಇದೇ ಅಲಹಾಬಾದ್ ಹೈಕೋರ್ಟ್‌ನಲ್ಲಿ ಕಳೆದ ಮಾರ್ಚ್ 20ರಂದು ನೀಡಿರುವ ತೀರ್ಪಿನಲ್ಲಿ, ಮದುವೆಯಾದ ವ್ಯಕ್ತಿಯೊಬ್ಬ ತನ್ನ ಸಂಗಾತಿ ಬದುಕಿರುವಾಗಲೇ, ವಿಚ್ಛೇದನ ಪಡೆಯದೆಯೇ ಮತ್ತೊಬ್ಬಳೊಡನೆ ಸಹಜೀವನ (ಲಿವ್ ಇನ್) ನಡೆಸುತ್ತಿದ್ದರೆ ಅದು ಕಾನೂನು ಪ್ರಕಾರ ಅಪರಾಧ ಎಂದು ಹೇಳಿದೆ.

ಅನೈತಿಕ ಸಂಬಂಧ ಅಪರಾಧವಲ್ಲ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ಮಹತ್ವದ ತೀರ್ಪೊಂದರಲ್ಲಿ ಹೇಳಿತ್ತು. ಈ ತೀರ್ಪಿಗೆ ಪೂರಕವಾಗಿ, ಬ್ರಿಟಿಷರು ಜಾರಿಗೆ ತಂದ 158 ವರ್ಷದಷ್ಟು ಹಳೆಯ ಕಾನೂನನ್ನು ಉಲ್ಲೇಖಿಸಲಾಗಿತ್ತು. ಆ ಕಾನೂನು, 'ಮಹಿಳೆಯನ್ನು ಪುರುಷರ ಸ್ವತ್ತು ಎಂದು ಪರಿಗಣಿಸುತ್ತದೆ. ಮದುವೆಯಾದ ತಕ್ಷಣ ಮಹಿಳೆಯರಿಗೆ ಪರಪುರುಷನೊಂದಿಗೆ ಲೈಂಗಿಕ ಸಂಬಂಧ ಇಟ್ಟುಕೊಳ್ಳುವುದನ್ನು ಅಪರಾಧ ಎನ್ನುವುದು ನ್ಯಾಯೋಚಿತವಲ್ಲ.' ಇದನ್ನು ಪ್ರತಿಭಟಿಸಿ 'ವ್ಯಭಿಚಾರ ಕಾನೂನುಗಳನ್ನು ದುರ್ಬಲಗೊಳಿಸುವುದರಿಂದ ವಿವಾಹಗಳ ಪಾವಿತ್ರ್ಯದ ಮೇಲೆ ಪರಿಣಾಮ ಬೀರುತ್ತದೆ. ವ್ಯಭಿಚಾರವನ್ನು ಕಾನೂನುಬದ್ಧಗೊಳಿಸುವುದರಿಂದ ವಿವಾಹ ಬಂಧಗಳಿಗೆ ಹಾನಿ ಆಗುತ್ತದೆ' ಎಂದು ಸರ್ಕಾರಿ ವಕೀಲರು ನ್ಯಾಯಾಲಯಕ್ಕೆ ತಿಳಿಸಿ, 'ಭಾರತೀಯ ನೀತಿಶಾಸ್ತ್ರವು ವಿವಾಹ ಮತ್ತು ಅದರ ಪಾವಿತ್ರ್ಯಕ್ಕೆ ಅತ್ಯಂತ ಮಹತ್ವವನ್ನು ನೀಡುತ್ತದೆ' ಎಂದು ಹೇಳಿದ್ದರು. ಈ ಎಲ್ಲದರ ಹಿನ್ನೆಲೆಯಲ್ಲಿ, ಅನೈತಿಕ ಸಂಬಂಧ ಅಪರಾಧವಲ್ಲ ಎನ್ನುವ ಸುಪ್ರೀಂ ಕೋರ್ಟ್ ತೀರ್ಪನ್ನು ಗಮನಿಸಿದಾಗ ಎದುರಾಗುವ ಪ್ರಶ್ನೆ: ಈ ತೀರ್ಪು ಮಹಿಳೆಯರಿಗಷ್ಟೆ ವಿವಾಹೇತರ ಸಂಬಂಧಕ್ಕೆ ಅನುಮತಿ ನೀಡುತ್ತದೆಯೋ ಅಥವಾ ಪುರುಷನಿಗೂ ಅನುಮತಿಸುತ್ತದೆಯೋ?

ಇದೇ ವಾದದ ಜಾಡಿನಲ್ಲಿ ಸಾಗಿದರೆ, ಮಹಿಳೆಯೊಬ್ಬಳು ತನ್ನ ಗಂಡ ಮತ್ತೊಬ್ಬ ಮಹಿಳೆಯ ಜೊತೆ ಲಿವ್ ಇನ್ ಸಂಬಂಧ ಇಟ್ಟುಕೊಂಡಿರುವುದನ್ನು ಪ್ರತಿಭಟಿಸಿ ಕಾನೂನು ನೆರವು ಕೇಳುವಂತಿಲ್ಲ, ಕಾನೂನಿನ ಅನ್ವಯ ಆಕೆಗೆ ಪರಿಹಾರ ಸಿಗುವುದಿಲ್ಲ ಎಂದು ಭಾವಿಸಬಹುದು. ಹಾಗಾದಲ್ಲಿ, ಆ ಮಹಿಳೆಗೆ ಅನ್ಯಾಯ ಆಗುತ್ತದಲ್ಲವೆ? ಕಾನೂನು ಹಾದರವನ್ನು ಅನುಮತಿಸಿದೆ ಅಂದಮೇಲೆ ಯಾರಲ್ಲಿ ಹೋಗಿ ನ್ಯಾಯ ಕೇಳಬೇಕು? ನ್ಯಾಯಾಲಯದ ತೀರ್ಪುಗಳು, ಅಪರಾಧಿಗಳಿಗೆ ಸುಲಭವಾಗಿ ತಪ್ಪಿಸಿಕೊಳ್ಳುವ ಉಪಾಯವನ್ನು ಹೇಳಿಕೊಟ್ಟಂತೆ ಕಾಣಿಸುತ್ತಿಲ್ಲವೆ?

2027ರ ಜನಗಣತಿಯಲ್ಲಿ ಲಿವ್ ಇನ್ ಸಂಬಂಧದಲ್ಲಿ ಇರುವವರನ್ನೂ ವಿವಾಹಿತರೆಂದೇ ಪರಿಗಣಿಸಲಾಗುತ್ತದೆ ಎಂದು ಕೇಂದ್ರ ಸರ್ಕಾರ ಘೋಷಿಸಿರುವುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು.

ಕಾನೂನಿನ ಅನ್ವಯ ವಿವಾಹಿತರು ಹಲವು ಸಂದರ್ಭಗಳಲ್ಲಿ ಮದುವೆಯ ದಾಖಲೆಯನ್ನು ಸಲ್ಲಿಸಬೇಕಾಗಿದೆ. ಮದುವೆಯ ನೋಂದಣಿಯನ್ನೂ ಕಾನೂನು ಕಡ್ಡಾಯಗೊಳಿಸಿದೆ. ಕಾನೂನಿಗೆ ಸಂಬಂಧಿಸಿದ ಪ್ರಸಂಗಗಳಲ್ಲಿ ವ್ಯಾವಹಾರಿಕವಾಗಿ, ಇಂತಹವರ ಗಂಡ ಅಥವಾ ಹೆಂಡತಿ ಎಂದು ಘೋಷಿಸುವುದು ಕಡ್ಡಾಯ. ಮದುವೆ ಆಗದೆಯೇ ಜೊತೆಯಲ್ಲಿ ಇರುವವರನ್ನು ವಿವಾಹಿತರೆಂದೇ ಪರಿಗಣಿಸುವುದಾದರೆ, ಮದುವೆ ನೋಂದಣಿಯ ದಾಖಲೆಗೆ ಅರ್ಥವೇ ಇಲ್ಲವಾಗುತ್ತದೆ. ಹೆಣ್ಣು ಅಥವಾ ಗಂಡು ಎಂದು ಲೈಂಗಿಕ ಚಹರೆಯನ್ನು ಸ್ವಯಂ ದೃಢೀಕರಿಸುವುದು ಹೇಗೆ ಜಾರಿಗೆ ಬಂದಿದೆಯೋ ಹಾಗೆಯೇ ವಿವಾಹಿತರು ಮತ್ತು ಸಹಜೀವನ ನಡೆಸುತ್ತಿರುವವರು ಎನ್ನುವ ವರ್ಗೀಕರಣವೂ ಅತ್ಯಗತ್ಯ. ಲಿವ್ ಇನ್ ಜೋಡಿಗಳಿಗೆ ವಿವಾಹಿತ ದಂಪತಿಗಳಿಗಿರುವ ಎಲ್ಲ ಸೌಕರ್ಯಗಳನ್ನು ನೀಡಿದರೂ ಅವರನ್ನು 'ಲಿವ್ ಇನ್ ಜೋಡಿ' ಎಂದು ಪರಿಗಣಿಸಬೇಕೇ ಹೊರತು, 'ವಿವಾಹಿತ ದಂಪತಿ' ಎನ್ನಲು ಸಾಧ್ಯವಿಲ್ಲ. ಎರಡೂ ಪ್ರತ್ಯೇಕ ವರ್ಗಗಳು.

'ಸಲಿಂಗರತಿ ಅಪರಾಧವಲ್ಲ' ಎನ್ನುವ ತೀರ್ಪು 2018ರಲ್ಲಿ ಜಾರಿಯಾಗಿದ್ದರೂ, ಸಲಿಂಗಿಗಳ ಮದುವೆ ಇದುವರೆಗೆ ಕಾನೂನಿನ ಮಾನ್ಯತೆಯನ್ನು ಹೊಂದಿಲ್ಲ. ಸಲಿಂಗಿಗಳು ಲಿವ್ ಇನ್ ಸಂಬಂಧದಲ್ಲಿ ಇರುವುದು ಅಪರಾಧವಲ್ಲ ಎಂದು ಹೇಳಿದ್ದರೂ, ವಿಶೇಷ ವಿವಾಹ ಕಾನೂನಿನ ಅನ್ವಯ (ಎಸ್‌ಎಂಎ) ಸಲಿಂಗ ವಿವಾಹವನ್ನು ಸುಪ್ರೀಂ ಕೋರ್ಟ್ ಪರಿಗಣಿಸಿಲ್ಲ. ಲಿವ್ ಇನ್ ಸಂಬಂಧದಲ್ಲಿ ಇರುವವರು ಮತ್ತೊಬ್ಬರ ಜೊತೆ ವೈವಾಹಿಕ ಸಂಬಂಧದಲ್ಲಿ ಇರಬಾರದು. ಆದರೆ, ಅಲಹಾಬಾದ್ ಕೋರ್ಟ್‌ನ ತೀರ್ಪು, ಗಂಡು ವಿವಾಹಿತನಾಗಿದ್ದೂ ಮತ್ತೊಬ್ಬಳೊಡನೆ ಲಿವ್ ಇನ್ ಸಂಬಂಧದಲ್ಲಿ ಇರಬಹುದು ಎಂದು ಹೇಳಿದೆ. ಇಲ್ಲಿ ಪ್ರಧಾನವಾಗಿ ಕೇಳಬೇಕಾದ ಪ್ರಶ್ನೆ ಎಂದರೆ, ಇದು ಹೆಣ್ಣಿಗೂ ಅನ್ವಯಿಸುತ್ತದೆಯೆ? ವಿವಾಹಿತ ಹೆಣ್ಣೊಬ್ಬಳು ಮತ್ತೊಬ್ಬನೊಡನೆ ಲಿವ್ ಇನ್ ಸಂಬಂಧದಲ್ಲಿ ಇರಬಹುದೆ? ಹೇಗಿದ್ದರೂ ನ್ಯಾಯ ಬೇರೆ, ನೀತಿ ಬೇರೆ ಎಂದು ಕೋರ್ಟು ಹೇಳಿರುವುದರಿಂದ ಇದರಲ್ಲೇನು ತಪ್ಪು ಎಂದು ವಾದಿಸಬಹುದು.

ಮದುವೆಯು ಪರಸ್ಪರರಲ್ಲಿ ನಂಬಿಕೆಯಿಟ್ಟು ಮಾಡಿಕೊಳ್ಳುವ ಒಪ್ಪಂದ ಎನ್ನುವುದನ್ನು ಒಪ್ಪುವುದಾದರೆ, ವಿವಾಹೇತರ ಸಂಬಂಧ ಇಟ್ಟುಕೊಳ್ಳುವುದು 'ನಂಬಿಕೆ ದ್ರೋಹ' ಅಲ್ಲವೆ? ವ್ಯಕ್ತಿಗತ ಸ್ವಾತಂತ್ರ್ಯವು ಪರಮ ಸ್ವಾತಂತ್ರ್ಯವಲ್ಲ, ಗಂಡ/ಹೆಂಡತಿ ಬದುಕಿರುವಾಗಲೇ ಬೇರೊಬ್ಬನೊಡನೆ/ಳೊಡನೆ ಸಂಬಂಧ ಇಟ್ಟುಕೊಳ್ಳುವುದು ಆತನ/ಆಕೆಯ ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ನ್ಯಾಯಮೂರ್ತಿ ವಿವೇಕ್ ಕುಮಾರ್ ಸಿಂಗ್ ಪ್ರಕರಣವೊಂದರಲ್ಲಿ ಉಲ್ಲೇಖಿಸಿದ್ದರು.

ಸಾಂಗತ್ಯದ ಬಗೆಗಿನ ನ್ಯಾಯಾಲಯದ ಹಿಂದಿನ ತೀರ್ಪುಗಳು ಭಿನ್ನವಾಗಿವೆ. 'ಸಂಗಾತಿಯೊಬ್ಬರು ತಮ್ಮ ಸಂಗಾತಿಯ ಸಹವಾಸವನ್ನು ಆನಂದಿಸುವ ಶಾಸನಬದ್ಧ ಹಕ್ಕನ್ನು ಹೊಂದಿರುತ್ತಾರೆ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಸಲುವಾಗಿ ಆತನಿಂದ/ಆಕೆಯಿಂದ ಆ ಹಕ್ಕನ್ನು ಕಸಿದುಕೊಳ್ಳುವಂತಿಲ್ಲ. ಅವರ ಶಾಸನಬದ್ಧ ಹಕ್ಕನ್ನು ಉಲ್ಲಂಘಿಸುವ ಪ್ರಸಂಗದಲ್ಲಿ, ಉಲ್ಲಂಘಿಸುವ ವ್ಯಕ್ತಿಗೆ ಯಾವುದೇ ರಕ್ಷಣೆಯನ್ನು ನೀಡಲಾಗುವುದಿಲ್ಲ... ಒಬ್ಬ ವ್ಯಕ್ತಿಯ ಸ್ವಾತಂತ್ರ್ಯವು ಇನ್ನೊಬ್ಬ ವ್ಯಕ್ತಿಯ ಕಾನೂನುಬದ್ಧ ಹಕ್ಕನ್ನು ಅತಿಕ್ರಮಿಸಲು ಅಥವಾ ಮೀರಿಸಲು ಸಾಧ್ಯವಿಲ್ಲ' ಎಂದು ನ್ಯಾಯಾಲಯ ಹೇಳಿತ್ತು. 'ಅರ್ಜಿದಾರರು ಈಗಾಗಲೇ ವಿವಾಹಿತರಾಗಿದ್ದರೆ ಮತ್ತು ಅವರ ಸಂಗಾತಿಯು ಜೀವಂತವಾಗಿದ್ದರೆ, ಹಿಂದಿನ ಸಂಗಾತಿಯಿಂದ ವಿಚ್ಛೇದನವನ್ನು ಪಡೆಯದೆ ಅವನು/ಅವಳು ಮೂರನೇ ವ್ಯಕ್ತಿಯೊಂದಿಗೆ ಲಿವ್ ಇನ್ ಸಂಬಂಧವನ್ನು ಪ್ರವೇಶಿಸಲು ಕಾನೂನುಬದ್ಧವಾಗಿ ಅನುಮತಿಸಲಾಗುವುದಿಲ್ಲ' ಎಂದು ಕೂಡ ನ್ಯಾಯಾಲಯ ಹೇಳಿತ್ತು. ಈ ತೀರ್ಪುಗಳಿಗೆ ವ್ಯತಿರಿಕ್ತವಾದ ಸಂಬಂಧವನ್ನು ಈಗ ನ್ಯಾಯಾಲಯ ಅನುಮತಿಸಿದೆ. ಅಂದರೆ, ಹೆಣ್ಣು–ಗಂಡಿನ ಸಂಬಂಧಕ್ಕೆ ಮತ್ತೊಂದು ಹೊರಳು ಬಂದಿದೆ ಎಂದರ್ಥ.

ಮಾನವ ಸಂಸ್ಕೃತಿಯಲ್ಲಿ ವಿವಾಹ ಎನ್ನುವ ಪರಿಕಲ್ಪನೆ ಬಂದಾಗಿನಿಂದಲೇ ಹಾದರ ಎನ್ನುವುದೂ ಇದೆ. ಜಗತ್ತಿನ ಎಲ್ಲಾ ಸಮುದಾಯಗಳು, ಭಾಷೆಗಳಲ್ಲೂ ಕಾಲಾಂತರದಿಂದಲೂ ಇದಕ್ಕೆ ನಿರ್ದಿಷ್ಟ ಪರಿಭಾಷೆಗಳಿವೆ. 'ಇಟ್ಟುಕೊಂಡವಳು', 'ಕಟ್ಟಿಕೊಂಡವಳು', 'ವೈಪಟ್ಟಿ', 'ವೆಪ್ಪಾಟ್ಟಿ', 'ರಖೇಲ್', 'ಉಂಪುಡುಕತ್ತೆ', 'ರಂಡಿ', 'ಲೌಡಿ' ಇತ್ಯಾದಿ ಪದಗಳನ್ನು ಬೈಗುಳಗಳೆಂದು ಪರಿಗಣಿಸಲಾಗಿದೆ. ಅವನ್ನು ಅಧಿಕೃತ ಸಂದರ್ಭದಲ್ಲಿ ಬಳಸಬಾರದು ಎನ್ನುವ ಕಟ್ಟಳೆಯೂ ಇದೆ. ಇತ್ತೀಚೆಗೆ ಟೀಸರ್ ಬಿಡುಗಡೆಯಾದ ಕನ್ನಡ ಸಿನಿಮಾವೊಂದರ ಹಾಡಿನಲ್ಲಿ 'ರಂಡೆ ಮುಂಡೇರ ಕಣ್ಣು' ಎನ್ನುವ ಸಾಲಿದೆ. ಅದನ್ನು ಸೆನ್ಸಾರ್ ಅನುಮತಿಸಿದೆಯೆ?

ಹಿಂದೆ ಒಂದು ಸಂದರ್ಭದಲ್ಲಿ, ವಿವಾಹಿತ ಪುರುಷರ ಜೊತೆ ಸಹಬಾಳ್ವೆ ನಡೆಸುವ ಮಹಿಳೆ ಜೀವನಾಂಶ ಪಡೆಯಲು ಅನರ್ಹಳು ಎಂದು ತೀರ್ಪು ನೀಡಿದ ಸಂದರ್ಭದಲ್ಲಿ ನ್ಯಾಯಪೀಠವು 'ಇಟ್ಟುಕೊಂಡವಳು' ಎಂಬ ಪದ ಬಳಕೆ ಮಾಡಿತ್ತು. ನ್ಯಾಯಮೂರ್ತಿ ಮಾರ್ಕಂಡೇಯ ಕಟ್ಜು ಮತ್ತು ಟಿ.ಎಸ್. ಠಾಕೂರ್ ಅವರನ್ನು ಒಳಗೊಂಡ ನ್ಯಾಯಪೀಠದ ಎದುರು, 'ಇಟ್ಟುಕೊಂಡವಳು' (ಕೀಪ್) ಎಂಬ ಪದ ಬಳಕೆ ಆಕ್ಷೇಪಾರ್ಹವಾಗಿದ್ದು, ಆ ಪದ ಬಳಕೆಯನ್ನು ತೀರ್ಪಿನಿಂದ ತೆಗೆದು ಹಾಕಬೇಕು ಎಂದು ಹೆಚ್ಚುವರಿ ಸಾಲಿಟರ್ ಜನರಲ್ ಇಂದಿರಾ ಜೈಸಿಂಗ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಇಲ್ಲಿ ನೈತಿಕತೆ ಹೆಸರಿನ ಅನೈತಿಕ ಪೊಲೀಸ್‌ಗಿರಿಯ ಮಾತನ್ನೂ ಪರಿಗಣಿಸಬೇಕಾಗಿದೆ. ಸಾವಿರಾರು ವರ್ಷಗಳಲ್ಲಿ ಬದಲಾಗದ ಮಾನವ ನಡವಳಿಕೆಯನ್ನು ಕಾನೂನಿನ ಕಡಿವಾಣ ಹಾಕಿ ಬದಲಿಸಲು ಸಾಧ್ಯವಾಗಿಲ್ಲ ಎನ್ನುವುದೂ ನಿಚ್ಚಳ ಸತ್ಯ. ಪೊಲೀಸ್ ಹಾಗೂ ಕೋರ್ಟ್ ಇಲ್ಲದಿದ್ದರೆ ಇಲ್ಲಿ ಪ್ರತಿಯೊಬ್ಬರೂ ಅಪರಾಧಿಗಳಾಗಿರುತ್ತಿದ್ದರು ಎನ್ನುವುದು ಬರೀ ತಮಾಷೆಯ ಮಾತಲ್ಲ.

ಪ್ರಧಾನವಾಗಿ ಚರ್ಚಿಸಬೇಕಾದ ಅಂಶ ಎಂದರೆ, ಪ್ರಸ್ತುತ ಜಾರಿಗೆ ಬಂದ ಹೈಕೋರ್ಟ್ ತೀರ್ಪು ಕೂಡ ಪುರುಷನಿಗೇ ಇನ್ನಷ್ಟು ಅನುಕೂಲ ಮಾಡಿಕೊಡುವಂತಹದ್ದಾಗಿದೆ. ಒಂದು ರೀತಿ ಅವನ ಸ್ವಚ್ಛಂದತೆಗೆ ಅನುಮತಿ ಕೊಟ್ಟ ಹಾಗಿದೆ. ಅದೇ ವಿವಾಹಿತ ಹೆಣ್ಣೊಬ್ಬಳು ಇನ್ನೊಬ್ಬನೊಡನೆ ಲಿವ್ ಇನ್ ಸಂಬಂಧ ಇಟ್ಟುಕೊಂಡಾಗ ಇದೇ ತೀರ್ಪು ಜಾರಿಯಾಗುತ್ತದೆಯೆ? ಇಂದಿಗೂ ಇಂತಹ ಸಂಬಂಧಗಳು ತಂದೊಡ್ಡುವ ತೊಡಕುಗಳಿಗೆ ಸಿಕ್ಕಿ ನರಳುತ್ತಿರುವವರಲ್ಲಿ ಹೆಂಗಸರೇ ಹೆಚ್ಚು.

**ವಾಚಕರ ವಾಣಿ**

### ಉದ್ಯೋಗಾಧಾರಿತ ಶಿಕ್ಷಣ: ಇಂದಿನ ತುರ್ತು

**ದೇಶದ** ಕೃಷಿ ವಲಯದಿಂದ ಜನರು ವಿಮುಖರಾಗುತ್ತಿದ್ದರೂ ಉತ್ಪಾದನಾ ವಲಯದಲ್ಲಿ ಪರ್ಯಾಯ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ. ಬದಲಾಗಿ, ಕಡಿಮೆ ಆದಾಯದ ಸೇವಾ ವಲಯದ ಉದ್ಯೋಗಗಳಲ್ಲಿ ಯುವಜನತೆ ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದಾರೆ. ಇದು ದೇಶದ ಆರ್ಥಿಕತೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ಯುವಜನರು ಕೆಲಸವಿಲ್ಲದೆ ಇರುವುದು ಶಿಕ್ಷಣ ಮತ್ತು ಉದ್ಯಮದ ನಡುವಿನ ಕಂದಕವನ್ನು ಹೆಚ್ಚಿಸಿದೆ. ಕೌಶಲರಹಿತ ಕೆಲಸಗಳಲ್ಲಿ ತೊಡಗಿರುವವರ ಸಂಖ್ಯೆ ಹೆಚ್ಚುತ್ತಿರುವುದು ದೇಶದ 'ಜನಸಂಖ್ಯಾ ಲಾಭ' ವ್ಯರ್ಥವಾಗುವ ಮುನ್ಸೂಚನೆಯಾಗಿದೆ. ಪದವೀಧರರಿಗೆ ತಾಂತ್ರಿಕ ಜ್ಞಾನವಿದ್ದರೂ ಪ್ರಾಯೋಗಿಕ ಕೌಶಲದ ಕೊರತೆಯಿಂದಾಗಿ ಕಂಪನಿಗಳು ಅವರನ್ನು ನೇಮಿಸಿಕೊಳ್ಳುವುದಿಲ್ಲ. ಈ ಅಸಮತೋಲನ ಸರಿಪಡಿಸಲು ಉದ್ಯೋಗಾಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕಿದೆ.

**ಭೂಮಿಕಾ ವಿ.,** ಕೋಲಾರ

### ಜನರ ನೆಮ್ಮದಿ: ಸಚಿವರ ಅಸಹಾಯಕತೆ

'**ಮದ್ಯಪಾನ** ನಿಷೇಧ ಅಪ್ರಸ್ತುತ' ಎಂದು ಸಚಿವ ಎಚ್.ಕೆ. ಪಾಟೀಲರು ಹೇಳಿದ್ದಾರೆ (ಪ್ರ.ವಾ., ಏ. 1). ಅಂದರೆ ಮದ್ಯವ್ಯಸನದಿಂದ ಬಡಕುಟುಂಬಗಳ ಗೋಳು ಹಾಗೆಯೇ ಮುಂದುವರಿಯಬೇಕೆ? ಪ್ರಸ್ತುತ ಮದ್ಯವ್ಯಸನವು ಯುವಜನರಲ್ಲಿ ವ್ಯಾಪಕವಾಗಿ ಹೆಚ್ಚುತ್ತಿದೆ. ಇದರಿಂದ ಪೋಷಕರು ಆತಂಕಕ್ಕೆ ಒಳಗಾಗಿದ್ದಾರೆ. ಮದ್ಯವ್ಯಸನಿಗಳು ಪಾನಮತ್ತರಾಗಿ ರಸ್ತೆಯಲ್ಲಿ ಸಂಚರಿಸುವಾಗ ಅಪಘಾತಗಳು ಸಂಭವಿಸುತ್ತಿವೆ. ಒಟ್ಟಾರೆಯಾಗಿ ಮದ್ಯವ್ಯಸನವು ಇಡೀ ಸಮಾಜವನ್ನೇ ಬಾಧಿಸುತ್ತಿದೆ. ಇಂತಹ ಸ್ಥಿತಿಯಲ್ಲಿ ಸಾರ್ವಜನಿಕರ ನೆಮ್ಮದಿ ಕಾಪಾಡಬೇಕಿದ್ದ ಸಚಿವರೇ ಅಸಹಾಯಕರಾದರೆ ಹೇಗೆ?

**ಹುರುಕಡ್ಲಿ ಶಿವಕುಮಾರ,** ಬಾಚಿಗೊಂಡನಹಳ್ಳಿ

### ಅಭಿವೃದ್ಧಿ ಪರ ಪಕ್ಷಾತೀತ ಧ್ವನಿ ಕ್ಷೀಣ

**15ನೇ** ಹಣಕಾಸು ಆಯೋಗದ ಶಿಫಾರಸು ಅನ್ವಯ ಕರ್ನಾಟಕಕ್ಕೆ ಕೇಂದ್ರದಿಂದ ಬರಬೇಕಿದ್ದ ₹15,583 ಕೋಟಿ ಖೋತಾ ಆಗಿದೆ (ಪ್ರ.ವಾ., ಏ. 1). ಕೇಂದ್ರ ಸರ್ಕಾರದಲ್ಲಿ ಆಡಳಿತ ಪಕ್ಷದ 19 ಸಂಸದರು ಮತ್ತು 7 ರಾಜ್ಯಸಭಾ ಸದಸ್ಯರು ರಾಜ್ಯದ ಪ್ರತಿನಿಧಿಗಳಾಗಿದ್ದಾರೆ. ರಾಜ್ಯದಲ್ಲಿ ಅತಿಹೆಚ್ಚು ಜಿಎಸ್‌ಟಿ ಸಂಗ್ರಹವಾಗುತ್ತದೆ. ಹೀಗಿದ್ದರೂ ಅನುದಾನ ಬಿಡುಗಡೆ ಮಾಡಿಸುವಲ್ಲಿ ಕೇಂದ್ರ ಸಚಿವರು ಮತ್ತು ಸಂಸದರ ನಿರ್ಲಕ್ಷ್ಯ ಎದ್ದುಕಾಣುತ್ತದೆ. ಇವರ ಕಾರ್ಯವೈಖರಿಯು ರಾಜ್ಯ ಸರ್ಕಾರದ ವಿರುದ್ಧ ಟೀಕೆ ಮಾಡುವುದಕ್ಕಷ್ಟೇ ಸೀಮಿತವಾಗಿದೆ. ಅಭಿವೃದ್ಧಿ ಪರ ಪಕ್ಷಾತೀತವಾಗಿ ಧ್ವನಿ ಎತ್ತದಿರುವುದರಿಂದ ರಾಜ್ಯದಲ್ಲಿ ಅಭಿವೃದ್ಧಿ ಯೋಜನೆಗಳು ಕುಂಠಿತವಾಗುತ್ತಿವೆ.

**ಆರ್. ಕುಮಾರ್,** ಬೆಂಗಳೂರು

### ಬೇಸಿಗೆ ರಜೆ ಅರ್ಥಪೂರ್ಣವಾಗಿ ಕಳೆಯಲಿ

**ಸರ್ಕಾರವು** ಏ. 11ರಿಂದ ಮೇ 28ರವರೆಗೆ ಮಕ್ಕಳಿಗೆ ಬೇಸಿಗೆ ರಜೆ ನೀಡಿದೆ. ಶಾಲೆಯಲ್ಲಿ ಪಠ್ಯಕ್ಕೆ ಸಂಬಂಧಪಟ್ಟಂತೆ ಮಕ್ಕಳ ನಿರಂತರ ಕಲಿಕೆ ಇರುತ್ತದೆ. ಆದರೆ, ರಜೆಯ ಮಜಾವನ್ನು ಅರ್ಥಪೂರ್ಣವಾಗಿ ಕಳೆಯಬೇಕಲ್ಲವೆ? ಪ್ರಸ್ತುತ ಮೊಬೈಲ್, ಟಿ.ವಿ, ಕಂಪ್ಯೂಟರ್ ಪ್ರತಿ ಮನೆಯನ್ನೂ ಆವರಿಸಿವೆ. ಮಕ್ಕಳು ರಜಾ ಅವಧಿಯಲ್ಲಿ ಇವುಗಳ ಮುಂದೆ ಕೂತು ಗೇಮಿಂಗ್ ಆಡುತ್ತಾ ಮತ್ತಷ್ಟು ಮಾನಸಿಕ ಒತ್ತಡಕ್ಕೆ ಸಿಲುಕಲಿದ್ದಾರೆ. ಅವರಿಗೆ ಒಳಾಂಗಣ ಕ್ರೀಡೆಗಳಿಗಿಂತ ಹೊರಾಂಗಣ ಕ್ರೀಡೆಗಳಿಗೆ ಹೆಚ್ಚಿನ ಒತ್ತು ನೀಡಬೇಕು. ಗಾಳಿಪಟ ಹಾರಿಸುವುದು, ಚಿನ್ನಿದಾಂಡು, ಅಜ್ಜ–ಅಜ್ಜಿಯರಿಂದ ಕಥೆ ಕಲಿಯುವುದು – ಹೀಗೆ ಹಲವು ಚಟುವಟಿಕೆಗಳಲ್ಲಿ ಅವರು ಭಾಗಿಯಾಗುವಂತೆ ನೋಡಿಕೊಳ್ಳುವುದು ಪೋಷಕರ ಕರ್ತವ್ಯ.

**ಹರಳಹಳ್ಳಿ ಪುಟ್ಟರಾಜು,** ಪಾಂಡವಪುರ

### ಪಾರಂಪರಿಕ ಕಟ್ಟಡ ಸೌಂದರ್ಯಕ್ಕೆ ಪೆಟ್ಟು

**ಮೈಸೂರಿನಲ್ಲಿ** ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಪ್ರತಿದಿನ ಒಂದಲ್ಲಾ ಒಂದು ಸಮಸ್ಯೆ ಹುಟ್ಟಿಕೊಳ್ಳುತ್ತಿದೆ. ಈ ಕಟ್ಟಡಗಳು ಇರುವ ಜಾಗದಿಂದ 200 ಮೀಟರ್ ಪರಿಧಿಯಲ್ಲಿ ಯಾವುದೇ ಹೊಸಕಟ್ಟಡ ನಿರ್ಮಿಸುವಂತಿಲ್ಲವೆಂಬ ನಿಯಮವಿದೆ. ಪಾರಂಪರಿಕ ಕಟ್ಟಡವಾದ ಹಳೇ ಜಿಲ್ಲಾಧಿಕಾರಿ ಕಚೇರಿ ಮುಂಭಾಗವಿರುವ ಕ್ಯಾಂಟೀನ್ ಕಟ್ಟಡದ ಚಾವಣಿ ತೆರವುಗೊಳಿಸಿ ಎರಡು ಮಹಡಿಯ ಕಟ್ಟಡ ನಿರ್ಮಿಸಿ ಮತ್ಸ್ಯದರ್ಶಿನಿ ಆರಂಭಿಸಲು ಮೀನುಗಾರಿಕೆ ಇಲಾಖೆಯು ಮುಂದಾಗಿರುವುದು ಸರಿಯಲ್ಲ. ಪಾರಂಪರಿಕ ಕಟ್ಟಡಗಳ ಬಳಿ ನಿಯಮಬಾಹಿರವಾಗಿ ಕ್ಯಾಂಟೀನ್ ನಿರ್ಮಿಸಬಾರದು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಪಾರಂಪರಿಕ ಕಟ್ಟಡಗಳಿವೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಅವುಗಳ ಸೌಂದರ್ಯಕ್ಕೆ ಧಕ್ಕೆಯಾಗುತ್ತಿದೆ. ಸಂರಕ್ಷಣೆ ಬಗ್ಗೆ ಸರ್ಕಾರವು ಸ್ಪಷ್ಟ ಮಾರ್ಗಸೂಚಿ ಪ್ರಕಟಿಸಬೇಕಿದೆ.

**ಬೆಸಗರಹಳ್ಳಿ ರವಿ ಪ್ರಸಾದ್,** ಮೈಸೂರು

### ತ್ಯಾಜ್ಯ ವಿಲೇವಾರಿ ಮೇಲ್ವಿಚಾರಣೆಗೆ ನಿರ್ಲಕ್ಷ್ಯ

**ಬೆಂಗಳೂರಿನಲ್ಲಿ** ಹನುಮಂತನ ಬಾಲದಂತೆ ಬೆಳೆಯುತ್ತಿರುವ ಕಸದ ಸಮಸ್ಯೆಯನ್ನು ಬಗೆಹರಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸಾಧ್ಯವಾಗುತ್ತಿಲ್ಲ. ಬೆಳಗ್ಗೆ ವೇಳೆ ಕಸ ಸಂಗ್ರಹಕ್ಕೆ ಸರಕು ಸಾಗಣೆ ವಾಹನಗಳು ಬರುತ್ತವೆ. ಕೆಲವೆಡೆ ರಾಶಿ ಬಿದ್ದಿರುವ ತ್ಯಾಜ್ಯವನ್ನು ದೊಡ್ಡ ಲಾರಿಗಳಲ್ಲಿ ತುಂಬಿಕೊಂಡು ವಿಲೇವಾರಿ ಮಾಡಲಾಗುತ್ತದೆ. ಈ ವಾಹನಗಳು ಅಸ್ತವ್ಯಸ್ತವಾಗಿ ಸಂಚರಿಸುವಾಗ ರಸ್ತೆ ತುಂಬೆಲ್ಲ ತ್ಯಾಜ್ಯ ಬೀಳುತ್ತದೆ. ಅದರ ಮೇಲೆಯೇ ವಾಹನಗಳು ಹಾದುಹೋಗುವುದರಿಂದ ಇಡೀ ವಾತಾವರಣ ಗಬ್ಬು ನಾರುತ್ತದೆ. ರಸ್ತೆಯಲ್ಲಿ ಬಿದ್ದ ಈ ತ್ಯಾಜ್ಯವನ್ನು ಪೌರಕಾರ್ಮಿಕರು ವಿಲೇವಾರಿ ಮಾಡದೆ ನಿರ್ಲಕ್ಷ್ಯವಹಿಸುತ್ತಾರೆ. ಕೆಲವೆಡೆ ಪೌರಕಾರ್ಮಿಕ ಸಿಬ್ಬಂದಿ ಸರಿಯಾಗಿ ಕಸ ಸಂಗ್ರಹಿಸುವುದಿಲ್ಲ. ಪ್ರತಿ ರಸ್ತೆಗೊಂದು ಕಸ ಸಂಗ್ರಹಣಾ ಕೇಂದ್ರ ತೆರೆದರೆ ಜನರು ಎಲ್ಲೆಂದರಲ್ಲಿ ತ್ಯಾಜ್ಯ ಸುರಿಯುವುದು ತಪ್ಪುತ್ತದೆ. ಪ್ಲಾಸ್ಟಿಕ್ ವಸ್ತುಗಳನ್ನು ಪುಡಿ ಮಾಡುವ ಚಿಕ್ಕ ಯಂತ್ರವಿಟ್ಟರೆ ಅನುಕೂಲವಾಗಲಿದೆ. ಮೇಲ್ವಿಚಾರಕರು ಸರಿಯಾಗಿ ಕರ್ತವ್ಯ ನಿಭಾಯಿಸದೆ ಇರುವುದರಿಂದ ಕಸದ ಸಮಸ್ಯೆ ಉಲ್ಬಣಿಸಿದೆ.

**ಸುರೇಶ್ ಎನ್. ಸಾಗರ್,** ಬೆಂಗಳೂರು

### ಹಿಂದಿಗರು ಕನ್ನಡ ಕಲಿಯಲಿ

**ಉತ್ತರ ಭಾರತಕ್ಕೆ ಕೆಲಸಕ್ಕಾಗಿ ಹೋಗುವ ಕೆಲವೇ ಸಾವಿರ ಕನ್ನಡಿಗರಿಗೆ ಹಿಂದಿ ಬೇಕಾಗುತ್ತದೆಂದು ಕೆಲವರು ಹೇಳುತ್ತಾರೆ. ಕರ್ನಾಟಕಕ್ಕೆ ಕೆಲಸಕ್ಕಾಗಿ ಬರುವ ಲಕ್ಷಾಂತರ ಉತ್ತರದವರಿಗೆ ಅಲ್ಲಿನ ಶಾಲಾಪಠ್ಯದಲ್ಲೇ ಕನ್ನಡ ಕಲಿಸಿ ಕಳುಹಿಸಿ ಎಂದು ಒತ್ತಾಯಿಸಬೇಕಲ್ಲವೇ?**

**ಕವಿರಾಜ್,** ಚಿತ್ರಸಾಹಿತಿ, 'ಫೇಸ್‌ಬುಕ್'ನಿಂದ

**ಕಿಡಿನುಡಿ**

**ಜವಾಹರಲಾಲ್ ನೆಹರೂ, ಇಂದಿರಾಗಾಂಧಿ ಅವರು ಅಧಿಕಾರದಲ್ಲಿ ಇದ್ದಾಗ ಕೇಂದ್ರ ಚುನಾವಣಾ ಆಯೋಗವನ್ನು ದುರುಪಯೋಗ ಮಾಡಿಕೊಂಡಿರಲಿಲ್ಲ. ಈಗ ದುರುಪಯೋಗದ ಆರೋಪಕ್ಕೆ ಪ್ರಧಾನಿ ನರೇಂದ್ರ ಮೋದಿ ಗುರಿಯಾಗಿದ್ದಾರೆ.**

**ಸಿದ್ದರಾಮಯ್ಯ,** ಮುಖ್ಯಮಂತ್ರಿ

### 25 ವರ್ಷಗಳ ಹಿಂದೆ

ಸೋಮವಾರ, 2-4-2001

- **ಸಾಮಾನ್ಯರ ಮೇಲೆ ದುಷ್ಪರಿಣಾಮವಿಲ್ಲ: ಮಾರನ್**

ನವದೆಹಲಿ, ಏ. 1 (ಯುಎನ್‌ಐ)– ಆಮದು ವಸ್ತುಗಳ ಮೇಲಿನ ಪ್ರಮಾಣ ನಿರ್ಬಂಧಗಳನ್ನು ತೆಗೆದುಹಾಕಿರುವುದರಿಂದ ಜನಸಾಮಾನ್ಯರ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳನ್ನು ಕೇಂದ್ರ ವಾಣಿಜ್ಯ ಸಚಿವ ಮುರಸೋಳಿ ಮಾರನ್ ಇಂದು ತಳ್ಳಿ ಹಾಕಿದರು.

ಕೇಂದ್ರ ಸರ್ಕಾರದ ಕ್ರಮವನ್ನು ಪ್ರಮುಖ ವಿರೋಧ ಪಕ್ಷಗಳಾದ ಸಿಪಿಎಂ, ಸಿಪಿಐ ಮತ್ತು ಲೋಕತಾಂತ್ರಿಕ ಸಮಾಜವಾದಿ ಪಕ್ಷಗಳು ತೀವ್ರವಾಗಿ ಖಂಡಿಸಿವೆ. 'ಇದರಿಂದಾಗಿ ವಿದೇಶಿ ಕಂಪನಿಗಳಿಗೆ ಭಾರತದ ಮಾರುಕಟ್ಟೆ ಮುಕ್ತವಾಗಿ ತೆರೆದಂತಾಗುತ್ತದೆ. ಕೃಷಿ ಮತ್ತು ಸ್ವದೇಶಿ ಉದ್ಯಮಗಳು ಇದರಿಂದಾಗಿ ತೀವ್ರ ಸಂಕಷ್ಟಕ್ಕೆ ಈಡಾಗಲಿವೆ' ಎಂದು ಅವು ಎಚ್ಚರಿಸಿವೆ.

- **ಬೆಳಗಾವಿ: ಟೆಂಪೋ–ಲಾರಿ ಡಿಕ್ಕಿ: 10 ಮಂದಿ ಸಾವು**

ಬೆಳಗಾವಿ, ಏ. 1– ಹಲಗಾ ಕ್ರಾಸ್ ಬಳಿ ನಿನ್ನೆ ರಾತ್ರಿ 11.30ರ ಸುಮಾರಿಗೆ ಟೆಂಪೋ ಮತ್ತು ಲಾರಿ ಮಧ್ಯೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಒಂದೇ ಕುಟುಂಬದ ಆರು ಮಂದಿ ಸೇರಿದಂತೆ ಹತ್ತು ಜನರು ಮೃತಪಟ್ಟಿದ್ದು, ಏಳು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಬೆಳಗಾವಿಯ ಕೊಂಡಸಕೊಪ್ಪ ಗ್ರಾಮಕ್ಕೆ ಹೊರಟಿದ್ದ ಟೆಂಪೋ ಮತ್ತು ಬೆಳಗಾವಿ ಕಡೆಗೆ ಬರುತ್ತಿದ್ದ ಲಾರಿ ಮಧ್ಯೆ ಈ ಅಪಘಾತ ಸಂಭವಿಸಿದೆ.

### 75 ವರ್ಷಗಳ ಹಿಂದೆ

ಸೋಮವಾರ, 2-4-1951

- **ಕರ್ನಾಟಕ ಪ್ರಾಂತ್ಯದ ನಿರ್ಮಾಣಕ್ಕೆ ಮನವಿ**

ಧಾರವಾಡ, ಏ. 1– ಹಿರಿಯ ಮುತ್ಸದ್ದಿ ಎಸ್. ನಿಜಲಿಂಗಪ್ಪರವರ ನೇತೃತ್ವದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ನಿಯೋಗವೊಂದು ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರನ್ನು ಧಾರವಾಡದ ಕಲೆಕ್ಟರ್‌ರ ಬಂಗಲೆಯಲ್ಲಿ ಶುಕ್ರವಾರ ಭೇಟಿ ಮಾಡಿತು.

ಕರ್ನಾಟಕ ಪ್ರಾಂತ್ಯವನ್ನು ಶೀಘ್ರದಲ್ಲಿಯೆ ಆಗಮಾಡಿಸುವ ಬಗ್ಗೆ ಪ್ರಣಾಳಿಕೆ ಒಂದನ್ನು ನಿಯೋಗದವರು ಅರ್ಪಿಸಿದರೆಂದು ತಿಳಿದುಬಂದಿದೆ.

ನಿಯೋಗದ ಅಭಿಪ್ರಾಯಗಳನ್ನು ಅರಿತ ನಂತರ ರಾಷ್ಟ್ರಾಧ್ಯಕ್ಷರು, 'ಈ ತಕ್ಷಣದಲ್ಲಿ ಏನು ಮಾಡಬೇಕೆಂಬುದು ನಿಮ್ಮ ಇಚ್ಛೆ' ಎಂದು ಪ್ರಶ್ನಿಸಿದರು. ಈ ಕೂಡಲೇ ಗಡಿ ನಿರ್ಧಾರಕ ಸಮಿತಿ ರಚಿಸಬೇಕೆಂದೂ, ಕರ್ನಾಟಕ ಪ್ರಾಂತ್ಯ ನಿರ್ಮಾಣದತ್ತ ಮೈಸೂರು ನಾಯಕರು ಮನಹರಿಸುವಂತೆ ಮಾಡಬೇಕೆಂದೂ ನಿಯೋಗದವರು ತಿಳಿಸಿದುದಾಗಿ ಹೇಳಲಾಗಿದೆ.

**ಚುರುಮುರಿ**

### ಹೋರಾಟಗಾರ ಎಮ್ಮೆಲ್ಲೆ!



• ಗುರು ಪಿ.ಎಸ್.

**ಅಣ್ಣಂಗೆ** ಜೈ, ನಮ್ ಬಾಸ್‌ಗೆ ಜೈ... ಜೈಕಾರ ಹಾಕುತ್ತಾ ತಮ್ಮ ಕ್ಷೇತ್ರದ ಶಾಸಕರನ್ನ ಸ್ವಾಗತಿಸಿದರು ಪಕ್ಷದ ಕಾರ್ಯಕರ್ತರು.

'ಮೂರು ಅವಧಿಯಿಂದ ನಮ್ಮ ಕ್ಷೇತ್ರವನ್ನ ಪ್ರತಿನಿಧಿಸ್ತಿರೋ ನಮ್ಮಣ್ಣ, ನಮಗಾಗಿ ಮಾಡದ ಕೆಲಸವಿಲ್ಲ, ನಮಗಾಗಿ ಧ್ವನಿ ಎತ್ತದ ವಿಷಯವಿಲ್ಲ' ಎಮ್ಮೆಲ್ಲೆಯನ್ನು ಹೊಗಳತೊಡಗಿದರು ಹಿರಿಯ ಕಾರ್ಯಕರ್ತ.

'ನನ್ನದು ಮಾತಿಗಿಂತ ಕೃತಿ ಲೇಸು ಎನ್ನುವ ಮನೋಭಾವ. ನನಗೆ ಯಾರಾದರೂ ಹೊಗಳಿಬಿಟ್ಟರೆ ಮುಜುಗರವಾಗುತ್ತದೆ' ಮತ್ತಷ್ಟು ಪ್ರಶಂಸೆಯ ನಿರೀಕ್ಷೆಯಲ್ಲಿ ಮಾತನಾಡಿದರು ಎಮ್ಮೆಲ್ಲೆ ಸಾಹೇಬ್ರು.

'ಬೇರೆ ಶಾಸಕರೂ ಇರ್ತಾರೆ, ನಮ್ಮ ಕ್ಷೇತ್ರಕ್ಕೆ ಅನುದಾನ ಕೊಡಿ, ಮೆಡಿಕಲ್ ಕಾಲೇಜು ಮಂಜೂರು ಮಾಡಿ, ಹೈಟೆಕ್ ಆಸ್ಪತ್ರೆ ಮಾಡಿ ಅಂತೆಲ್ಲ ಯಾವ ಯಾವುದೋ ಕೆಲಸಕ್ಕೆ ಬಾರದ ವಿಷಯವನ್ನೆಲ್ಲ ಅಸೆಂಬ್ಲಿಯಲ್ಲಿ ಮಾತನಾಡ್ತಾರೆ. ಆದರೆ, ನಮ್ಮ ಎಮ್ಮೆಲ್ಲೆ ಸಾಹೇಬ್ರು ಮಾತ್ರ, ಐಪಿಎಲ್ ಕ್ರಿಕೆಟ್ ಟಿಕೆಟ್ ಕೊಡಿ ಅಂತ ಸದನದಲ್ಲಿ ಧ್ವನಿ ಎತ್ತುತ್ತಾರೆ...' ಸ್ಥಳೀಯ ಮುಖಂಡನ ವಾಗ್ಝರಿಗೆ ಜೋರು ಚಪ್ಪಾಳೆ ಬಿದ್ದವು.

'ಇರಿ, ಇರಿ ಇನ್ನೂ ಇದೆ. ಅವರು ಐಪಿಎಲ್ ಟಿಕೆಟ್‌ನ ಅವರಿಗೊಬ್ಬರಿಗಾಗಿ ಕೇಳಿದ್ರು ಅಂದ್ಕೊಂಡ್ರಾ... ಇಲ್ಲ, ಎಲ್ಲ ಶಾಸಕರಿಗೂ ಸೇರಿ ಕೇಳಿದರು. ನಮ್ಮ ಅಣ್ಣಂದು ತಾಯಿ ಗುಣ' ಹೊಗಳಿಕೆ ಮುಂದುವರಿಯಿತು.

'ಟಿಕೆಟ್ ಜೊತೆಗೆ ನಮ್ಮಣ್ಣ ಇನ್ನೂ ಒಂದು ಕೇಳಿದರು' ಅಭಿಮಾನಿ ಬಳಗ ಕೂಗಿತು.

'ಏನದು, ಮತ್ತೇನು ಕೇಳಿದರು?'

'ಟಿಕೆಟ್ ಜೊತೆಗೆ ಮರ್ಯಾದೆನೂ ಕೊಡಿ ಅಂತ ಕೇಳಿದ್ರಣ್ಣ'.

'ಟಿಕೆಟ್ ಏನೋ ಇರಲ್ಲ ಓಕೆ, ಮರ್ಯಾದೆನೂ ಇರಲ್ವ' ಹಿರಿಯ ಮುಖಂಡ ಬಾಯಿ ತಪ್ಪಿ ಕೇಳುತ್ತಿದ್ದಂತೆ, ಇವರೇನು ನನಗೆ ಹೊಗಳುತ್ತಿದ್ದಾರೋ ತೆಗಳುತ್ತಿದ್ದಾರೋ ಅಂತ ಯೋಚನೆ ಮಾಡತೊಡಗಿದರು ಎಮ್ಮೆಲ್ಲೆ.

'ಅಣ್ಣ, ಮುಂದೇನೂ ಟಿಕೆಟ್‌ಗಾಗಿ ಧ್ವನಿ ಎತ್ತಲಿದ್ದಾರೆ?'

'ಯಾವ ಟಿಕೆಟ್‌ಗಾಗಿ ಅಣ್ಣ?'

'ಮುಂದಿನ ಎಲೆಕ್ಷನ್‌ಗೆ ಹೆಂಡತಿ ಅಥವಾ ಮಗನಿಗೆ ಎಮ್ಮೆಲ್ಲೆ ಟಿಕೆಟ್ ಬೇಕು ಅಂತ ಧ್ವನಿ ಎತ್ತಲಿದ್ದಾರೆ...'

ಎಮ್ಮೆಲ್ಲೆ ಸಾಹೇಬರು ಜಾಗ ಖಾಲಿ ಮಾಡಿದರು!

**ಸಂಗತ**

## ಲಿಂಗತ್ವ ಅಸ್ಮಿತೆಗೆ 'ಮೂರನೆಯವರ' ಮೊಹರು!

ಲಿಂಗತ್ವ ಅಲ್ಪಸಂಖ್ಯಾತರ (ಹಕ್ಕುಗಳ ರಕ್ಷಣೆ–ತಿದ್ದುಪಡಿ) ಮಸೂದೆ–2026 ಸುಪ್ರೀಂ ಕೋರ್ಟ್‌ನಲ್ಲಿ ಹೋರಾಡಿ ಗಳಿಸಿದ ನ್ಯಾಯವನ್ನು ಮಣ್ಣುಪಾಲು ಮಾಡಿದೆ.

• ರಾಹುಲ್ ಬಜಾಜ್

**ಭಾರತದಲ್ಲಿ** ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ಬಗೆಗಿನ ಯಾವುದೇ ಕಾನೂನಾತ್ಮಕ ಚರ್ಚೆಯಲ್ಲಿ, 'ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ವರ್ಸಸ್ ಭಾರತ ಸರ್ಕಾರ' ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ (2014) ಪ್ರಸ್ತಾಪ ಸಹಜವಾಗಿ ಆಗುತ್ತದೆ. 'ಲಿಂಗತ್ವ ಪ್ರತಿಪಾದನೆಯು ವ್ಯಕ್ತಿಗತವಾದ ಹಾಗೂ ಘನತೆಯ ನಿರ್ಣಯವಾಗಿರುತ್ತದೆಯೇ ವಿನಾ ವೈದ್ಯಕೀಯ ಪ್ರಕ್ರಿಯೆ ಅಥವಾ ಸರ್ಕಾರದ ಸಮ್ಮತಿಯಿಂದ ಅದನ್ನು ನಿರ್ಧರಿಸಕೂಡದು. ಲಿಂಗತ್ವದ ಗುರುತು ವ್ಯಕ್ತಿಯೊಬ್ಬನ ವೈಯಕ್ತಿಕ ಇಚ್ಛೆ. ಅದನ್ನು ವೈದ್ಯಕೀಯ ಶಸ್ತ್ರಕ್ರಿಯೆ ಅಥವಾ ಮತ್ತಿತರ ವಿಧಾನಗಳಿಂದ ನಿರ್ಧರಿಸುವುದು ಸರಿಯಲ್ಲ' ಎಂದು ಕೋರ್ಟ್ ಆಗ ಸ್ಪಷ್ಟವಾಗಿ ತಿಳಿಸಿತ್ತು.

'ಹುಟ್ಟಿನಿಂದ ನಿರ್ಧರಿತವಾದ ಲಿಂಗತ್ವಕ್ಕೂ ವ್ಯಕ್ತಿಯು ಮುಂದೆ ತನ್ನ ಇಚ್ಛಾನುಸಾರ ನಿರ್ಣಯಿಸುವ ಲಿಂಗತ್ವಕ್ಕೂ ಸಾಮ್ಯ ಇರಬೇಕು ಎಂದೇನೂ ಇಲ್ಲ. ಇದೊಂದೇ ಕಾರಣಕ್ಕೆ ಯಾವುದೇ ನಾಗರಿಕನನ್ನು ತಾರತಮ್ಯದಿಂದ ನೋಡಕೂಡದು. ಸಂವಿಧಾನ ಈ ವಿಷಯದಲ್ಲಿ ತನ್ನತನವನ್ನು ರಕ್ಷಿಸುತ್ತದೆಯೇ ವಿನಾ ತನ್ನನ್ನು ತಾನು ರುಜುವಾತುಪಡಿಸಿಕೊಳ್ಳಬೇಕು ಎಂಬ ಸಂಗತಿಯನ್ನಲ್ಲ' ಎಂದೂ ಕೋರ್ಟ್ ಹೇಳಿತ್ತು.

ಸುಪ್ರೀಂ ಕೋರ್ಟ್ ಪ್ರತಿಪಾದಿಸಿದ ಸಂಗತಿಗಳಿಗೆ 'ಲಿಂಗತ್ವ ಅಲ್ಪಸಂಖ್ಯಾತರ (ಹಕ್ಕುಗಳ ರಕ್ಷಣೆ–ತಿದ್ದುಪಡಿ) ಮಸೂದೆ–2026' ವಿರುದ್ಧ ದಿಕ್ಕಿನಲ್ಲಿದೆ. ಅದು ವೈದ್ಯಕೀಯ ಮಂಡಳಿಯೊಂದರ ರಚನೆ ಆಗಬೇಕು; ವ್ಯಕ್ತಿಯ ಲಿಂಗತ್ವವನ್ನು ಕಾನೂನಾತ್ಮಕವಾಗಿ ನಿರ್ಧರಿಸುವ ಮೇಲುಸ್ತುವಾರಿ ಮಂಡಳಿಯಾಗಿ ಅದು ಕಾರ್ಯನಿರ್ವಹಣೆ ಮಾಡುತ್ತದೆ ಎಂದೂ ಹೇಳುತ್ತದೆ. ಇದು ಮೂಲಸ್ವರೂಪದಲ್ಲಿನ ಸ್ಥಿತ್ಯಂತರ.

ಪ್ರಸಕ್ತ ಮಸೂದೆಯು, ಯಾವುದು ಇಲ್ಲಿಯವರೆಗೆ ಹಕ್ಕಾಗಿತ್ತೋ ಅದನ್ನು ಅನುಮತಿ ಪಡೆಯುವ ಅನಿವಾರ್ಯಕ್ಕೆ ದೂಡುವ ಸ್ಥಿತ್ಯಂತರ. ಲಿಂಗತ್ವ ನಿರ್ಣಯ ವೈಯಕ್ತಿಕ ಎಂಬ ಶಾಸನಬದ್ಧ ಖಾತರಿಯನ್ನೇ ಕಿತ್ತುಹಾಕುವ ನಡೆ; ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ (ಎನ್‌ಎಎಲ್‌ಎಸ್‌ಎ–ನಾಲ್ಸಾ) ಕಾನೂನುಗಳ ಬಿಂಬವನ್ನೇ ಅಳಿಸಿಹಾಕಲಿದೆ. 2020ರ ಲಿಂಗತ್ವ ಅಲ್ಪಸಂಖ್ಯಾತರ ನಿಯಮಗಳ ಪ್ರಕಾರ, ನಿರ್ದಿಷ್ಟ ವ್ಯಕ್ತಿಯು ಗಂಡೋ, ಹೆಣ್ಣೋ ಎಂದು ನಿರ್ಧರಿಸಿ ಪ್ರಮಾಣಪತ್ರ ನೀಡಲು ಯಾವುದೇ ವೈದ್ಯಕೀಯ ಪ್ರಕ್ರಿಯೆಯ ಅಗತ್ಯ ಇರಲಿಲ್ಲ. ಈ ಮಸೂದೆಯು ವೈದ್ಯಕೀಯ ಮಂಡಳಿಯ ಶಿಫಾರಸನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ಪರಿಗಣಿಸುವುದನ್ನು ಕಡ್ಡಾಯಗೊಳಿಸಿದೆ.

ಅಂಗವಿಕಲರು ತಮಗೆ ದೈಹಿಕವಾಗಿ ಯಾವ ಸ್ವರೂಪದ ಸಮಸ್ಯೆ ಇದೆ ಎನ್ನುವುದನ್ನು ಪದೇ ಪದೇ ಖಾತರಿಪಡಿಸಬೇಕಾದ ವ್ಯವಸ್ಥೆ ನಮ್ಮಲ್ಲಿದೆ. ಅರ್ಹ ಅಂಗವಿಕಲರಿಗೆ ಪ್ರಮಾಣಪತ್ರವನ್ನು ಸುಲಭವಾಗಿ ಒದಗಿಸುವುದು ವ್ಯವಸ್ಥೆಯ ಕರ್ತವ್ಯ. ಆದರೆ, ವಾಸ್ತವದಲ್ಲಿ ವಿವಿಧ ವೈದ್ಯಕೀಯ ಮಂಡಳಿಗಳಿಂದ ಬದುಕಿನುದ್ದಕ್ಕೂ ಆಗಾಗ ಪ್ರಮಾಣಪತ್ರಗಳನ್ನು ಅಂಗವಿಕಲರು ಪಡೆಯಬೇಕಾಗುತ್ತದೆ. ಒಂದೊಂದು ಮಂಡಳಿಯ ಮಾನದಂಡವೂ ಭಿನ್ನವಾಗಿರುತ್ತದೆ. ಹೀಗಾಗಿ ಅವು ನಿರ್ಧರಿಸುವ ಅಂಗವೈಕಲ್ಯದ ಪ್ರಮಾಣದಲ್ಲೂ ವ್ಯತ್ಯಾಸ ಕಂಡುಬರುತ್ತದೆ. ಶಿಕ್ಷಣ, ಉದ್ಯೋಗದ ವಿವಿಧ ಹಂತಗಳಲ್ಲಿ ಅಂಗವಿಕಲರಿಗೆ ತಮ್ಮ ದೈಹಿಕ ಸಮಸ್ಯೆಗಳನ್ನು ರುಜುವಾತುಪಡಿಸಿಕೊಳ್ಳಬೇಕಾದ ಅನಿವಾರ್ಯ ಸೃಷ್ಟಿಯಾಗುತ್ತದೆ. ಕಾನೂನು ರಕ್ಷಣೆಯ ವಿಷಯದವರೆಗೂ ಈ ಜಟಿಲತೆ ವಿಸ್ತರಣೆಗೊಳ್ಳುವುದು ಚೋದ್ಯವಾದರೂ ಸತ್ಯ.

2019ರ ಲಿಂಗತ್ವ ಅಲ್ಪಸಂಖ್ಯಾತರ ಕಾಯ್ದೆಯು, ಸಮಾಜದ ಎಲ್ಲ ನಾಗರಿಕರಂತೆ ಟ್ರಾನ್ಸ್‌ಜೆಂಡರ್ ಸಮುದಾಯದವರಿಗೂ ಸಮಾನ ಹಕ್ಕುಗಳನ್ನು ನೀಡಿತ್ತು. ಶಿಕ್ಷಣದಲ್ಲಿ ಒಳಗೊಳ್ಳುವಿಕೆ, ಕಾರ್ಯಕ್ಷೇತ್ರದಲ್ಲಿ ತಾರತಮ್ಯ ಇಲ್ಲದಂತೆ ಮಾಡುವುದು ಹಾಗೂ ಸಾರ್ವಜನಿಕ ಸ್ಥಳಗಳ ಬಳಕೆಗೆ ಮುಕ್ತ ಅವಕಾಶವನ್ನು ಕಲ್ಪಿಸುವುದು... ಈ ಎಲ್ಲದಕ್ಕೂ ಆದ್ಯತೆ ನೀಡಿತ್ತು. ಈ ಮೂಲ ಹಕ್ಕುಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ ಎಂಬ ನೆಪವೊಡ್ಡಿ, ವೈದ್ಯಕೀಯ ತಪಾಸಣೆಯಿಂದ ಲಿಂಗತ್ವ ನಿರ್ಧರಿಸುವ ಅಗತ್ಯವಾದರೂ ಏನು?

2019ರ ಕಾಯ್ದೆಯ ಅನ್ವಯ ಪ್ರಮಾಣಪತ್ರ ನೀಡುವಾಗ ಅಫಿಡವಿಟ್ ಮಾಡಿಸಬೇಕಾದದ್ದು ಕಡ್ಡಾಯವಿದೆ. ಪ್ರಮಾಣಪತ್ರ ದೊರಕಿಸಿಕೊಡುವ ವ್ಯವಸ್ಥೆಯ ಮೇಲೆಯೇ ಸರ್ಕಾರಕ್ಕೆ ನಂಬಿಕೆ ಇಲ್ಲವೇ ಎಂಬ ಪ್ರಶ್ನೆ ಈಗ ಉದ್ಭವವಾಗುತ್ತದೆ. ವ್ಯಕ್ತಿಯೊಬ್ಬ ತನ್ನ ಲಿಂಗತ್ವವನ್ನು ತಾನೇ ಘನತೆಯಿಂದ ನಿರ್ಧರಿಸುವ ಹಕ್ಕನ್ನು ಯಾಕಾದರೂ ಮೊಟಕುಗೊಳಿಸಬೇಕು?

ಸ್ವಯಂ ಲಿಂಗತ್ವ ಗುರುತಿಸಿಕೊಳ್ಳುವ ವಿಷಯದಲ್ಲಿ ಸರ್ಕಾರಕ್ಕೆ ನಂಬಿಕೆ ಇಲ್ಲ ಎನ್ನುವುದಕ್ಕೆ ಕಾಯ್ದೆಗೆ ಮಾಡಲಾದ ತಿದ್ದುಪಡಿ ಕನ್ನಡಿ ಹಿಡಿಯುತ್ತದೆ. ಹಕ್ಕು ಆಧಾರಿತ ನಿಯಮಗಳ ಜಾಗದಲ್ಲಿ ಅದು ನಿಯಂತ್ರಣ ಇರುವ ನಿಯಮಗಳನ್ನು ಹೇರುತ್ತಿದೆ. ಗುರುತು ಪತ್ತೆಯು ವೈದ್ಯಕೀಯ ಅಥವಾ ಆಡಳಿತಾತ್ಮಕ ಅನುಮೋದನೆಯಿಂದ ಮಾತ್ರ ಸಾಧ್ಯ ಎನ್ನುವುದನ್ನು ಇದು ಸಾರುತ್ತದೆ.

'ನಾಲ್ಸಾ'ದ ಭರವಸೆಯು ಸರಳವಾಗಿದ್ದರೂ ಸಮಗ್ರವಾದುದಾಗಿತ್ತು. ಪ್ರತಿಯೊಬ್ಬರಿಗೂ ತಮ್ಮ ಗುರುತನ್ನು ವ್ಯಾಖ್ಯಾನಿಸಿಕೊಳ್ಳುವ ಹಕ್ಕು ಇದೆ ಎನ್ನುವುದೇ ಆ ಸರಳವಾದ ಭರವಸೆ. ಇದನ್ನು ಅಲ್ಲಗಳೆಯುವ ಯಾವುದೇ ಕಾನೂನು ಈಗಿನ ಸ್ಥಿತಿಯಿಂದ ಅರ್ಹರನ್ನು ಹಿಂದಕ್ಕೆ ಜಗ್ಗಿದಂತೆಯೇ ಸರಿ. ಪರಿವರ್ತಿತ ದೃಷ್ಟಿಕೋನವನ್ನು ಸಾಂವಿಧಾನಿಕ ಚೌಕಟ್ಟಿನಲ್ಲಿ ಇಟ್ಟುಕೊಳ್ಳುವುದು ಒಂದು ಮಾರ್ಗ. ಪ್ರಾಧಿಕಾರದ ನಿಗಾದ ಅಡಿಗೆ ತಂದು ಹಕ್ಕುಗಳಿಗೆ ಲಗಾಮು ಹಾಕುವುದು ಇನ್ನೊಂದು ಮಾರ್ಗ.

2026ರ ಮಸೂದೆಯು ಎರಡನೇ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದೆ. ಈ ಕೊರತೆಯನ್ನು ನೀಗಿಕೊಳ್ಳುವ ಕಾಲಾವಕಾಶ ಈಗಲೂ ಇದೆ. ಆ ವಿವೇಕ ಮಸೂದೆ ಮಾಡುವವರಿಗೆ ಮೂಡಬೇಕಷ್ಟೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೆಪಿಎಸ್‌ಸಿ ಸ್ವಚ್ಛವಾಗಲಿ

# ಸಹನೆಗೂ ಮಿತಿ ಇದೆ!

• ರವೀಂದ್ರ ಭಟ್ಟ

ಸರ್ಕಾರಿ ಹುದ್ದೆ ಕನಸು ಹೊತ್ತ ರಾಜ್ಯದ ಯುವ ಜನರ ಸಹನೆಗೂ ಒಂದು ಮಿತಿ ಇದೆ. ಮಿತಿ ಮೀರಿದರೆ ಏನೂ ಆಗಬಹುದು. ಕಾಯುವ ಕಾಲ ಈಗ ಮುಗಿದಿದೆ. ಇನ್ನೇನಿದ್ದರೂ ಕಾಯಕಲ್ಪದ ಕಾಲ. ಕರ್ನಾಟಕ ಲೋಕಸೇವಾ ಆಯೋಗಕ್ಕೆ ಮೂಗುದಾರ ಹಾಕಿ ಸರಿದಾರಿಗೆ ತರಲು ಇದು ಸಕಾಲ. ಈಗಲೂ ಮಾಡದಿದ್ದರೆ ಪರಿಣಾಮ ಊಹಿಸಲಾಗದು. ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಎಲ್ಲವೂ ಸರಿ ಇಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ. ಎಲ್ಲಿ ಏನು ಅವಘಡವಾಗುತ್ತಿದೆ ಎನ್ನುವುದೂ ತಿಳಿದಿದೆ. ಮುಖ್ಯಪರೀಕ್ಷೆಯಿಂದ ಹಿಡಿದು ಸಂದರ್ಶನದವರೆಗೆ ಏನೇನು ನಡೆಯುತ್ತದೆ ಎನ್ನುವುದೂ ಗೊತ್ತಿರುವ ವಿಚಾರ. ಭ್ರಷ್ಟಾಚಾರ ಹೇಗೆ ನಡೆಯುತ್ತದೆ ಎನ್ನುವುದೂ ಗುಟ್ಟಿನ ವಿಚಾರವೇನಲ್ಲ. ಮಧ್ಯವರ್ತಿಗಳು ಹೇಗೆಲ್ಲ ವ್ಯವಹರಿಸುತ್ತಾರೆ ಎನ್ನುವುದೂ ತಿಳಿಯದ್ದೇನಲ್ಲ. ಕೆಪಿಎಸ್‌ಸಿ ಮ್ಯಾರೇಜ್ ಬ್ಯೂರೊ ಆಗಿರುವುದಾಗಲಿ, ಅಂಕಗಳನ್ನು ತಿದ್ದುವುದಾಗಲಿ, ಬೇಕಾದವರಿಗೆ ಹೆಚ್ಚಿನ ಅಂಕ ಕೊಟ್ಟು ಬೇಡವಾದವರಿಗೆ ಕಡಿಮೆ ಅಂಕ ನೀಡುವ ಸಂದರ್ಶನದ ಗಿಲೀಟುಗಳಾಗಲಿ ಎಲ್ಲವೂ ಈಗ ಬಹಿರಂಗ. ಕೆಪಿಎಸ್‌ಸಿ ಹಗರಣಗಳ ಬಗ್ಗೆ ಈಗಾಗಲೇ ಹಲವಾರು ಬಾರಿ ನಡೆದ ಸಿಐಡಿ ತನಿಖೆಗಳು ಎಲ್ಲವನ್ನೂ ಬಹಿರಂಗ ಮಾಡಿವೆ. ಕೆಪಿಎಸ್‌ಸಿಗೆ ಸದಸ್ಯರನ್ನು ಹೇಗೆ ನೇಮಕ ಮಾಡಲಾಗುತ್ತದೆ, ಆಯೋಗದ ಸದಸ್ಯರಾಗಲು ಬೇಕಾದ 'ಅರ್ಹತೆ'ಗಳು ಏನೇನು ಎನ್ನುವುದೂ ರಹಸ್ಯವೇನಲ್ಲ. ಅಂಗೈ ಹುಣ್ಣಿಗೆ ಕನ್ನಡಿ ಏಕೆ ಎನ್ನುವಂತೆ ಕೆಪಿಎಸ್‌ಸಿ ಎನ್ನುವುದು ಈಗ ನಿಜವಾದ ಅರ್ಥದಲ್ಲಿ ಅಂಗೈ ಹುಣ್ಣಾಗಿದೆ. ಎಲ್ಲವೂ ಅಲ್ಲಿ ಕಾಣುತ್ತದೆ. ವಿಧಾನ ಸೌಧದ ಪಕ್ಕದಲ್ಲಿಯೇ ಇರುವ 'ಉದ್ಯೋಗ ಸೌಧ' ಸರ್ಕಾರಕ್ಕೆ ಮಗ್ಗಲು ಮುಳ್ಳಿನಂತೆಯೇ ಕಾಡುತ್ತಿದೆ. ಕೆಪಿಎಸ್‌ಸಿ ಸುಧಾರಿಸಲು ಕೈಗೊಂಡ ಕ್ರಮಗಳೆಲ್ಲ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತೆ ಆಗಿದೆ.

2011ರ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಆಯ್ಕೆ ಪಟ್ಟಿಗೆ ಆಕ್ಷೇಪಗಳು ಬಂದಾಗ ಆಗಿನ ಕಾಂಗ್ರೆಸ್ ಸರ್ಕಾರ ಪಿ.ಸಿ.ಹೋಟಾ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಹೋಟಾ ಸಮಿತಿ ಹಲವಾರು ಶಿಫಾರಸುಗಳನ್ನೂ ಮಾಡಿತ್ತು. ಕೆಪಿಎಸ್‌ಸಿ ಕೊಳೆಯನ್ನು ತೆಗೆಯಲು ಬೇಕಾದ ಶಿಫಾರಸುಗಳನ್ನು ಬಿಟ್ಟು ನಾಮಕಾವಸ್ತೆ ಕೆಲವು ಶಿಫಾರಸುಗಳನ್ನು ಮಾತ್ರ ಅಂಗೀಕರಿಸಲಾಗಿತ್ತು. ಅಂದರೆ ಕೆಪಿಎಸ್‌ಸಿ ಸುಧಾರಿಸುವುದು ಸರ್ಕಾರಕ್ಕೂ ಬೇಕಾಗಿಲ್ಲ. ಯಾವ ರಾಜಕೀಯ ಪಕ್ಷಕ್ಕೂ ಕೆಪಿಎಸ್‌ಸಿ ಸುಧಾರಣೆ ಬೇಕಿಲ್ಲ. ಈಗ ಕಾಂಗ್ರೆಸ್ ಸರ್ಕಾರ ಮತ್ತೆ ಸದನ ಸಮಿತಿಯನ್ನು ರಚಿಸುವುದಾಗಿ ಪ್ರಕಟಿಸಿದೆ. ಇದು ಕಳ್ಳನ ಕೈಗೇ ಕೀಲಿ ಕೈ ಕೊಟ್ಟ ಹಾಗಿದೆ. ಸಮಿತಿಯ ನಂತರ ಸಮಿತಿ ರಚಿಸುವುದಾಗಲಿ, ಶಿಫಾರಸುಗಳನ್ನು ಪಡೆಯುವುದಾಗಲಿ, ನಾಮಕಾವಸ್ತೆಗೆ ಶಿಫಾರಸುಗಳನ್ನು ಸ್ವೀಕರಿಸುವುದಾಗಲಿ ಕೇವಲ ಕಣ್ಣೊರೆಸುವ ತಂತ್ರವಾಗುತ್ತದೆಯೇ ವಿನಾ ಸಮಸ್ಯೆಗೆ ಪರಿಹಾರವನ್ನು ಒದಗಿಸುವುದಿಲ್ಲ.

ದಶಕಗಳಿಂದಲೂ ಸರ್ಕಾರ ಇದನ್ನೇ ಮಾಡಿಕೊಂಡು ಬಂದಿದೆ. ಕೋಲೂ ಮುರಿಯುತ್ತಿಲ್ಲ, ಹಾವೂ ಸಾಯುತ್ತಿಲ್ಲ. ಈಗಲಾದರೂ ದೊಣ್ಣೆಯನ್ನು ಸರಿಯಾಗಿಯೇ ಬೀಸಬೇಕು. ಕಳೆಯನ್ನು ಬುಡಸಮೇತ ಕಿತ್ತು ಹಾಕಬೇಕು.

ಲಕ್ಷಾಂತರ ಮಕ್ಕಳು ಹಾಜರಾಗುವ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳು, ಸಿಇಟಿಯನ್ನು ನಾವು ಸೂಕ್ತವಾಗಿಯೇ ನಡೆಸುತ್ತೇವೆ. ಅವುಗಳ ಮೌಲ್ಯಮಾಪನಗಳು ನಿಗದಿತ ಸಮಯದಲ್ಲಿಯೇ ನಡೆಯುತ್ತವೆ. ಪರೀಕ್ಷೆ ಮುಗಿದ ಒಂದು ಗಂಟೆಯಲ್ಲಿ ಅಥವಾ ಒಂದು ದಿನದಲ್ಲಿ ಫಲಿತಾಂಶ ಪ್ರಕಟಿಸುವ ತಂತ್ರಜ್ಞಾನ ನಮ್ಮಲ್ಲಿ ಇದೆ. ನೇಮಕಾತಿ ಪರೀಕ್ಷೆಗಳನ್ನೂ ಯಶಸ್ವಿಯಾಗಿ ನಡೆಸಿದ ಸರ್ಕಾರಿ ಸಂಸ್ಥೆಗಳೂ ಇವೆ. ಆದರೆ ಇದ್ಯಾವುದನ್ನೂ ಕೆಎಎಸ್ ಪರೀಕ್ಷೆಯಲ್ಲಿ ಬಳಸುತ್ತಿಲ್ಲ. ನೇಮಕಾತಿ ಪರೀಕ್ಷೆಯನ್ನು ಸುಸೂತ್ರವಾಗಿ, ಪಾರದರ್ಶಕವಾಗಿ, ಪ್ರಾಮಾಣಿಕವಾಗಿ ನಡೆಸುವ ತಂತ್ರಜ್ಞಾನ ನಮ್ಮಲ್ಲಿ ಇಲ್ಲ ಎಂದು ಹೇಳಿದರೆ ನಗು ಬರುತ್ತದೆ. ತಂತ್ರಜ್ಞಾನ ಇದೆ. ಮಾಡುವ ಮನಸ್ಸು ಇಲ್ಲ. ಇಚ್ಛಾಶಕ್ತಿ ಇಲ್ಲ ಅಷ್ಟೆ. ಈಗಲಾದರೂ ಸರ್ಕಾರ ಜಾಣ ನಿದ್ದೆಯಿಂದ ಏಳಲಿ. ಕೆಪಿಎಸ್‌ಸಿಯಲ್ಲಿನ ಕಸ ಗುಡಿಸಲಿ. ಆಮೂಲಾಗ್ರ ಬದಲಾವಣೆಯಾಗಲಿ. ಕೆಪಿಎಸ್‌ಸಿಯನ್ನು ಹೊಸದಾಗಿ ಕಟ್ಟಲಿ. ಇಲ್ಲವಾದರೆ ಕನಸಿನ ಕಣ್ಣಿನ ಯುವಕರು 'ಕಟ್ಟುತ್ತೇವ ನಾವು ಕಟ್ಟುತ್ತೇವ' ಎಂದು ಮುಂದೆ ಬಂದಾರು.

ಕೆಪಿಎಸ್‌ಸಿಯನ್ನು ಸ್ವಚ್ಛ ಮಾಡಲು ಎಲ್ಲ ಕಿಟಕಿಗಳಿಂದಲೂ ಬೆಳಕು ಹರಿದು ಬರಬೇಕು. ಅಭ್ಯರ್ಥಿಗಳ ಅಳಲನ್ನೂ ಆಲಿಸಬೇಕು. ತಜ್ಞರ ಸಲಹೆಗಳಿಗೂ ಮಾನ್ಯತೆ ಸಿಗಬೇಕು. ಕೆಪಿಎಸ್‌ಸಿಗೆ ಅಂಟಿದ ಕಳಂಕ ತೊಳೆಯಲು ಎಲ್ಲ ಕೈಗಳೂ ಒಂದಾಗಬೇಕು. ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಪಾಸಾದವರು ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಮೂರು ದಶಕಗಳಿಗೂ ಹೆಚ್ಚು ಸಕ್ರಿಯರಾಗಿರುತ್ತಾರೆ. ಆಡಳಿತ ಶುದ್ಧವಾಗಿರಬೇಕು ಎಂದರೆ ಅವರ ಆಯ್ಕೆಯೂ ಶುದ್ಧವಾಗಿರಬೇಕು. ❖

# ಕೆಪಿಎಸ್‌ಸಿ: ಅಡಿಗಡಿಗೂ ದೋಷಿ

• ರಾಜೇಶ್ ರೈ ಚಟ್ಲ

ಎಚ್ಚರಿಕೆ...! ಆಯೋಗದ ವಿವಿಧ ನೇಮಕಾತಿಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮಧ್ಯವರ್ತಿಗಳು, ಏಜೆಂಟ್‌ಗಳು, ಆಯೋಗದ ಅಧಿಕಾರಿ, ಸಿಬ್ಬಂದಿ ಅಥವಾ ಅನ್ಯ ವ್ಯಕ್ತಿಗಳ ಮುಖಾಂತರ ವಾಮಮಾರ್ಗದಲ್ಲಿ ಹಣ ನೀಡಿ ಆಯ್ಕೆಯಾಗಲು ಪ್ರಯತ್ನಿಸಿದರೆ ಅಂತಹ ಅಭ್ಯರ್ಥಿಗಳು, ಆಯೋಗದ ಅಧಿಕಾರಿ, ಸಿಬ್ಬಂದಿ, ಅನ್ಯ ವ್ಯಕ್ತಿಗಳ ವಿರುದ್ಧ ಕಠಿಣವಾದ ಕಾನೂನು ಕ್ರಮ ಕೈಗೊಳ್ಳಲಾಗುವುದು.

–ಇದು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ವೆಬ್‌ಸೈಟ್‌ನಲ್ಲಿರುವ ಘೋಷವಾಕ್ಯ; ಪಾರದರ್ಶಕ ನೇಮಕಾತಿ ಪ್ರಕ್ರಿಯೆ ಒಂದೇ ಪರಮ ಧ್ಯೇಯ– ಗುರಿ ಎಂದು ತನ್ನ ಸುತ್ತ ಆಯೋಗವೇ ರಚಿಸಿಕೊಂಡ ಬೇಲಿ. ವಿಪರ್ಯಾಸವೆಂದರೆ, ಈ ಬೇಲಿಗೆ 'ಆಧಾರ'ವಾಗಿರುವ ಆಯೋಗದ ಸದಸ್ಯರೇ ಮಧ್ಯವರ್ತಿಗಳು, ಆಪ್ತ ಸಿಬ್ಬಂದಿ, ಅನ್ಯ ವ್ಯಕ್ತಿಗಳ ಮೂಲಕ ಅಭ್ಯರ್ಥಿಗಳನ್ನು ಸಂಪರ್ಕಿಸಿ, ಹಣ ಕೊಟ್ಟವರನ್ನೇ ಆಯ್ಕೆ ಮಾಡಿಸಲು ಪ್ರಯತ್ನಿಸಿದರೆ ಏನೆಂದು ಹೇಳಬೇಕು? ಇದು ಕೆಪಿಎಸ್‌ಸಿಯ ದುಃಸ್ಥಿತಿ.

ಮೂರು ದಶಕಗಳಿಂದೀಚೆಗೆ ಕೆಪಿಎಸ್‌ಸಿ ನಡೆಸಿದ ಪ್ರತಿಯೊಂದು ನೇಮಕಾತಿಯೂ ಒಂದಿಲ್ಲೊಂದು ಕಾರಣಕ್ಕೆ ವಿವಾದಕ್ಕೆ ಸಿಲುಕಿದೆ. ಅದು ಗೆಜೆಟೆಡ್ ಪ್ರೊಬೇಷನರಿ ಹುದ್ದೆಯೇ ಇರಲಿ, ಎಸ್‌ಡಿಎ ಹುದ್ದೆಯೇ ಇರಲಿ. ಅಕ್ರಮ, ಭ್ರಷ್ಟಾಚಾರ, ಸ್ವಜನ ಪಕ್ಷಪಾತದ ವಾಸನೆ ಬಡಿಯದ ನೇಮಕಾತಿಗಳೇ ಇಲ್ಲ. ಕರ್ನಾಟಕ ಆಡಳಿತ ನ್ಯಾಯಮಂಡಳಿ, ಹೈಕೋರ್ಟ್, ಸುಪ್ರೀಂ ಕೋರ್ಟ್ ಮೆಟ್ಟಿಲೇರದ ನೇಮಕಾತಿಯೇ ವಿರಳ. ಹೈಕೋರ್ಟ್‌ನಿಂದ ಹಲವು ಬಾರಿ ಛೀಮಾರಿ ಹಾಕಿಸಿಕೊಂಡರೂ ತನ್ನ ಕಾರ್ಯವೈಖರಿಯನ್ನು ಕೆಪಿಎಸ್‌ಸಿ ತಿದ್ದಿಕೊಳ್ಳಲಿಲ್ಲ. ಎಲ್ಲವನ್ನೂ ನ್ಯಾಯಾಲಯವೇ ಬಗೆಹರಿಸುವುದಾದರೆ ಕೆಪಿಎಸ್‌ಸಿಯನ್ನು ಮುಚ್ಚುವುದು ಉತ್ತಮ ಎಂದೂ ಕೋರ್ಟ್ ಛೇಡಿಸಿತ್ತು. ಅಷ್ಟರಮಟ್ಟಿಗೆ, ಈ ಸಾಂವಿಧಾನಿಕ, ಸ್ವಾಯತ್ತ ಸಂಸ್ಥೆಯು ಆರೋಪ– ಅಪವಾದದ ಕಳಂಕ ಮೆತ್ತಿಕೊಂಡಿದೆ.

ಹಾಗೆ ನೋಡಿದರೆ, 2–3 ದಶಕಗಳಲ್ಲಿ ಭ್ರಷ್ಟ ಮಾರ್ಗಗಳಿಂದ ಕೆಪಿಎಸ್‌ಸಿ ಮೂಲಕ ಆಯ್ಕೆಯಾಗಿ ಬಂದು ಇಂದು ಉನ್ನತ ಸ್ಥಾನಗಳಲ್ಲಿರುವ ಒಂದು ದೊಡ್ಡ ಅಧಿಕಾರಿ ಗಡಣವೇ ಇದೆ. ಇವರ ಮಧ್ಯೆ, ಯಾವುದೇ ಅಕ್ರಮ ಎಸಗದೆ ಪ್ರಾಮಾಣಿಕ ಮಾರ್ಗದಲ್ಲಿ ಸರ್ಕಾರಿ ಹುದ್ದೆ ಪಡೆದವರೂ ಇದ್ದಾರೆ. ತಾಳಿ ಭಾಗ್ಯ, ಲಂಚಯೋಗ್ಯ, ಸ್ವಜನಪಕ್ಷಪಾತ, ಶಿಫಾರಸುಗಳ ಮೂಲಕ ಹುದ್ದೆ ಗಿಟ್ಟಿಸಿಕೊಂಡವರು ಪ್ರಾಮಾಣಿಕರಾಗಿರಲು ಹೇಗೆ ಸಾಧ್ಯ?

1998, 1999, 2004ನೇ ಸಾಲುಗಳಲ್ಲಿನ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿಗಳಿಗೆ ಸಂಬಂಧಿಸಿದಂತೆ ಭಾರಿ ಭ್ರಷ್ಟಾಚಾರ ನಡೆದಿರುವುದು ಹೈಕೋರ್ಟ್ ನೇಮಿಸಿದ್ದ ಸತ್ಯಶೋಧನಾ ಸಮಿತಿಯ ವರದಿ ಮತ್ತು ಸಿಐಡಿ ತನಿಖೆಯಿಂದ ಬಹಿರಂಗವಾಗಿತ್ತು. ಅನ್ಯಾಯಕ್ಕೆ ಒಳಗಾದ ಅಭ್ಯರ್ಥಿಗಳು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ ನಂತರದ ಬೆಳವಣಿಗೆಯಲ್ಲಿ ಈ ಸಾಲುಗಳ ಒಟ್ಟು 729 ಅಧಿಕಾರಿಗಳಲ್ಲಿ 484 ಮಂದಿ ಅಕ್ರಮ, ಅಡ್ಡದಾರಿಯ ಮೂಲಕ ಆಯ್ಕೆಯಾಗಿದ್ದಾರೆ ಎನ್ನುವುದು ಬಹಿರಂಗವಾಗಿತ್ತು.

1998ರಲ್ಲಿ 383 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯು ಹಗರಣದ ಕಾರಣಕ್ಕೆ ಆಯೋಗದ ಇತಿಹಾಸದಲ್ಲಿಯೇ ಒಂದು ಕರಾಳ ಅಧ್ಯಾಯ. 'ತಾಳಿಭಾಗ್ಯ' ಎನ್ನುವುದು ಈ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳನ್ನು ಸೂಚಿಸಲು ಬಳಸುವ ಒಂದು ವ್ಯಂಗ್ಯಾತ್ಮಕ ಪದ. ಅಂದು ಕೆಪಿಎಸ್‌ಸಿ ಅಧ್ಯಕ್ಷರಾಗಿದ್ದ ಎಚ್.ಎನ್. ಕೃಷ್ಣ ಅವರನ್ನೇ ಭ್ರಷ್ಟಾಚಾರದ ಆರೋಪದ ಮೇಲೆ ಸಿಸಿಬಿ ಪೊಲೀಸರು ಬಂಧಿಸಿದ್ದರು. ಅರ್ಹ ಅಭ್ಯರ್ಥಿಗಳಿಗೆ ಕಡಿಮೆ ಅಂಕ ನೀಡಿ, ತಮಗೆ ಬೇಕಾದವರಿಗೆ ಸಂದರ್ಶನದಲ್ಲಿ ಅತಿ ಹೆಚ್ಚು ಅಂಕ ನೀಡಿರುವುದು, ನೇಮಕಾತಿ ಪ್ರಕ್ರಿಯೆಯಲ್ಲಿ ನಕಲಿ ದಾಖಲೆಗಳ ಸೃಷ್ಟಿ ಮಾಡಿ ಅಕ್ರಮ ಎಸಗಿರುವುದು ತನಿಖೆಯಲ್ಲಿ ಗೊತ್ತಾಗಿತ್ತು. ಹುದ್ದೆಗಳಿಗಾಗಿ ನಡೆದ ನೇಮಕಾತಿಯಲ್ಲಿ ವ್ಯಾಪಕ ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ಅಂಕಗಳ ತಿರುಚುವಿಕೆ ನಡೆದಿದೆ ಎಂಬ ಆರೋಪದ ಕಾರಣಕ್ಕೆ ಸಿಐಡಿ ತನಿಖೆ ಮತ್ತು ನ್ಯಾಯಾಲಯದ ಆದೇಶಗಳ ನಂತರ ಆಯ್ಕೆ ಪಟ್ಟಿಯನ್ನು ಹಲವು ಬಾರಿ ಪರಿಷ್ಕರಿಸಲಾಗಿತ್ತು. ಅದರಿಂದಾಗಿ ಅಧಿಕಾರಿಗಳ ಹುದ್ದೆಗಳಲ್ಲಿ ಸ್ಥಾನಪಲ್ಲಟವಾಗಿತ್ತು. ಅನೇಕ ವರ್ಷ ಈ ನೇಮಕಾತಿ ವಿವಾದವು ನ್ಯಾಯಾಂಗ ನಿಂದನೆಯ ಅಡಕತ್ತರಿಯಲ್ಲಿ ಸಿಲುಕಿತ್ತು. ಕೃಷ್ಣ ಅವಧಿಯಲ್ಲೇ ನಡೆದ 1999 ಹಾಗೂ 2004ನೇ ಸಾಲಿನಲ್ಲೂ ಇದೇ ರೀತಿಯ ಅಕ್ರಮಗಳು ನಡೆದಿವೆ ಎಂದು ಅಭ್ಯರ್ಥಿಗಳು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

2011ರ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಹಗರಣ ಮತ್ತೊಂದು ಥರದ್ದು. ಹುದ್ದೆಗಳನ್ನು ಬಿಕರಿಗಿಟ್ಟು ಅಕ್ರಮ ನಡೆಸಲಾಗಿದೆ ಎಂದು ಆರೋಪಿಸಿ ಅಭ್ಯರ್ಥಿಯೊಬ್ಬರು ಆರಂಭಿಸಿದ್ದ ಹೋರಾಟ, ಆಯೋಗದ ಒಳಗಿನ ಹುಳುಕುಗಳನ್ನು ಬೀದಿಗೆ ತಂದಿತ್ತು. ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ದೂರಿನ ಮೇಲೆ ಸಿಐಡಿ ಸಮಗ್ರ ತನಿಖೆ ನಡೆಸಿ ಸರ್ಕಾರಕ್ಕೆ 10,500ಕ್ಕೂ ಹೆಚ್ಚು ಪುಟಗಳ ವರದಿ ಸಲ್ಲಿಸಿತ್ತು. ಎಲ್ಲ ಆಯಾಮಗಳಲ್ಲಿ ತನಿಖೆ ನಡೆಸಿದ್ದ ಪೊಲೀಸರ ತಂಡ ಈ ಸಾಲಿನ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದ ಭಾರಿ ಅವ್ಯವಹಾರಗಳಲ್ಲಿ ಅಂದಿನ ಕೆಪಿಎಸ್‌ಸಿ ಅಧ್ಯಕ್ಷ ಗೋನಾಳ ಭೀಮಪ್ಪ ಮತ್ತು ಒಂಬತ್ತು ಸದಸ್ಯರು ಭಾಗಿಯಾಗಿದ್ದಾರೆಂಬ ಬೆಚ್ಚಿ ಬೀಳಿಸುವ ಅಂಶಗಳನ್ನು ವರದಿಯಲ್ಲಿ ಉಲ್ಲೇಖಿಸಿತ್ತು.

ಕಳ್ಳ ಮಾರ್ಗಗಳ ಮೂಲಕ ಹುದ್ದೆ ಗಿಟ್ಟಿಸಲು ಯತ್ನಿಸಿದ್ದ 46 ಕಳಂಕಿತರನ್ನೂ ಪತ್ತೆ ಮಾಡಿತ್ತು. ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ 1988ರ ಕಲಂ 19ರಡಿ ಪ್ರಾಸಿಕ್ಯೂಷನ್ ನಡೆಸಲು ಸಂವಿಧಾನದ 317 (1)ರ ಪ್ರಕಾರ ಅಗತ್ಯ ಕ್ರಮಕ್ಕಾಗಿ ರಾಜ್ಯಪಾಲರ ಅನುಮೋದನೆಯೊಂದಿಗೆ ರಾಷ್ಟ್ರಪತಿಯ ಮಂಜೂರಾತಿ ಪಡೆಯಲು ಸಿಐಡಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿತ್ತು. ಆದರೆ, ಆರೋಪಿತರು ನಿವೃತ್ತರಾಗಿದ್ದಾರೆ ಎಂಬ ಕಾರಣವನ್ನೇ ಮುಂದಿಟ್ಟುಕೊಂಡು ನ್ಯಾಯಾಲಯದಲ್ಲಿ ವಿಚಾರಣಾ ಪ್ರಕ್ರಿಯೆ ಆರಂಭಿಸಲು ಅನುಮತಿ ಕೋರುವ (ಪ್ರಾಸಿಕ್ಯೂಷನ್) ಕಡತವನ್ನು ರಾಷ್ಟ್ರಪತಿಗೆ ಕಳುಹಿಸುವ ಪ್ರಸ್ತಾವವನ್ನು ಸಚಿವ ಸಂಪುಟ ಸಭೆ ತಿರಸ್ಕರಿಸಿತ್ತು. ಅಷ್ಟೇ ಅಲ್ಲ, ಸಿದ್ದರಾಮಯ್ಯ ನೇತೃತ್ವದ ಹಿಂದಿನ ಅವಧಿಯ ಕಾಂಗ್ರೆಸ್ ಸರ್ಕಾರವೇ ಅಕ್ರಮ ನಡೆದಿದೆ ಎಂಬ ಕಾರಣಕ್ಕೆ ಅಧಿಸೂಚನೆ ರದ್ದುಪಡಿಸಿತ್ತು. ಅದೇ ಅಧಿಸೂಚನೆಯಡಿಯೇ ಆಯ್ಕೆಯಾಗಿದ್ದ 'ಕಳಂಕಿತ'ರೆಂದು ಗುರುತಿಸಿಕೊಂಡವರೂ ಸೇರಿ ಎಲ್ಲ ಅಭ್ಯರ್ಥಿಗಳಿಗೆ ನಂತರ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಕಣ್ಣುಮುಚ್ಚಿಕೊಂಡು 'ವಿಶೇಷ ಪ್ರಕರಣ'ವೆಂದು ಪರಿಗಣಿಸಿ ಹುದ್ದೆ ಭಾಗ್ಯ ಕರುಣಿಸಿರುವುದು ವ್ಯವಸ್ಥೆಯ ದೌರ್ಭಾಗ್ಯ.

2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ 428 ಹುದ್ದೆಗಳ ನೇಮಕಾತಿಗೆ ನಡೆದ ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನದ ಅಂಕಗಳನ್ನು ತಿರುಚುವ ಮೂಲಕ ಅಭ್ಯರ್ಥಿಗಳ ಆಯ್ಕೆಯಲ್ಲಿ ವ್ಯಾಪಕ ಅಕ್ರಮ ನಡೆಸಲಾಗಿದೆ ಎಂಬ ಗಂಭೀರ ಆರೋಪ ಎದುರಾಗಿತ್ತು. ಈ ಸಾಲಿನಲ್ಲಿ ಸಂದರ್ಶನಕ್ಕೆ ಆಯ್ಕೆಯಾಗಿದ್ದ 52 ವಂಚಿತ ಅಭ್ಯರ್ಥಿಗಳು, ಅಂಕ ತಿರುಚುವಿಕೆ ಮತ್ತು ಒಬ್ಬರ ಅಂಕಗಳನ್ನು ಮತ್ತೊಬ್ಬರ ಅಂಕಗಳಿಗೆ ಅದಲು ಬದಲು ಮಾಡಲಾಗಿದೆ ಎಂದು ಆರೋಪಿಸಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ವಿಚಾರಣೆಯ ಸಂದರ್ಭದಲ್ಲಿ ಹೈಕೋರ್ಟ್ 2015ನೇ ಸಾಲಿಗೆ ಸಂಬಂಧಿಸಿದಂತೆ ದತ್ತಾಂಶ ಮತ್ತು ಉತ್ತರ ಪತ್ರಿಕೆಗಳನ್ನು ಸಂರಕ್ಷಿಸಿಡಬೇಕೆಂದು ಆದೇಶಿಸಿದ್ದರೂ ಅಂಕಗಳನ್ನು ನಮೂದಿಸಲಾಗಿದ್ದ ಖಾಸಗಿ ಕಂಪನಿಯ ದತ್ತಾಂಶಗಳನ್ನು ಆಗಸ್ಟ್ 2020ರಲ್ಲಿ (ಫಲಿತಾಂಶ ಪ್ರಕಟಿಸಿದ ಎಂಟು ತಿಂಗಳ ನಂತರ) ಎರಡು ಬಾರಿ ತಿರುಚಲು ಯತ್ನಿಸಿದ್ದು ಕಂಡುಬಂದಿತ್ತು. 2014ರ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯಲ್ಲಿ ಮುಖ್ಯಪರೀಕ್ಷೆಯ ಅಂಕಗಳನ್ನು ಮೂರೇ ದಿನಗಳಲ್ಲಿ ನೀಡಿದ್ದ ಕೆಪಿಎಸ್‌ಸಿ, 2015ರ ಮುಖ್ಯಪರೀಕ್ಷೆಯ ಅಂಕಗಳನ್ನು ಅಭ್ಯರ್ಥಿಗಳಿಗೆ ನೀಡಲು 67 ದಿನಗಳನ್ನು ತೆಗೆದುಕೊಂಡಿದ್ದು ಕೂಡಾ ಅನುಮಾನಗಳಿಗೆ ಕಾರಣವಾಗಿತ್ತು. ಅಷ್ಟೇ ಅಲ್ಲದೆ, ಮಾಹಿತಿ ಹಕ್ಕು ಕಾಯ್ದೆಯಡಿ ಪಡೆಯಲಾದ ಹಲವು ಅಭ್ಯರ್ಥಿಗಳ ಉತ್ತರ ಪತ್ರಿಕೆಗಳಲ್ಲಿ ಸರಿಯಾದ ಉತ್ತರ ಬರೆದಿರುವ ಅನೇಕ ಉತ್ತರಗಳಿಗೆ 'ಶೂನ್ಯ' ಅಂಕ ನಮೂದಿಸಿರುವುದು, ಉತ್ತರವನ್ನೇ ಬರೆಯದ ಪ್ರಶ್ನೆಗಳಿಗೂ ಅಂಕ ನೀಡಿರುವ ಅಂಶ ಬಹಿರಂಗವಾಗಿತ್ತು. ಈ ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿದೆ.

**ಇತರ ನೇಮಕಾತಿಗಳಲ್ಲೂ ಅನುಮಾನದ ಹುತ್ತ:** ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆಯ ಹಿಂದಿನ ಕರಾಮತ್ತುಗಳು ಹೀಗಿದ್ದರೆ, ಇತ್ತೀಚೆಗೆ ನಡೆದ ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ವಾಣಿಜ್ಯ ತೆರಿಗೆ ಪರಿವೀಕ್ಷಕ (ಸಿಟಿಐ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ವಿವಿಧ ಇಲಾಖೆಗಳ ಗ್ರೂಪ್ 'ಬಿ' ಹುದ್ದೆಗಳ ನೇಮಕಾತಿಯಲ್ಲೂ ಭಾರಿ ಅಕ್ರಮ ನಡೆದಿದೆ ಎನ್ನುವುದು ಅಭ್ಯರ್ಥಿಗಳ ಆರೋಪ.

'ಇದೇ ರೀತಿ ಅಕ್ರಮವೇ ಮುಂದುವರಿದರೆ, ಊಟ ನಿದ್ದೆ ಬಿಟ್ಟು ಹಲವು ತಿಂಗಳು ಓದಿದವರು ಇನ್ನು ಮುಂದೆ ಪರೀಕ್ಷೆ ಪಾಸ್ ಮಾಡುವುದು ದುಸ್ತರ. ಕೆಪಿಎಸ್‌ಸಿಯಲ್ಲಿನ ಇಂತಹ ಎಲ್ಲಾ ಕರಾಮತ್ತುಗಳ ಹಿಂದೆ ಹಲವು ವರ್ಷಗಳಿಂದ ಕೆಪಿಎಸ್‌ಸಿಯಲ್ಲಿಯೇ ನೆಲೆಗೊಂಡಿರುವ ನೌಕರರ ಕೈವಾಡವಿದೆ. ಈ ನೌಕರರ ಗುಂಪು ಒಂದು ವ್ಯವಸ್ಥಿತ ಜಾಲವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಒಎಂಆರ್ ಶೀಟ್ ತಿದ್ದುಪಡಿಯಲ್ಲಿ ಪರಿಣತಿ ಹೊಂದಿದೆ ಹಾಗೂ ಆಯೋಗದ ಉನ್ನತ ಅಧಿಕಾರಿಗಳು ಕೂಡ ಈ ಜಾಲದ ಭಾಗವಾಗಿದ್ದಾರೆ' ಎಂದು ಹಲವು ಅಭ್ಯರ್ಥಿಗಳು ಅಲವತ್ತುಕೊಂಡಿದ್ದಾರೆ. ❖




ಸಂತೋಷ್ ಸಸಿಹಿತ್ಲು

## ಇದು ಭ್ರಷ್ಟಾಚಾರವಲ್ಲ, 'ಇತಿಹಾಸ'

ಈಗ 2023-24ನೇ ಸಾಲಿನ 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆಗೆ ವ್ಯಕ್ತಿತ್ವ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ತಯಾರಿ ನಡೆಸುತ್ತಿದೆ. ಆದರೆ, ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:3 ಅನುಪಾತದಲ್ಲಿ ಅರ್ಹರಾದ ಪಟ್ಟಿಯ ಬಗ್ಗೆ ಅನುಮಾನಗಳ ಹುತ್ತ ಬೆಳೆದಿದೆ.

ಪ್ರಶ್ನೆ ಪತ್ರಿಕೆಯ ಭಾಷಾಂತರ ವಿಚಾರದಲ್ಲಿ ಕೆಪಿಎಸ್‌ಸಿ ಮಾಡಿದ ಎಡವಟ್ಟಿನ ವಿರುದ್ಧ ಕೋರ್ಟ್ ಮೊರೆ ಹೋಗಿದ್ದ 300ಕ್ಕೂ ಹೆಚ್ಚು ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆ ಪಾಸಾಗದೆ ಮುಖ್ಯ ಪರೀಕ್ಷೆ ಬರೆದಿದ್ದು ಇತಿಹಾಸ. ಈ ಪೈಕಿ, ಆರು ಮಂದಿ ಸಂದರ್ಶನಕ್ಕೆ ಆಯ್ಕೆಯಾಗಿರುವುದು ಇನ್ನೊಂದು ಅಚ್ಚರಿ. ಒಂದು ಪರೀಕ್ಷಾ ಕೇಂದ್ರದಲ್ಲಿ ಒಬ್ಬರು ಅಥವಾ ಇಬ್ಬರು ಮುಖ್ಯ ಪರೀಕ್ಷೆಗೆ ಆಯ್ಕೆಯಾದರೆ ಅದೇ ದೊಡ್ಡ ವಿಷಯ. ಆದರೆ, ಈ ಬಾರಿ ಒಂದೇ ಪರೀಕ್ಷಾ ಕೇಂದ್ರದಿಂದ 11 ಅಭ್ಯರ್ಥಿಗಳು ಆಯ್ಕೆಯಾಗಿರುವುದು ಅಚ್ಚರಿಯೊಂದಿಗೆ ಸಂಶಯಕ್ಕೂ ಕಾರಣವಾಗಿದೆ. ಫಲಿತಾಂಶ ಪ್ರಕಟವಾದ ಬಳಿಕ ಹಲವು ಅಭ್ಯರ್ಥಿಗಳು ಗಂಭೀರ ಅನುಮಾನ ವ್ಯಕ್ತಪಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಆಯೋಗದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲವರು ಮುಖ್ಯ ಪರೀಕ್ಷೆಯಲ್ಲಿ ಅತ್ಯುತ್ತಮವಾಗಿ ಬರೆದಿದ್ದರೂ ಆಯ್ಕೆಯಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಫಲಿತಾಂಶದ ವಿವರಗಳನ್ನು ಒಳಗೊಂಡ ಪೋಸ್ಟ್‌ಗಳನ್ನು ಹಂಚಿಕೊಂಡು ಕಿಡಿಕಾರುತ್ತಿದ್ದಾರೆ.

ಈ ಕುರಿತಾಗಿ ಸದನದಲ್ಲೂ ಗಂಭೀರ ಚರ್ಚೆಯಾಗಿದ್ದು, ವಿರೋಧ ಪಕ್ಷದ ಸದಸ್ಯರು 1:3 ಪಟ್ಟಿ ಸಿದ್ಧಪಡಿಸುವ ಸಂದರ್ಭದಲ್ಲೂ ವ್ಯಾಪಕ ಅಕ್ರಮಗಳಾಗಿರುವುದರಿಂದ ಮರುಪರೀಕ್ಷೆ ನಡೆಸುವಂತೆ ಆಗ್ರಹಿಸಿದ್ದರು. ಆರೋಪದ ಕಿಚ್ಚು ಹೆಚ್ಚುತ್ತಿದ್ದಂತೆ ರಾಜ್ಯ ಮುಖ್ಯ ಕಾರ್ಯದರ್ಶಿ ಅವರು ಕೆಪಿಎಸ್‌ಸಿ ಕಾರ್ಯದರ್ಶಿ ಅವರಿಂದ ವರದಿ ಕೇಳಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ್ದ ಕೆಪಿಎಸ್‌ಸಿ ಕಾರ್ಯದರ್ಶಿ, 'ಅತ್ಯಂತ ಪಾರದರ್ಶಕವಾಗಿ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಲಾಗಿದೆ. ಯಾವುದೇ ಆಧಾರವಿಲ್ಲದೆ ಭ್ರಷ್ಟಾಚಾರದ ಆರೋಪ ಮಾಡುವುದು ಸರಿಯಲ್ಲ. 5,700ಕ್ಕೂ ಅಧಿಕ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಒಂದು ಕೊಠಡಿಯಲ್ಲಿ 24 ಅಭ್ಯರ್ಥಿಗಳು ಇರುತ್ತಾರೆ. ಅದರಲ್ಲಿ 10ರಿಂದ 12 ಅಭ್ಯರ್ಥಿಗಳು ಆಯ್ಕೆಯಾಗುವುದು ಸಂಭವನೀಯ. ಆದರೆ, ಕೆಪಿಎಸ್‌ಸಿ ಇತಿಹಾಸದಲ್ಲೇ ಒಂದೇ ಕೊಠಡಿಯಲ್ಲಿ ಇಷ್ಟು ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳು ಪಾಸಾಗಿರುವುದು ಇದೇ ಮೊದಲು ಎನಿಸುತ್ತದೆ. ಇದು ಭ್ರಷ್ಟಾಚಾರವಲ್ಲ, ಇತಿಹಾಸ' ಎಂದಿದ್ದರು.

## ಫ್ಯಾಕ್ಟ್ ಚೆಕ್

ಪಿವಿ

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

**ಭಾರತದ** ಜಲ ಪ್ರದೇಶದಲ್ಲಿದ್ದ ಇರಾನಿನ ನೌಕಾ ಪಡೆಗೆ ಸೇರಿದ ಹಡಗಿನ ಮೇಲೆ ಭಾರತೀಯ ನೌಕಾಪಡೆಯು ಕ್ಷಿಪಣಿ ದಾಳಿ ನಡೆಸಿ, ಯುದ್ಧನೌಕೆಯನ್ನು ನಾಶ ಮಾಡಿದೆ ಎಂದು ಹೇಳಲಾಗಿದೆ. ಇರಾನಿನ 29 ಮಂದಿ ನೌಕಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಪ್ರತಿಪಾದಿಸುತ್ತಾ @ಪ್ರೌಡ್‌ಇಂಡಿಯನ್‌ನವಿ ಎಂಬ 'ಎಕ್ಸ್' ಖಾತೆಯಲ್ಲಿ ವಿಡಿಯೊ ಹಾಗೂ ಫೋಟೊವನ್ನು ಪೋಸ್ಟ್ ಮಾಡಲಾಗಿದೆ. ಆದರೆ, ಇದು ಸುಳ್ಳು ಸುದ್ದಿ.

**ವಿಡಿಯೊ** ತುಣುಕಿನ ಕೀಫ್ರೇಮ್ ಒಂದನ್ನು ರಿವರ್ಸ್ ಸರ್ಚ್ ವಿಧಾನದಲ್ಲಿ ಗೂಗಲ್‌ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಈಗ ಪೋಸ್ಟ್ ಮಾಡಲಾಗಿರುವ ವಿಡಿಯೊವನ್ನು ಮಾರ್ಚ್ 4ರಂದು ಹಲವರು ಹಂಚಿಕೊಂಡಿರುವುದು ಕಂಡು ಬಂತು. ಬಂದರ್ ಅಬ್ಬಾಸ್ ಬಂದರು ಬಳಿಯಲ್ಲಿದ್ದ ಇರಾನಿನ ಯುದ್ಧನೌಕೆಯ ಮೇಲೆ ಅಮೆರಿಕ ಸೇನೆ ದಾಳಿ ನಡೆಸಿರುವ ಬಗ್ಗೆ ಪೋಸ್ಟ್‌ಗಳಲ್ಲಿ ಹೇಳಲಾಗಿತ್ತು. ಇದೇ ವಿಡಿಯೊ ತುಣುಕುಗಳನ್ನು ಹೊಂದಿದ್ದ ಹಲವು ಮಾಧ್ಯಮ ವರದಿಗಳೂ ಸಿಕ್ಕವು. ಭಾರತದ ನೌಕಾ ಪಡೆ ಇರಾನ್ ನೌಕೆಯ ಮೇಲೆ ದಾಳಿ ನಡೆಸಿಲ್ಲ. ತಪ್ಪು ಮಾಹಿತಿ ಹರಡಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

## ಕೋಪದಲ್ಲಿ ಯಾವ ಕೆಲಸವನ್ನೂ ಮಾಡಬೇಡಿ

ಪಿ.ಚಂದ್ರಿಕಾ

**ಮೊಹಮ್ಮದ್** ಅವರ ಮಾವ ಹಜರತ್ ಅಲಿ ಖಲೀಫರಾಗಿದ್ದವರು. ಒಮ್ಮೆ ಯುದ್ಧವೊಂದರಲ್ಲಿ ಅವರಷ್ಟೇ ಬಲಶಾಲಿಯಾದ ಶತ್ರುವಿನ ವಿರುದ್ಧ ಹೋರಾಡಬೇಕಾಗಿ ಬಂತು. ಭೀಕರ ಕಾಳಗದಲ್ಲಿ ಹಜರತ್ ಅಲಿಯ ಎದುರಾಳಿಯು ನೆಲಕ್ಕೆ ಬಿದ್ದನು. ಧರ್ಮವಿರೋಧಿಯಾದ ಅವನನ್ನು ಬಿಡಲು ಸಾಧ್ಯವೇ. ಆ ಶತ್ರುನಾಯಕನ ತಲೆಯನ್ನು ಕಡಿಯಲು ಅವನ ಎದೆಮೇಲೆ ಕುಳಿತು ಕತ್ತಿಯನ್ನು ಮೇಲಕ್ಕೆತ್ತಿದ್ದನು. ಆಗ ಕೆಳಗೆ ಬಿದ್ದ ಶತ್ರುನಾಯಕನು 'ಥೂ ಹೇಡಿ ಛೀ' ಎಂದು ಅರಚುತ್ತಾ ಅವನ ಮುಖಕ್ಕೆ ಉಗುಳಿಬಿಟ್ಟನು. ಸುತ್ತಲಿದ್ದವರೆಲ್ಲರೂ ಸ್ತಂಭೀಭೂತರಾಗಿ, 'ಅರೆ, ಈ ನಾಯಕ ಏನು ಮಾಡಿದ? ಸ್ವತಃ ಖಲೀಫನ ಮುಖಕ್ಕೆ ಉಗುಳುವಷ್ಟು ಕೊಬ್ಬು ಬಂತೆ? ಈಗ ಖಲೀಫ ಅವನ ತಲೆಯನ್ನು ನುಚ್ಚು ನೂರು ಮಾಡುವುದು ಖಚಿತ' ಎಂದುಕೊಂಡು ನೋಡುತ್ತಿದ್ದರು.

ಎತ್ತಿದ್ದ ಖಡ್ಗ ಹಾಗೇ ಇತ್ತು. ಹಜರತ್ ಅಲಿಯ ಮುಖದಲ್ಲಿ ಕ್ರೋಧವೂ ಕುಣಿದಾಡಿತು. ಕ್ಷಣ ಕಾಲ ಅಷ್ಟೇ; ತನ್ನನ್ನು ನಿಗ್ರಹಿಸಿಕೊಂಡ ಅವರು, ಶತ್ರುನಾಯಕನ ಎದೆಯ ಮೇಲಿಂದೆದ್ದು ಖಡ್ಗವನ್ನು ಒರೆಗೆ ಸೇರಿಸಿದರು. ಪಕ್ಕದಲ್ಲೆ ಇದ್ದ ಸೇನಾನಿ, 'ಈ ಪಾಪಿಯು ಪರಮ ಧಾರ್ಮಿಕನಾದ ನಿಮ್ಮ ಮುಖಕ್ಕೆ ಉಗುಳಿ ಮಹಾದ್ರೋಹ ಎಸಗಿದ್ದಾನೆ. ಇವನನ್ನು ಚೂರು ಚೂರು ಮಾಡಿ. ನಿಮಗೆ ಬೇಡವೆನ್ನಿಸಿದರೆ ನನಗೆ ಆದೇಶವನ್ನು ನೀಡಿ. ಇವನನ್ನು ಸುಮ್ಮನೆ ಏಕೆ ಬಿಟ್ಟಿರಿ' ಎನ್ನುತ್ತಾನೆ.

**ಹಜರತ್ ಅಲಿ ಹೇಳಿದರು:** 'ಇವನು ಇವತ್ತು ನನಗೆ ಒಂದು ಮಹಾನ್ ಪಾಠವನ್ನು ನೆನಪಿಸಿದ. ಇವನು ನನ್ನ ಮುಖದ ಮೇಲೆ ಉಗುಳದೆ ಇದ್ದಿದ್ದರೆ ಇಷ್ಟು ಹೊತ್ತಿಗೆ ಇವನ ಜೀವ ಹೋಗಿರುತ್ತಿತ್ತು'. ಸೇನಾಧಿಕಾರಿ, 'ಅದಕ್ಕೇ ತಾನೆ ಇವನು ಹೆಚ್ಚು ಶಿಕ್ಷಾರ್ಹನೆಂದು ನಾನು ಹೇಳಿದ್ದು' ಎಂದ. 'ನಿಜ, ನೀನು ಹೇಳಿದ ಹಾಗೆ ನನ್ನ ಮನಸ್ಸಿನಲ್ಲೂ ಕ್ರೋಧ ಜ್ವಾಲೆಯಾಗಿ ಹಬ್ಬಿತು. ಅವನನ್ನು ಚೂರುಚೂರಾಗಿ ಮಾಡಬೇಕೆಂದು ಅನ್ನಿಸಿತು' ಎನ್ನುತ್ತಾರೆ ಹಜರತ್ ಅಲಿ. ಸೇನಾಧಿಕಾರಿಗೆ ಅಚ್ಚರಿ. 'ಕೋಪ ಹೆಚ್ಚಾದಾಗ ಕೊಲ್ಲಬೇಕೆಂಬ ತೀವ್ರತೆಯೂ ಹೆಚ್ಚಾಗುತ್ತದೆ ಅಲ್ಲವೆ?' ಎನ್ನುತ್ತಾನೆ.

**ಹಜರತ್ ಅಲಿ ಹೇಳಿದರು:** ರಾಗದ್ವೇಷಗಳಿಗೆ ಮನಸ್ಸು ವಶವಾಗಿದ್ದಾಗ ಯಾರೂ ಯಾವ ಕೆಲಸವನ್ನೂ ಮಾಡಬಾರದು; ಹತ್ಯೆಗಳನ್ನು ಕೂಡಾ. ಧರ್ಮ ಮಾರ್ಗದಲ್ಲಿ ನಡೆದು ಸನ್ಮಾರ್ಗಕ್ಕಾಗಿ ಜಗತ್ತನ್ನು ನಮ್ಮೊಂದಿಗೆ ಕೊಂಡೊಯ್ಯಲೆಂದು ಹೊಡೆದಾಡಬೇಕು. ನಮ್ಮ ಕಾಮಕ್ರೋಧಗಳಿಗೆ ಹೊಡೆದಾಡುವುದು ಅನಿಯಮವಾಗುತ್ತದೆ. ಇದನ್ನು ನೆನಪಿಸಿದ ಇವನನ್ನು ಕೊಲ್ಲಲಿಲ್ಲ' ಎನ್ನುತ್ತಾರೆ. ಈ ಮಾತುಗಳನ್ನು ಕೇಳಿ ಶತ್ರುನಾಯಕನು ಕುಸಿದು ಹೋಗುತ್ತಾನೆ. ತಾನು ಎಂಥಾ ತಪ್ಪನ್ನು ಮಾಡಿದೆ, ಒಬ್ಬ ಮಹಾತ್ಮನ ಮುಖಕ್ಕೆ ಉಗಿದು ಮಹಾಪಾಪಿಯಾದೆ ಎಂದು ಪಶ್ಚಾತ್ತಾಪದಿಂದ ಮಾರ್ಪಾಡಾಗಿ ಹಜರತ್ ಅಲಿಯ ಅನುಯಾಯಿಯಾಗುತ್ತಾನೆ.

ನಿಷ್ಕಾಮ ಕಾರ್ಯಗಳಿಂದ ಮನುಷ್ಯ ಎಲ್ಲವನ್ನೂ ಗೆಲ್ಲಬೇಕು. ಕೋಪದಲ್ಲಿ ಮಾಡುವ ಕೆಲಸಕ್ಕೆ ವಿವೇಚನೆಯೂ ಸರಿಯಾದ ಗುರಿಯೂ ಇರುವುದಿಲ್ಲ. ಕೃಷ್ಣನೂ ಭಗವದ್ಗೀತೆಯಲ್ಲಿ 'ಶೂರನಾದ ನರನೇ ಕ್ರೋಧವನ್ನು ಕೊಲ್ಲು, ನರನನ್ನಲ್ಲ. ದೈವ ಒಪ್ಪುವ ಸನ್ಮಾರ್ಗದಲ್ಲಿ ನಡೆ, ಸದ್ಗತಿ ಪ್ರಾಪ್ತವಾಗುತ್ತದೆ' ಎಂದ. ಕುರಾನಿನಲ್ಲಿ ಕೂಡಾ ಯಾರು ಸಿಟ್ಟನ್ನು ನುಂಗಿಕೊಳ್ಳುತ್ತಾರೋ ಯಾರಲ್ಲಿ ಕ್ಷಮಾಗುಣವಿರುತ್ತದೋ ಅವರನ್ನು ದೇವರು ತನ್ನ ಪ್ರೀತಿಪಾತ್ರರನ್ನಾಗಿಸಿಕೊಳ್ಳುತ್ತಾನೆ ಎಂದಿದೆ. ಇಲ್ಲವಾದಲ್ಲಿ ಮೂಗಿನ ಮೇಲಿನ ಕೋಪ ಮೂಗನ್ನೇ ತಿನ್ನುವಂತೆ ನಮಗೆ ಬರುವ ಕೋಪ ನಮ್ಮನ್ನೇ ತಿನ್ನುತ್ತದೆ. ❖

## ಪದಬಂಧ 6361

ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1. ಭ್ರಾಂತಿಯನ್ನು ಹೋಗಲಾಡಿಸುವುದು (6)
4. ಒಂದು ಸಂಖ್ಯೆಯನ್ನು ಇನ್ನೊಂದರಿಂದ ಗುಣಿಸುವುದು (4)
5. ವ್ಯವಹಾರ ಕುಶಲನೀತ (3)
8. ಜನ್ಮವಿಲ್ಲಿ ವಿರಳವಾಗಿ ಬಂದಿದೆ (3)
11. ಕಾಮನಿಲ್ಲಿ ಉಲ್ಟಾ ಕಾಣುತ್ತಿದ್ದಾನೆ (3)
13. ಟಾರ ರಸ್ತೆ ಬದಿಯಲ್ಲಿನ ಮೋರಿ (3)
14. ಕನ್ನಡಿಗ ಧರಿಸಿದ ಚಾಳೀಸು (4)
16. ಮೂರ್ತಿ ಪೂಜೆಯಿದು (6)

**ಮೇಲಿಂದ ಕೆಳಕ್ಕೆ**

1. ಚಾರನ ಕೆಟ್ಟ ನಡವಳಿಕೆ (4)
2. ಅಳು ಪದದ ವಿರುದ್ಧ ಪದ (2)
3. ವಧೂವರರು ಒಬ್ಬರಿಗೊಬ್ಬರು ಈಡುಜೋಡಾಗಿರುವುದು (4)
6. ತಪ್ಪನ್ನು ಮನ್ನಿಸುವುದು (4)
7. ಆನೆಯ ನಡಿಗೆ (5)
9. ಈತ ಲಗ್ನವಾಗುತ್ತಿರುವವನು (4)
10. ಈ ಪರಿ ಕರದಲ್ಲಿ ಹಿಡಿದಿರುವ ಸಾಮಗ್ರಿ (4)
12. ಅರಸನ ಮನೆ (4)
15. ಕವಿತೆ ಬರೆಯುವವನು (2)



### 6360ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಸುಲಭೋಪಾಯ 4.ವಿಪ್ಲವ 5.ಮಲಾರ 6.ಹತಾರ 8.ನಾಯಕ 9.ತಂಬಾಕು 13.ವನಿತೆ 15.ಗಮನ 16.ಅಗುಳು 17.ನವೀಕರಣ

**ಮೇಲಿಂದ ಕೆಳಕ್ಕೆ:** 1.ಸುಹಾಸಿನಿ 2.ಭೋಜನಾಲಯ 3.ಯಮದೂತ 4.ವಿರಹ 7.ತಾರೀಕು 8.ನಾದಿನಿ 10.ಬಾಲಬಡಿಕ 11.ಗಜಾನನ 12.ಕಡುಜಾಣ 14.ತೇಗಳು

## ಸುಡೊಕು 6745

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| 9 | | 7 | | | | | 5 | 4 |
| | | | 4 | 1 | 9 | 8 | | 7 |
| 5 | | 8 | | | | | 6 | |
| | | 6 | 5 | | | 7 | | 9 |
| 7 | | | | 6 | 1 | | 4 | |
| | 5 | | 8 | | | 3 | | 6 |
| | | | 3 | | | 4 | | 2 |
| | 9 | | | | | | | |
| 6 | | 4 | | 9 | 5 | 1 | | 3 |

### 6744 ಸುಡೊಕು

| | | | | | | | | |
|---|---|---|---|---|---|---|---|---|
| 7 | 1 | 5 | 9 | 4 | 6 | 3 | 2 | 8 |
| 3 | 4 | 6 | 5 | 8 | 2 | 7 | 9 | 1 |
| 2 | 8 | 9 | 3 | 7 | 1 | 5 | 6 | 4 |
| 9 | 6 | 4 | 1 | 3 | 7 | 8 | 5 | 2 |
| 5 | 2 | 8 | 4 | 6 | 9 | 1 | 3 | 7 |
| 1 | 3 | 7 | 8 | 2 | 5 | 9 | 4 | 6 |
| 4 | 9 | 3 | 2 | 1 | 8 | 6 | 7 | 5 |
| 6 | 5 | 1 | 7 | 9 | 4 | 2 | 8 | 3 |
| 8 | 7 | 2 | 6 | 5 | 3 | 4 | 1 | 9 |

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

**02 ಏಪ್ರಿಲ್ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ ವಸಂತ ಋತು, ತಿಥಿ:** ಚೈತ್ರ ಶುಕ್ಲ ಪೂರ್ಣಿಮಾ ಗಂ. 7-42, **ನಕ್ಷತ್ರ:** ಹಸ್ತ ಗಂ. 17-39, **ಯೋಗ:** ಧ್ರುವ ಗಂ. 14-20, **ಕರಣ:** ಬವ ಗಂ 7-42 ಮೀನ ಮಾಸದ 18 ನೇ ದಿನ. **ಮಳೆ ನಕ್ಷತ್ರ:** ರೇವತಿ 1 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 - 03-00, **ಸೂರ್ಯೋದಯ:** 06-29 **ಸೂರ್ಯಾಸ್ತ :** 06-39, **ಮುಸ್ಲಿಂ ದಿನಾಂಕ:** 13 ಶವ್ವಾಲ್, **ದಿನ ವಿಶೇಷ:** ಹನುಮಂತ ಜಯಂತಿ, **ಅದೃಷ್ಟ ಸಂಖ್ಯೆ:** 11, 10

**ಮೇಷ:** ಸಮಾಧಾನದಿಂದ ವಿಚಾರ ವಿನಿಮಯ ಮಾಡಿಕೊಂಡರೆ ವಿವಾದಗಳು ನಿವಾರಣೆಯಾಗಲಿವೆ. ರಾಸಾಯನಿಕ ಪದಾರ್ಥಗಳ ವ್ಯಾಪಾರಸ್ಥರಿಗೆ ಅಧಿಕ ಲಾಭ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗಲಿವೆ.

**ವೃಷಭ:** ಆಪ್ತರ ಕಷ್ಟಗಳ ಕಡೆಗೆ ಗಮನ ಕೊಡುವುದು ಅಭ್ಯಾಸ ಮಾಡಿ, ಅದರಿಂದ ಸಂಬಂಧ ವೃದ್ಧಿಯಾಗಲಿದೆ ಜೊತೆಯಲ್ಲಿ ಪುಣ್ಯ ಸಂಪಾದನೆಯೂ ಆಗುವುದು. ಉದ್ಯೋಗಕ್ಕೆ ಅನುಕೂಲವಾಗುವ ಜನರ ಪರಿಚಯವಾಗಲಿವೆ.

**ಮಿಥುನ:** ನಿರುದ್ಯೋಗಿ ಯುವಕರು ಖಾಸಗಿ ಸಂಸ್ಥೆಗಳಲ್ಲಿ ತಾತ್ಕಾಲಿಕ ಅಥವಾ ಗುತ್ತಿಗೆ ಕೆಲಸದಂತಹ ಸಣ್ಣ-ಪುಟ್ಟ ಉದ್ಯೋಗಕ್ಕೆ ತಯಾರಿ ನಡೆಸಿ. ಬಹಳ ಹಿಂದಿನಿಂದ ಇದ್ದಂತಹ ಜಮೀನಿನ ತಕರಾರು ಇತ್ಯರ್ಥಗೊಳ್ಳುವುದು.

**ಕರ್ಕಾಟಕ:** ಹಿಂದೆ ನಡೆದಿರುವ ವಿಚಾರದ ಬಗೆಗಿನ ಯೋಚನೆಗಿಂತ ಲಭ್ಯವಿರುವ ಅವಕಾಶಗಳ ಬಗ್ಗೆ ಯೋಚಿಸುವುದು ಉತ್ತಮ. ವೃತ್ತಿರಂಗದಲ್ಲಿ ತಮ್ಮತನ ಕಾಯ್ದುಕೊಳ್ಳುವುದರಿಂದ ಮುಂದಿನ ಅಭಿವೃದ್ಧಿಗೆ ಪೂರಕ.

**ಸಿಂಹ:** ಪ್ರಮುಖ ಬದಲಾವಣೆಯ ಘಟ್ಟದಲ್ಲಿದ್ದೀರಿ, ಭವಿಷ್ಯದ ದೃಷ್ಟಿಯಿಂದ ಜೀವನ ಶೈಲಿಯಲ್ಲಿ ತಕ್ಷಣ ಕಾರ್ಯೋನ್ಮುಖರಾಗುವುದು ಉತ್ತಮ. ಕೈಮಗ್ಗ ವಸ್ತುಗಳ ರಫ್ತು ಮಾರಾಟಗಾರರಿಗೆ ಉತ್ತಮ ಲಾಭ ಸಿಗುವುದು.

**ಕನ್ಯಾ:** ಮಾನಸಿಕ ಒತ್ತಡ ಹೆಚ್ಚಿಸುವಂತಹ ಕೆಲಸವನ್ನು ಮಾಡುವವರಿಗೆ ಸಹಾಯಕನ ಅವಶ್ಯಕತೆ ಹೆಚ್ಚಾಗುವುದು. ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳ ಬಗ್ಗೆ ನಿಗಾ ಇರಲಿ. ಕ್ರೀಡಾ ಚಟುವಟಿಕೆಗಳು ಹೆಚ್ಚುವುದು.

**ತುಲಾ:** ಷರತ್ತುಗಳಿರುವ ಯಾವುದೇ ರೀತಿಯ ವ್ಯವಹಾರಕ್ಕೆ ಈ ದಿನ ಕೈ ಹಾಕದಿರುವುದು ಉತ್ತಮ. ಸರ್ಕಾರಿ ಕಾಮಗಾರಿಗಳಿಂದ ಬಾಕಿ ಇರುವ ಹಣದ ಬಗ್ಗೆ ಗಮನ ಹರಿಸುವುದು ಒಳ್ಳೆಯದು.

**ವೃಶ್ಚಿಕ:** ಸಮಾನ ಮನಸ್ಕರೊಂದಿಗಿನ ಮಾತುಕತೆಯಿಂದ ಕೆಲಸ ಕಾರ್ಯಗಳು ಸುಗಮವಾಗುತ್ತವೆ. ಇದರಿಂದಾಗಿ ಆತ್ಮವಿಶ್ವಾಸವು ಹೆಚ್ಚುವುದು. ದುಃಖದ ಪರಿಸ್ಥಿತಿಯಲ್ಲಿರುವ ಗೆಳೆಯರಿಗೆ ನೀವು ಸಮಾಧಾನ ಹೇಳಬೇಕಾಗುವುದು.

**ಧನು:** ಮಕ್ಕಳ ಒತ್ತಾಯದಿಂದ ಮನೋರಂಜನೆಗೆ ಖರ್ಚುಮಾಡುವ ಸಾಧ್ಯತೆ ಇದೆ. ಮದುವೆಯ ಸಲುವಾಗಿ ವಸ್ತ್ರಾಭರಣದ ಖರೀದಿ ಮಾಡಬಹುದು. ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ತೃಪ್ತಿ ಸಿಗುವುದು.

**ಮಕರ:** ಸಂಶೋಧನಾ ವಿದ್ಯಾರ್ಥಿಗಳಿಗೆ ಗುಪ್ತವಾದ ಮಾಹಿತಿ ತಿಳಿದು ಅಧ್ಯಯನಕ್ಕೆ ಉಪಯೋಗವಾಗಲಿದೆ. ಸಹವರ್ತಿಗಳು ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ನೀವು ಸುಲಭವಾಗಿ ಸ್ಥಾನ ಗಳಿಸುವಿರಿ.

**ಕುಂಭ:** ಊರಿನ ಪ್ರಮುಖರಿಂದ ನಿಮ್ಮ ಅಪೇಕ್ಷೆ ಇಲ್ಲದಿದ್ದರೂ ನಿಮಗೆ ಬೇಕಾದ ಕೆಲಸಗಳು ನಡೆಯಬಹುದು. ಆಟೋಮೊಬೈಲ್ಸ್ ಸಂಬಂಧಿತ ಕೆಲಸಗಾರರಿಗೆ ಹರ್ಷದಾಯಕ ದಿನ. ಜೀರ್ಣಾಂಗ ಸಮಸ್ಯೆ ಕಾಡಬಹುದು.

**ಮೀನ:** ಆಹಾರ ಪದಾರ್ಥದ ವ್ಯಾಪಾರ ಮಾಡುವವರು ಶುದ್ಧತೆಯ ಬಗ್ಗೆ ಹೆಚ್ಚಿನ ಗಮನ ನೀಡಿದರೆ ಹೆಸರುವಾಸಿಯಾಗುವಿರಿ. ಪ್ರವಾಸ ಹೋಗುವ ವಿಷಯದಲ್ಲಿ ಕುಟುಂಬದ ಸದಸ್ಯರು ನಿಮ್ಮ ನಿರ್ಧಾರಗಳನ್ನು ಒಪ್ಪಿಕೊಳ್ಳುವರು.

## ಗುಂಡಣ್ಣ

**ಷೇರುಪೇಟೆ ವಹಿವಾಟು**

| | |
|---|---|
| ಹಿಂದಿನ ಅಂತ್ಯ | 71,947 |
| ಇಂದಿನ ಅಂತ್ಯ | 73,134 |
| ಏರಿಕೆ | 1186 |

**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ: | 22,331 |
| ಇಂದಿನ ಅಂತ್ಯ: | 22,679 |
| ದಿನದ ಕನಿಷ್ಠ: | 22,941 |
| ಏರಿಕೆ | 348 |

**ಮೊಟ್ಟೆ ಧಾರಣೆ (ಎನ್‌ಇಸಿಸಿ)**

| ಬೆಂಗಳೂರು | |
|---|---|
| 100 ಕ್ಕೆ | ₹455 |
| 12 ಕ್ಕೆ | ₹72 |
| ಮೈಸೂರು: 100 ಕ್ಕೆ | ₹460 |

**ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)**

| | |
|---|---|
| ಆರ್‌ಎಸ್‌ಎಸ್-4 | ₹219 |
| ಆರ್‌ಎಸ್‌ಎಸ್-5 | ₹213 |
| ಗುಡ್ ಲಾಟ್ | ₹193 |

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ(ಸಿ.ಬಿ) | ₹425-745 |
| ದ್ವಿತಳಿ (ಬಿ.ವಿ) | ₹366-840 |

**ಮುದ್ರೆಮನೆ ಕಾಫಿ**

| | |
|---|---|
| ಎಪಿ | ₹23500 |
| ಎಸಿ | ₹14150 |
| ಆರ್‌ಪಿ | ₹18250 |
| ಆರ್‌ಸಿ | ₹10000 |

**ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)**

| | |
|---|---|
| ಶೇಂಗಾ (ರಿಫೈನ್ಡ್) | ₹1780 (1765) |
| ಸೋಯಾ (ರಿಫೈನ್ಡ್) | ₹1600 (1560) |
| ಸೂರ್ಯಕಾಂತಿ (ರಿಫೈನ್ಡ್) | ₹1720 (1710) |
| ಪಾಮೋಲಿನ್ | ₹1490 (1450) |

## ವಿಕಾಸ ಬ್ಯಾಂಕ್: ₹2,148 ಕೋಟಿ ವ್ಯವಹಾರ

ಪ್ರಜಾವಾಣಿ ವಾರ್ತೆ

**ಹೊಸಪೇಟೆ (ವಿಜಯನಗರ):** 'ದಾವಣಗೆರೆ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ 18 ಶಾಖೆ ಹೊಂದಿರುವ ವಿಕಾಸ ಸೌಹಾರ್ದ ಕೋ ಆಪರೇಟಿವ್ ಬ್ಯಾಂಕ್ ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹2,148 ಕೋಟಿ ವ್ಯವಹಾರ ನಡೆಸಿ, ₹10.84 ಕೋಟಿ ನಿವ್ವಳ ಲಾಭ ಗಳಿಸಿದೆ' ಎಂದು ಅಧ್ಯಕ್ಷ ವಿಶ್ವನಾಥ ಚ.ಹಿರೇಮಠ ಹೇಳಿದರು.

'ಬ್ಯಾಂಕ್‌ನ ಠೇವಣಿ ₹1,365 ಕೋಟಿಗೆ ತಲುಪಿದೆ. ಸಾಲ ವಿತರಣೆ ಮೊತ್ತ ₹783.60 ಕೋಟಿಯಾಗಿದೆ. ಎನ್‌ಪಿಎ ಪ್ರಮಾಣ ಶೇ 2.39ರಷ್ಟು ಇದೆ' ಎಂದೂ ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

**ಅಡಿಕೆ ಧಾರಣೆ**

| ಪುತ್ತೂರು | |
|---|---|
| ಕೋಕ | 20000-33500 |
| ಹೊಸತು | 26000-47500 |
| **ಶಿವಮೊಗ್ಗ** | |
| ರಾಶಿ | 50209-55000 |

# ಆಟೊಗ್ಯಾಸ್ ದರ ಏರಿಕೆ, ಕಂಗಾಲು

## ಹುಬ್ಬಳ್ಳಿ, ಬೆಳಗಾವಿಯಲ್ಲಿ ಪೂರೈಕೆ ಸ್ಥಗಿತ • ವಿವಿದೆಡೆ ಬಂಕ್ ಬಂದ್

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ಆಟೊ ಎಲ್‌ಪಿಜಿ (ದ್ರವೀಕೃತ ಇಂಧನ ಅನಿಲ) ದರ ಏರಿಕೆ ವಿರೋಧಿಸಿ ಮತ್ತು ಕೆಲ ಕಡೆ ಪೂರೈಕೆ ಸ್ಥಗಿತಗೊಂಡಿದ್ದನ್ನು ಖಂಡಿಸಿ ಆಟೊ ಚಾಲಕರು ಬಳ್ಳಾರಿ, ಬೆಳಗಾವಿ, ಹುಬ್ಬಳ್ಳಿಯಲ್ಲಿ ಪ್ರತಿಭಟನೆ ನಡೆಸಿದರು.

ಆಟೊ ಎಲ್‌ಪಿಜಿ ಎರಡು ದಿನಗಳ ಹಿಂದೆ ಕೆ.ಜಿಗೆ ₹65 ಇದ್ದುದು, ಏಕಾಏಕಿ ಕೆ.ಜಿಗೆ ₹92 ವರೆಗೂ ಏರಿಕೆಯಾಗಿದೆ ಎಂಬುದು ಆಟೊ ಚಾಲಕರ ಆಕ್ರೋಶಕ್ಕೆ ಕಾರಣವಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈ ಕುರಿತು ಆಕ್ರೋಶ ವ್ಯಕ್ತವಾಗಿದ್ದು, ಕೆಲವೆಡೆ ಆಟೊ ನಿಲ್ಲಿಸಿರುವ ಬೆಳವಣಿಗೆಗಳು ನಡೆದಿವೆ.

ಬಳ್ಳಾರಿಯಲ್ಲಿ 6 ಆಟೊ ಗ್ಯಾಸ್ ಬಂಕ್‌ಗಳ ಪೈಕಿ 4 ಬಂದ್ ಆಗಿವೆ. ಮೋಕಾ ರಸ್ತೆ ಗ್ಯಾಸ್ ಸ್ಟೇಷನ್‌ನಲ್ಲಿ ಬುಧವಾರ ಬೆಳಿಗ್ಗೆ ಗ್ಯಾಸ್ ದರ ಕೆ.ಜಿಗೆ ₹84.85 ರಿಂದ ₹94ಕ್ಕೆ ಏರಿತು. ಇದನ್ನು ಖಂಡಿಸಿ ಆಟೊ ಚಾಲಕರು ಪ್ರತಿಭಟಿಸಿದರು. ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ನಿಭಾಯಿಸಿದರು.

'ಆಟೊ ಗ್ಯಾಸ್ ದರ ನಿರಂತರ ಏರುತ್ತಿದೆ. ಈಗ ಏಕಾಏಕಿ ₹10 ಹೆಚ್ಚಿಸಲಾಗಿದೆ. ಗುರುವಾರ ಮತ್ತಷ್ಟು ಏರುವ ಭೀತಿ ಇದೆ. ಹೀಗಾದರೆ, ನಾವು ಬದುಕುವುದು ಹೇಗೆ' ಎಂದು ಆಟೊ ಚಾಲಕ ಜಾಕಿರ್ ಹುಸೇನ್ ಪ್ರಶ್ನಿಸಿದರು.

ಬೆಳಗಾವಿಯಲ್ಲಿ ಆಟೊಗ್ಯಾಸ್, ಸಿಎನ್‌ಜಿ ಸಿಗದೇ, ಚಾಲಕರು ಪರದಾಡುವಂತಾಗಿದೆ. ಇಲ್ಲಿ ನಾಲ್ಕು ಬಂಕ್‌ಗಳ ಪೈಕಿ ಮೂರು ಮುಚ್ಚಿವೆ. ಒಂದು ಬಂಕ್ ಎದುರು ಆಟೊಗಳು ಸಾಲುಗಟ್ಟಿವೆ.

'ಈಗ ಎರಡು ದಿನಗಳಿಂದ ಗ್ಯಾಸ್ ಖಾಲಿ ಎಂದು ಫಲಕ ಹಾಕಿದ್ದಾರೆ. ಒಂದೇ ಬಂಕ್‌ನಲ್ಲಿ ಲಭ್ಯವಿದೆ. ಅಲ್ಲಿ ₹5 ರಷ್ಟು ಹೆಚ್ಚು ವಸೂಲಿ ಮಾಡುತ್ತಾರೆ' ಎಂದು ಬೆಳಗಾವಿ ಜಿಲ್ಲಾ ಆಟೊ ಮಾಲೀಕರು ಹಾಗೂ ಚಾಲಕರ ಸಂಘದ ಅಧ್ಯಕ್ಷ ಮನ್ಸೂರ್ ಅಬ್ದುಲ್ ಗಫಾರ್ ಹೊನಗೇಕರ 'ಪ್ರಜಾವಾಣಿ'ಗೆ ತಿಳಿಸಿದರು.

ಹುಬ್ಬಳ್ಳಿ–ಧಾರವಾಡದಲ್ಲೂ ಆಟೊಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಒಟ್ಟು 20 ಬಂಕ್‌ಗಳಿದ್ದು, 16 ಬಂದ್ ಆಗಿವೆ.

> **ಬೆಳಗಾವಿಯಲ್ಲಿ ಎಲ್‌ಪಿಜಿ, ಸಿಎನ್‌ಜಿ ಕೊರತೆ ಇಲ್ಲ. ಸಾಕಷ್ಟು ದಾಸ್ತಾನಿದೆ. ಆಟೊಗ್ಯಾಸ್ ಭರ್ತಿ ಮಾಡುವ ನಾಜಲ್ ಸಮಸ್ಯೆಯಿಂದ ಕೊರತೆ ಎದುರಾಗಿದೆ**
> **ಮೊಹಮ್ಮದ್ ರೋಷನ್,** ಜಿಲ್ಲಾಧಿಕಾರಿ

ಬೆಳಗಾವಿಯಲ್ಲಿ ಬುಧವಾರ ಆಟೊಗ್ಯಾಸ್ ಸಕಾಲಕ್ಕೆ ಸಿಗದ ಕಾರಣ ಬಂಕ್ ಎದುರು ಆಟೊಗಳು ಸಾಲುಗಟ್ಟಿ ನಿಂತಿದ್ದವು
ಚಿತ್ರ: ಏಕನಾಥ ಅಗಸಿಮನಿ

## ಜಿಲ್ಲೆಗಳ ವಸ್ತುಸ್ಥಿತಿ

### ಪೂರೈಕೆ ಇಳಿಕೆ

**ಮೈಸೂರು:** ಮೈಸೂರು ಜಿಲ್ಲೆಯಲ್ಲಿ ಆಟೊ ಎಲ್‌ಪಿಜಿಗೆ ಬೇಡಿಕೆ ಹೆಚ್ಚಿದ್ದು, ಪೂರೈಕೆ ತಗ್ಗಿದೆ. ಕೆಜಿ ಎಲ್‌ಪಿಜಿಗೆ ₹25 ಹೆಚ್ಚಾಗಿದ್ದು, ₹85ಕ್ಕೆ ತಲುಪಿದೆ. ಕೆಲ ಬಂಕ್‌ಗಳಲ್ಲಿ ಇನ್ನೂ ಹೆಚ್ಚು ವಸೂಲಿ ಮಾಡುತ್ತಿರುವ ದೂರಿದೆ.

ಕೊಡಗಿನಲ್ಲಿ 5.5 ಕೆ.ಜಿ ಎಲ್‌ಪಿಜಿ ಸಿಲಿಂಡರ್ ಬಳಸುವ 6 ಆಟೊಗಳಿವೆ. ಹಿಂದೆ ಒಂದು ಸಿಲಿಂಡರ್‌ಗೆ ₹580 ಇತ್ತು., ಯುದ್ಧದ ಬಳಿಕ ₹1,250 ಆಗಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಎರಡು ಎಲ್‌ಪಿಜಿ ಕೇಂದ್ರ ಬಂದ್ ಆಗಿವೆ. ಹಾಸನ ಜಿಲ್ಲೆಯಲ್ಲಿ ಖಾಸಗಿ ಕೇಂದ್ರಗಳಲ್ಲಿ ₹55ರಿಂದ ₹75ಕ್ಕೆ ಹೆಚ್ಚಿಸಲಾಗಿದೆ. ಮಂಡ್ಯದಲ್ಲಿ ದರ ಏರಿಕೆಯಾಗಿಲ್ಲ.

### ಸಾಲುಗಟ್ಟಿದ ಆಟೊಗಳು

**ಬೆಂಗಳೂರು ಗ್ರಾಮಾಂತರ:** ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಸಿಎನ್‌ಜಿ ಪೂರೈಕೆಯಲ್ಲಿ ಕೊರತೆ ಆಗಿದೆ. ದರ ಕೂಡ ಏರಿಕೆ ಆಗಿದೆ.

ತಾಸುಗಟ್ಟಲೇ ಕಾದರೂ, ಹೆಚ್ಚು ಬೆಲೆ ತೆತ್ತರೂ ಗ್ಯಾಸ್ ಸಿಗುತ್ತಿಲ್ಲ ಎಂಬುದು ಚಾಲಕರ ಆರೋಪ. ಸರ್ಕಾರಿ ಸ್ವಾಮ್ಯದ ಬಂಕ್‌ನಲ್ಲಿ ಲೀಟರ್ ಎಲ್‌ಪಿಜಿಗೆ ₹60 ಇದ್ದದ್ದು ₹80 ಆಗಿದೆ. ಖಾಸಗಿ ಬಂಕ್‌ಗಳಲ್ಲಿ ₹98ಕ್ಕೇರಿದೆ.

ಕೋಲಾರ ನಗರದಲ್ಲಿ ಸರ್ಕಾರಿ ಸ್ವಾಮ್ಯದ ಆಟೊ ಎಲ್‌ಪಿಜಿ ಫಿಲ್ಲಿಂಗ್ ಕೇಂದ್ರ ಕಾರ್ಯಾಚರಣೆಯಲ್ಲಿದೆ. ಉಳಿದ ಕೇಂದ್ರಗಳಲ್ಲಿ ಈ ಸೌಲಭ್ಯ ಬಂದ್ ಆಗಿದೆ. ಖಾಸಗಿಯ ಎರಡು ಎಲ್‌ಪಿಜಿ ಫಿಲ್ಲಿಂಗ್ ಕೇಂದ್ರಗಳಿವೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಆಟೊ ಎಲ್‌ಪಿಜಿ/ಸಿಎನ್‌ಜಿ ಬಂಕ್ ಬಂದ್ ಆಗಿವೆ. ಚಾಲಕರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ, ದೇವನಹಳ್ಳಿಗಳಿಗೆ ತೆರಳಿ ಅನಿಲ ತುಂಬಿಸಿಕೊಂಡು ಬರುತ್ತಿದ್ದಾರೆ.

### ಮುಚ್ಚುವ ಹಂತಕ್ಕೆ ಬಂಕ್‌ಗಳು

**ತುಮಕೂರು:** ನಗರದ ಭದ್ರಮ್ಮ ಛತ್ರ ವೃತ್ತ ಮತ್ತು ಶಿರಾ ಗೇಟ್ ಬಳಿಯ ಬಂಕ್‌ಗಳಲ್ಲಿ ಗ್ಯಾಸ್ ಪೂರೈಕೆ ಸ್ಥಗಿತಗೊಳಿಸಿದ್ದು, ಮುಚ್ಚುವ ಹಂತ ತಲುಪಿವೆ. ಒಂದು ಬಂಕ್‌ನಲ್ಲಿ ಕೆ.ಜಿ ಇಂಧನಕ್ಕೆ ₹75 ತೆಗೆದುಕೊಂಡರೆ, ಮತ್ತೊಂದು ಕಡೆ ₹89, ಇನ್ನೊಂದು ಬಂಕ್‌ನಲ್ಲಿ ₹79 ನಿಗದಿ ಪಡಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಸಿಎನ್‌ಜಿ ಬಂಕ್ ಬಂದ್ ಮಾಡಲಾಗಿದೆ.

### ಏಕರೂಪದ ದರ ಇರಲಿ

**ಕಲಬುರಗಿ:** ಕಲಬುರಗಿ ಜಿಲ್ಲೆಯಲ್ಲಿ ಆಟೊಗ್ಯಾಸ್ ದರ ಲೀಟರ್‌ಗೆ ₹55ರಿಂದ ಕೆಲವೆಡೆ ₹84ರಂತೆ, ಕೆಲವೆಡೆ ₹97ಕ್ಕೆ ಏರಿದೆ. ಕಲಬುರಗಿಯಲ್ಲಿ 14 ಬಂಕ್‌ಗಳ ಪೈಕಿ 4 ಮಾತ್ರ ಕಾರ್ಯನಿರ್ವಹಿಸುತ್ತಿವೆ.

'ಗ್ಯಾಸ್ ದರ ಹೆಚ್ಚಳದಿಂದ ಆಟೊ ಓಡಿಸುವುದೇ ದುಸ್ತರವಾಗಿದೆ. ಏಕರೂಪದ ದರಕ್ಕೆ ಸೂಚಿಸಬೇಕು' ಎಂದು ಕಲ್ಯಾಣ ಕರ್ನಾಟಕ ಆಟೊ ಚಾಲಕರ ಸಂಘದ ಅಧ್ಯಕ್ಷ ಲಕ್ಷ್ಮೀಕಾಂತ ಮಾಲಿಪಾಟೀಲ ಆಗ್ರಹಿಸಿದರು.

### ಸಕಾಲಕ್ಕೆ ಸಿಗದ ಗ್ಯಾಸ್

**ದಾವಣಗೆರೆ:** ಜಿಲ್ಲೆಯಲ್ಲಿ ಕೆ.ಜಿ ಎಲ್‌ಪಿಜಿ ದರ ₹88ಕ್ಕೆ ಏರಿದ್ದು, ಚಾಲಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಗರದಲ್ಲಿ 5 ಎಲ್‌ಪಿಜಿ ಬಂಕ್‌ಗಳಿದ್ದು, ಇಂಧನ ಸಕಾಲಕ್ಕೆ ಸಿಗುತ್ತಿಲ್ಲ.

ಫೆಬ್ರುವರಿ ಅಂತ್ಯಕ್ಕೆ 1 ಕೆ.ಜಿ. ಎಲ್‌ಪಿಜಿ ದರ ₹58 ಇತ್ತು. ಈಗ ಗಗನಮುಖಿಯಾಗಿದೆ. ಎರಡು ದಿನಗಳಿಂದ ಏಕಾಏಕಿ ₹8 ಏರಿಕೆ ಆಗಿರುವುದು ಆಟೊ ಚಾಲಕರ ಆಕ್ರೋಶಕ್ಕೆ ಎಡೆಮಾಡಿಕೊಟ್ಟಿದೆ.

ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲೂ ಎಲ್‌ಪಿಜಿ ಇಂಧನದ ಕೊರತೆಯಾಗಿದ್ದು, ಆಟೊ, ಕಾರಿನ ಚಾಲಕರು ಪರದಾಡುವಂತಾಗಿದೆ.

### ದರ ₹92ಕ್ಕೆ ಹೆಚ್ಚಳ

**ಮಂಗಳೂರು:** ಆಟೊ ಎಲ್‌ಪಿಜಿ ಅನಿಲದ ದರ ಏರುಮುಖದಲ್ಲಿದ್ದು, ಆಟೊ ಚಾಲಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬುಧವಾರ ಕೆ.ಜಿ.ಗೆ ₹92 ಪಾವತಿಸಿ ಚಾಲಕರು ಎಲ್‌ಪಿಜಿ ತುಂಬಿಸಿಕೊಂಡರು.

ಯುದ್ಧದ ಪೂರ್ವದಲ್ಲಿ ಎಲ್‌ಪಿಜಿ ದರ ಕೆ.ಜಿ.ಯೊಂದಕ್ಕೆ ₹55 ಇತ್ತು. ನಂತರ ಕೆ.ಜಿ.ಗೆ ₹72.10ಕ್ಕೆ ಹೆಚ್ಚಳವಾಗಿ ₹79ರ ತನಕ ತಲುಪಿತ್ತು. ಮಂಗಳವಾರ ₹80.30 ದರ ಇತ್ತು. ಬುಧವಾರ ಕೆಲ ಬಂಕ್‌ಗಳಲ್ಲಿ ಒಂದು ಕೆ.ಜಿ. ಎಲ್‌ಪಿಜಿ ಇಂಧನದ ದರ ₹92ರಷ್ಟಾಗಿದೆ ಎಂದು ರಿಕ್ಷಾ ಚಾಲಕ ದಾಮೋದರ ಹೇಳಿದರು.

'ಎಲ್‌ಪಿಜಿ ದರ ಏರಿಕೆ, ಅಲಭ್ಯಯಿಂದಾಗಿ ಕೆಲಸವಿಲ್ಲದೆ ಕೂರಬೇಕಿದೆ. ಸಿಎನ್‌ಜಿ, ಪೆಟ್ರೋಲ್ ದರದಲ್ಲಿ ಸ್ಥಿರತೆ ಇದೆ. ಎಲ್‌ಪಿಜಿ ಮಾತ್ರ ಏರಿಕೆ ಏಕೆ' ಎಂದು ಆಟೊರಿಕ್ಷಾ ಯೂನಿಯನ್ ಮುಖಂಡ ಅರುಣ್ ಪ್ರಶ್ನಿಸಿದರು.

## ಡಿಜಿಟಲ್ ವಹಿವಾಟಿಗೆ 2 ಹಂತದ ದೃಢೀಕರಣ ಜಾರಿ

**ನವದೆಹಲಿ (ಪಿಟಿಐ):** ಯುಪಿಐ ವಹಿವಾಟು ಸೇರಿದಂತೆ ಎಲ್ಲ ಡಿಜಿಟಲ್ ವಹಿವಾಟುಗಳಿಗೆ ಎರಡು ಹಂತದ ದೃಢೀಕರಣವು ಬುಧವಾರದಿಂದ ಜಾರಿಗೆ ಬಂದಿದೆ.

ಆನ್‌ಲೈನ್ ಮೂಲಕ ನಡೆಯುವ ಹಣಕಾಸಿನ ವಂಚನೆಗಳನ್ನು ತಡೆಗಟ್ಟಲು ಆರ್‌ಬಿಐ ಈ ಕ್ರಮ ಜಾರಿಗೆ ತಂದಿದೆ.

ಬಳಕೆದಾರರು ಈ ಎರಡೂ ಹಂತಗಳನ್ನು ಪೂರ್ಣಗೊಳಿಸಿದರೆ ಮಾತ್ರ ವಹಿವಾಟು ನಡೆಸಬಹುದಾಗಿದೆ. ಯಾರಾದರೂ ನಿಮ್ಮ ಪಿನ್ ನೋಡಿದರೂ, ಅನಧಿಕೃತ ಪಾವತಿಗಳನ್ನು ಮಾಡಲು ಸಾಧ್ಯವಾಗುವುದಿಲ್ಲ.

ಬ್ಯಾಂಕ್‌ಗಳು, ಬ್ಯಾಂಕೇತರ ಸಂಸ್ಥೆಗಳು ಸೇರಿದಂತೆ ಪಾವತಿ ಸೇವೆ ಒದಗಿಸುವ ಪೂರೈಕೆದಾರರು ಈ ನಿರ್ದೇಶನವನ್ನು ಪಾಲಿಸುವಂತೆ ಆರ್‌ಬಿಐ ತಿಳಿಸಿದೆ.

ಇಂದಿನಿಂದ ಬಳಕೆದಾರರು ಯುಪಿಐ ಪಿನ್ ಅಷ್ಟೇ ನಮೂದಿಸುವ ಮೂಲಕ ವಹಿವಾಟು ಮಾಡಲು ಸಾಧ್ಯವಾಗುವುದಿಲ್ಲ. ಒಟಿಪಿ, ಬೆರಳಚ್ಚು ದೃಢೀಕರಣ ಅಥವಾ ಮುಖಚಹರೆ ಗುರುತಿಸುವ ಮೂಲಕ ವಹಿವಾಟು ನಡೆಸಬೇಕಿದೆ. ಇದಲ್ಲದೆ, ಬ್ಯಾಂಕಿಂಗ್ ಆ್ಯಪ್‌ನಲ್ಲಿ ಬಳಕೆದಾರರು ಸ್ಕ್ರೀನ್‌ಶಾಟ್ ಅಥವಾ ಸ್ಕ್ರೀನ್ ರೆಕಾರ್ಡ್ ಮಾಡಲು ಬರುವುದಿಲ್ಲ ಎಂದು ತಿಳಿಸಿದೆ.

## ಡಿಜಿಟಲ್ ವ್ಯಸನಕ್ಕೆ ಕಡಿವಾಣ: ಅಭಿಪ್ರಾಯ ಆಹ್ವಾನ

ಒಂದನೇ ಪುಟದಿಂದ...

ಈ ಬಗ್ಗೆ ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಡಿಜಿಟಲ್ ಸಾಧನಗಳು ಹಾಗೂ ಸಾಮಾಜಿಕ ಜಾಲತಾಣಗಳು ಯುವಜನರನ್ನು ಆವರಿಸಿಕೊಂಡಿವೆ. ಅದರಲ್ಲೂ ವಿದ್ಯಾರ್ಥಿಗಳು ಡಿಜಿಟಲ್ ವ್ಯಸನದಿಂದ ಕಲಿಕೆಯಲ್ಲಿ ತೊಡಕು ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬಳಕೆಗೆ ಕಡಿವಾಣ ಹಾಕಲು ಮನೋವೈದ್ಯಕೀಯ, ಶಿಕ್ಷಣ ತಜ್ಞರನ್ನು ಒಳಗೊಂಡು ಕಳೆದ ವರ್ಷವೇ ಸಭೆ ನಡೆಸಿ, ಇದರ ದುಷ್ಪರಿಣಾಮದ ಬಗ್ಗೆ ಚರ್ಚಿಸಲಾಗಿತ್ತು. ಈಗ ಕರಡು ನೀತಿ ಪ್ರಕಟಿಸಲಾಗಿದ್ದು, ಸಾರ್ವಜನಿಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು. ಸಲಹೆಗಳ ಅನುಸಾರ ಈ ನೀತಿಯಲ್ಲಿ ಕೆಲ ಮಾರ್ಪಾಡು ಮಾಡುತ್ತೇವೆ' ಎಂದರು.

'ಅತಿಯಾದ ಮತ್ತು ಅನಿಯಂತ್ರಿತ ತಂತ್ರಜ್ಞಾನ ಬಳಕೆಯಿಂದ, ಪ್ರತಿ ನಾಲ್ಕು ಮಕ್ಕಳಲ್ಲಿ ಒಂದು ಮಗು ಆತಂಕ, ಉದ್ವಿಗ್ನತೆ, ನಿದ್ರಾಹೀನತೆ, ಏಕಾಗ್ರತೆ ಕೊರತೆಯಂತಹ ಸಮಸ್ಯೆ ಎದುರಿಸುತ್ತಿದೆ. ಡಿಜಿಟಲ್ ತಂತ್ರಜ್ಞಾನ ಮಕ್ಕಳ ಮೇಲೆ ವೇಗವಾಗಿ ಪರಿಣಾಮ ಬೀರಿದ ಕಾರಣ, ಈ ಬಗ್ಗೆ ಅಧ್ಯಯನ ನಡೆಸಲು ಕೂಡ ಸಾಕಷ್ಟು ಸಮಯ ಸಿಗಲಿಲ್ಲ' ಎಂದು ಹೇಳಿದರು.

**ಕರಡು ನೀತಿ ರಚನೆಯ ಉದ್ದೇಶ**

- ಡಿಜಿಟಲ್ ಸಾಕ್ಷರತೆ ಮತ್ತು ಜವಾಬ್ದಾರಿಯುತ ಬಳಕೆ
- ತಂತ್ರಜ್ಞಾನ ವ್ಯಸನ ಮತ್ತು ಸಂಬಂಧಿತ ಮಾನಸಿಕ ಸಮಸ್ಯೆಗಳ ಕಡಿತ
- ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿ ಗುರುತಿಸುವಿಕೆ ಮತ್ತು ಸಮಯೋಚಿತ ಮಧ್ಯಸ್ಥಿಕೆ
- ಶಾಲೆ–ಪೋಷಕರ ಸಹಕಾರ ಬಲಪಡಿಸುವಿಕೆ
- ಸುರಕ್ಷಿತ ಮತ್ತು ಆರೋಗ್ಯಕರ ತಂತ್ರಜ್ಞಾನ ಪರಿಸರ

'ಡಿಜಿಟಲ್ ಸಾಧನ ಹಾಗೂ ಸಾಮಾಜಿಕ ಜಾಲತಾಣಗಳಿಗೆ ಕಡಿವಾಣ ಹಾಕಲು ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಶಾಲೆಗಳು ಹಾಗೂ ಸರ್ಕಾರ ಒಟ್ಟಾಗಿ ಕ್ರಮ ಕೈಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಕರಡು ನೀತಿ ರೂಪಿಸಲಾಗಿದೆ. ಡಿಜಿಟಲ್ ಸಾಕ್ಷರತೆ, ಶಿಕ್ಷಕರಿಗೆ ತರಬೇತಿ, ಮಾನಸಿಕ ಅನಾರೋಗ್ಯ ಸಮಸ್ಯೆಗಳನ್ನು ಗುರುತಿಸುವಿಕೆ ಸೇರಿ ಹಲವು ಅಂಶಗಳನ್ನು ಈ ನೀತಿ ಒಳಗೊಂಡಿದೆ' ಎಂದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

5ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕೆ.ಸಿ. ಬೆಟ್ಟಸ್ವಾಮಿಗೌಡ
ಸಂಪಂಗಿರಾಮ ಬಸ್ ಮಾಲೀಕರು
ಅಧ್ಯಕ್ಷರು, ಕರ್ನಾಟಕ ಅರ್ಬನ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ, ಬೆಂಗಳೂರು
ನೀವಿರುವಿರಿ ಎಂದೆಂದಿಗೂ ನಮ್ಮ ಮನದಲ್ಲಿ...
ಸದಾ ನಿಮ್ಮ ನೆನಪಿನಲ್ಲಿರುವ: ಪತ್ನಿ, ಮಕ್ಕಳು, ಮೊಮ್ಮಕ್ಕಳು, ಕುಟುಂಬದವರು ಮತ್ತು ಬಂಧುಗಳು

ಎಂಟನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕಿರಣ್ ಕುಮಾರ್. ಸಿ
(ಮಾಲೀಕರು ಪಾರ್ವತಿ ಸೂಪರ್ ಫ್ಯೂಲ್ಸ್, ಬಿಡದಿ)
ದಿ. ಶ್ರೀ ಪಾರ್ವತಮ್ಮ ಮತ್ತು ದಿ. ಶ್ರೀ ಚನ್ನಯ್ಯ (ನಿವೃತ್ತ ಅರಣ್ಯಾಧಿಕಾರಿ) ಇವರ ದ್ವಿತೀಯ ಪುತ್ರ (02-04-2018)
ಇಂತಿ ದುಃಖತಪ್ತರು: ಪತ್ನಿ, ಮಗ, ಕುಟುಂಬದವರು ಹಾಗೂ ಪೆಟ್ರೋಲ್ ಬಂಕ್ ಸಿಬ್ಬಂದಿ ವರ್ಗ
ಮೊ: 9902230350, 9845010161

## ಎಂಆರ್‌ಪಿಎಲ್: ಉತ್ಪಾದನೆ ಪ್ರಮಾಣ ಹೆಚ್ಚಳ
# ನಿತ್ಯ 45 ಲಕ್ಷ ಕೆ.ಜಿ. ಎಲ್‌ಪಿಜಿ ಉತ್ಪಾದನೆ

ಪ್ರಜಾವಾಣಿ ವಾರ್ತೆ

**ಮಂಗಳೂರು:** 'ಇರಾನ್–ಇಸ್ರೇಲ್ ಯುದ್ಧ ಶುರುವಾದ ನಂತರ ಮಂಗಳೂರು ರಿಫೈನರಿ ಮತ್ತು ಪೆಟ್ರೊ ಕೆಮಿಕಲ್ಸ್ (ಎಂಆರ್‌ಪಿಎಲ್) ಸಂಸ್ಥೆಯು ಎಲ್‌ಪಿಜಿ ಉತ್ಪಾದನೆ ಪ್ರಮಾಣ ಹೆಚ್ಚಿಸಿದ್ದು, ನಿತ್ಯ 45 ಲಕ್ಷ ಕೆ.ಜಿ ಉತ್ಪಾದಿಸಲಾಗುತ್ತಿದೆ' ಎಂದು ಕಂಪನಿಯ ನಿರ್ದೇಶಕ (ರಿಫೈನರಿ) ನಂದಕುಮಾರ್ ವಿ.ಪಿಳ್ಳೈ ಇಲ್ಲಿ ತಿಳಿಸಿದರು.

ನವಮಂಗಳೂರು ಬಂದರು ಪ್ರಾಧಿಕಾರ ಇಲ್ಲಿ ಬುಧವಾರ ಏರ್ಪಡಿಸಿದ್ದ 'ಸಾಗರದ ಪ್ರತಿಕೂಲತೆಗಳು ಹಾಗೂ ಅವುಗಳ ನಿರ್ವಹಣೆಯಲ್ಲಿ ಪಾಲುದಾರ ಸಂಸ್ಥೆಗಳ ಪಾತ್ರ' ಕುರಿತ ವಿಚಾರಸಂಕಿರಣದಲ್ಲಿ ಮಾತನಾಡಿದ ಅವರು, ಯುದ್ಧಕ್ಕೆ ಮುನ್ನ ನಿತ್ಯ 35 ಲಕ್ಷ ಕೆ.ಜಿ ಎಲ್‌ಪಿಜಿ ಉತ್ಪಾದಿಸಲಾಗುತ್ತಿತ್ತು ಎಂದು ತಿಳಿಸಿದರು.

'ಎಂಆರ್‌ಪಿಎಲ್ ಸಂಸ್ಕರಣಾ ಘಟಕಗಳು ಶೇ 120ರಷ್ಟು ಹೆಚ್ಚಿನ ಸಾಮರ್ಥ್ಯದೊಂದಿಗೆ ಕಾರ್ಯ ನಿರ್ವಹಿಸುತ್ತಿವೆ. ಎಲ್‌ಪಿಜಿ ಉತ್ಪಾದನೆಯನ್ನು ಶೇ 30ರಷ್ಟು ಹೆಚ್ಚಿಸಲಾಗಿದೆ' ಎಂದರು.

'ದೇಶದ ಮಹತ್ವದ ಮೂಲಸೌಕರ್ಯವಾಗಿರುವ ಎಂಆರ್‌ಪಿಎಲ್ ಕಾರ್ಯಾಚರಣೆಗೆ ಕಚ್ಚಾತೈಲದ ಕೊರತೆಯಿಂದಾಗಿ ಧಕ್ಕೆ ಆಗಬಾರದು ಎಂಬ ಕಾರಣಕ್ಕೆ ಜಗತ್ತಿನಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿಂದ ಕಚ್ಚಾತೈಲವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ' ಎಂದು ಹೇಳಿದರು.

**ಮತ್ತೆರಡು ಹಡಗು ಮಂಗಳೂರಿನತ್ತ**

**ಮಂಗಳೂರು:** 'ಅರೋರಾ' ಹಡಗು ಹಾಗೂ 'ಅಲ್ ಐನ್' ಎಂಬ ಹಡಗುಗಳು ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ತುಂಬಿಕೊಂಡು ಮಂಗಳೂರಿನತ್ತ ಪ್ರಯಾಣ ಬೆಳೆಸಿದ್ದು, ಇದೇ 2ರಂದು (ಗುರುವಾರ) ನವಮಂಗಳೂರು ಬಂದರನ್ನು ತಲುಪುವ ನಿರೀಕ್ಷೆ ಇದೆ.

'ಅರೋರಾ ಹಡಗಿನಲ್ಲಿ 43,910 ಟನ್ ಎಲ್‌ಪಿಜಿ ಇದ್ದು, ಇದನ್ನು ಕಾನ್ಫಿಡೆನ್ಸ್ ಪೆಟ್ರೋಲಿಯಂ ಸಂಸ್ಥೆಯು ತರಿಸಿಕೊಂಡಿದೆ. ಆಲ್ ಐನ್ ಹಡಗು 23,000 ಟನ್ ಎಲ್‌ಪಿಜಿಯನ್ನು ಸಾಗಿಸುತ್ತಿದೆ. ಈ ಹಡಗಿನಲ್ಲಿರುವ ಎಲ್‌ಪಿಜಿಯು ಎಚ್‌ಪಿಸಿಎಲ್, ಐಒಸಿಎಲ್ ಹಾಗೂ ಬಿಪಿಸಿಎಲ್ ಸಂಸ್ಥೆಗಳಿಗೆ ಹಂಚಿಕೆಯಾಗಲಿದೆ' ಎಂದು ನವಮಂಗಳೂರು ಬಂದರು ಪ್ರಾಧಿಕಾರ (ಎನ್‌ಎಂಪಿಎ) ಮೂಲಗಳು ತಿಳಿಸಿವೆ.

# ಜಿಎಸ್‌ಟಿ: ₹2 ಲಕ್ಷ ಕೋಟಿ ಸಂಗ್ರಹ

## 2025–26ರ ಏಪ್ರಿಲ್‌ನಿಂದ ಮಾರ್ಚ್‌ವರೆಗೆ ₹22.27 ಲಕ್ಷ ಕೋಟಿ ಸಂಗ್ರಹ

**ನವದೆಹಲಿ (ಪಿಟಿಐ):** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಮಾರ್ಚ್ ತಿಂಗಳಿನಲ್ಲಿ ₹2 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಇದು ಈ ಆರ್ಥಿಕ ವರ್ಷದಲ್ಲಿ ಮೂರನೇ ಅತಿದೊಡ್ಡ ಮಾಸಿಕ ಸಂಗ್ರಹವಾಗಿದೆ.

ಕಳೆದ ವರ್ಷದ ಮಾರ್ಚ್‌ನಲ್ಲಿ ₹1.83 ಲಕ್ಷ ಕೋಟಿ ಸಂಗ್ರಹವಾಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ವರಮಾನ ಸಂಗ್ರಹವು ಶೇ 8.8ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಆಮದು ಮಾಡಿಕೊಂಡ ಸರಕುಗಳಿಂದ ಬಂದ ವರಮಾನದಲ್ಲಿ ಏರಿಕೆಯಾಗಿರುವುದು, ದೇಶದ ಮಾರುಕಟ್ಟೆಯಲ್ಲಿ ಮಾರಾಟ ಮತ್ತು ಖರೀದಿ ಹೆಚ್ಚಳ ಆಗಿರುವುದು ಜಿಎಸ್‌ಟಿ ಸಂಗ್ರಹ ಜಾಸ್ತಿ ಆಗಿರುವುದಕ್ಕೆ ಕಾರಣ ಎಂದು ತಿಳಿಸಿದೆ.

ದೇಶದ ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನದಲ್ಲಿ ಶೇ 5.9ರಷ್ಟು ಹೆಚ್ಚಳವಾಗಿ, ₹1.46 ಲಕ್ಷ ಕೋಟಿ ಆಗಿದೆ. ಆಮದು ಸರಕುಗಳಿಂದ ಬಂದ ವರಮಾನದಲ್ಲಿ ಶೇ 17.8ರಷ್ಟು ಏರಿಕೆಯಾಗಿದ್ದು, ₹53,861 ಕೋಟಿ ಆಗಿದೆ. ಒಟ್ಟು ಮರುಪಾವತಿಯು ₹22,074 ಕೋಟಿಯಾಗಿದ್ದು, ಶೇ 13.8ರಷ್ಟು ಹೆಚ್ಚಳವಾಗಿದೆ.

ಮರುಪಾವತಿ ಬಳಿಕ ನಿವ್ವಳ ಜಿಎಸ್‌ಟಿ ವರಮಾನ ₹1.78 ಲಕ್ಷ ಕೋಟಿಯಾಗಿದ್ದು, ಹಿಂದಿನ ವರ್ಷದ ಮಾರ್ಚ್‌ಗೆ ಹೋಲಿಸಿದರೆ ಶೇ 8.2ರಷ್ಟು ಏರಿಕೆಯಾಗಿದೆ.

2025–26ರ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಮಾರ್ಚ್‌ವರೆಗೆ ಒಟ್ಟು ಜಿಎಸ್‌ಟಿ ಸಂಗ್ರಹ ₹22.27 ಲಕ್ಷ ಕೋಟಿಯಾಗಿದ್ದು, ಶೇ 8.3ರಷ್ಟು ಏರಿಕೆ ಆಗಿದೆ. ಮರುಪಾವತಿ ಹಂಚಿಕೆ ಬಳಿಕ ವರಮಾನವು ₹19.34 ಲಕ್ಷ ಕೋಟಿಯಾಗಿದ್ದು, ಶೇ 7.1ರಷ್ಟು ಬೆಳವಣಿಗೆ ದಾಖಲಿಸಿದೆ.

ಏಪ್ರಿಲ್‌ನಲ್ಲಿ ಅತ್ಯಧಿಕ ₹2.36 ಲಕ್ಷ ಕೋಟಿ ಮತ್ತು ಮೇ ತಿಂಗಳಿನಲ್ಲಿ ₹2.01 ಲಕ್ಷ ಕೋಟಿ ಸಂಗ್ರಹವಾಗಿತ್ತು. ಇದು ಈ ಆರ್ಥಿಕ ವರ್ಷದಲ್ಲಿ ಅತಿ ಹೆಚ್ಚು ವರಮಾನ ಸಂಗ್ರಹವಾದ ತಿಂಗಳಾಗಿವೆ. ಇದೀಗ ಮಾರ್ಚ್‌ನಲ್ಲಿ ₹2 ಲಕ್ಷ ಕೋಟಿ ಸಂಗ್ರಹವಾಗಿದೆ.

ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಜಿಎಸ್‌ಟಿ ದರ ಪರಿಷ್ಕರಣೆ ಆಯಿತು. ಇದರಿಂದ ನವೆಂಬರ್ ತಿಂಗಳಿನಲ್ಲಿ ಜಿಎಸ್‌ಟಿ ಸಂಗ್ರಹ ಇಳಿಕೆಯಾಗಿ, ₹1.70 ಲಕ್ಷ ಕೋಟಿ ಸಂಗ್ರಹವಾಗಿತ್ತು. ಡಿಸೆಂಬರ್‌ಗೆ ಸಂಗ್ರಹವು ಏರಿಕೆಯಾಗಿ, ₹1.74 ಲಕ್ಷ ಕೋಟಿಯಷ್ಟಾಯಿತು.

ಮಹಾರಾಷ್ಟ್ರ, ಕರ್ನಾಟಕ ಮತ್ತು ತೆಲಂಗಾಣದಂತಹ ದೊಡ್ಡ ರಾಜ್ಯಗಳು ಸಂಗ್ರಹದಲ್ಲಿ ಸದೃಢ ಏರಿಕೆ ಕಂಡಿವೆ. ಹರಿಯಾಣ, ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶದಲ್ಲಿ ಸಂಗ್ರಹವು ನಿಧಾನವಾಗಿ ಪ್ರಗತಿ ಕಂಡಿದೆ ಎಂದು ತಿಳಿಸಿದೆ.




# 'ಹೊರ್ಮುಜ್ ತೆರೆದರೆ ಕದನ ವಿರಾಮ'

## ಯುದ್ಧ ಮುಗಿಸುವುದಾಗಿ ಹೇಳಿದ ಬೆನ್ನಲ್ಲೇ ಇರಾನ್ ವಿರುದ್ಧ ಟ್ರಂಪ್ ವಾಗ್ದಾಳಿ

**ವಾಷಿಂಗ್ಟನ್ (ಎಪಿ):** 'ಇರಾನ್‌ನ ಅಧ್ಯಕ್ಷರು ಕದನ ವಿರಾಮ ಬಯಸುತ್ತಿದ್ದಾರೆ. ಆದರೆ ಹೊರ್ಮುಜ್ ಜಲಸಂಧಿ ಸಂಚಾರಕ್ಕೆ ಮುಕ್ತವಾದ ಬಳಿಕವಷ್ಟೇ ಅದು ಸಾಧ್ಯ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಹೇಳಿದ್ದಾರೆ.

'ಅಲ್ಲಿಯವರೆಗೆ ನಾವು ದಾಳಿ ಮುಂದುವರಿಸುತ್ತೇವೆ. ಎಲ್ಲಿಯ ತನಕ ಎಂದರೆ, ಇರಾನ್ ತನ್ನನ್ನು ತಾನು ಮರೆತುಹೋಗುವ ತನಕ ಅಥವಾ ಅವರೇ ಹೇಳಿದಂತೆ ಶಿಲಾಯುಗದ ಸ್ಥಿತಿಗೆ ಮರಳುವ ತನಕ!' ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ. ಟ್ರಂಪ್ ಅವರ ಪೋಸ್ಟ್‌ಗೆ ಇರಾನ್ ತಕ್ಷಣದ ಪ್ರತಿಕ್ರಿಯೆ ನೀಡಿಲ್ಲ.

ಇದಕ್ಕೂ ಮುನ್ನ ಮಾತನಾಡಿದ್ದ ಟ್ರಂಪ್ ಅವರು, ಇರಾನ್ ವಿರುದ್ಧ ನಡೆಸುತ್ತಿರುವ ಸೇನಾ ದಾಳಿಯನ್ನು ಎರಡರಿಂದ ಮೂರು ವಾರಗಳಲ್ಲಿ ಕೊನೆಗೊಳಿಸಬಹುದು' ಎಂದು ಘೋಷಿಸಿದ್ದರು.

'ಒಂದು ವೇಳೆ ಟೆಹರಾನ್ ಕದನ ವಿರಾಮಕ್ಕೆ ಒಪ್ಪದಿದ್ದರೂ, ಇರಾನ್‌ನಿಂದ ಅಣ್ವಸ್ತ್ರ ಸಿದ್ಧಪಡಿಸಲು ಸಾಧ್ಯವಾಗುವುದಿಲ್ಲ ಎಂಬ ವಿಶ್ವಾಸ ಮೂಡಿದ ಬಳಿಕ ನಾವು ಯುದ್ಧದಿಂದ ಹಿಂದೆ ಸರಿಯಬಹುದು' ಎಂದೂ ಅವರು ಹೇಳಿದ್ದರು.

ಅಲ್ಲದೆ, ತೈಲ ಮತ್ತು ಸಾಗಣೆಗಾಗಿ ಹೊರ್ಮುಜ್ ಜಲಸಂಧಿಯನ್ನು ಅವಲಂಬಿಸಿರುವ ದೇಶಗಳಿಗೇ ಆ ಜಲಸಂಧಿಯ ಜವಾಬ್ದಾರಿಯನ್ನು ವರ್ಗಾಯಿಸುವುದಾಗಿ ಅವರು ತಿಳಿಸಿದ್ದರು.

**ಬೆದರಿಕೆ ಸಲ್ಲ–ಇರಾನ್:** 'ಇರಾನ್ ಜನರಿಗೆ ಬೆದರಿಕೆ ಹಾಕುವ ಅಥವಾ ಗಡುವು ವಿಧಿಸುವ ಧಾಟಿಯಲ್ಲಿ ಮಾತನಾಡುವುದು ಸರಿಯಲ್ಲ. ಅದನ್ನು ಇರಾನ್ ಜನ ಸಹಿಸುವುದಿಲ್ಲ' ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಎಚ್ಚರಿಸಿದ್ದಾರೆ.

**ಅಮೆರಿಕ ವಿಶ್ವಾಸಾರ್ಹ ದೇಶವಲ್ಲ:** 'ಅಮೆರಿಕದ ಜತೆಗಿನ ಮಾತುಕತೆಗಳಿಂದ ಯಾವುದೇ ಫಲಿತಾಂಶ ಸಿಗುತ್ತದೆ ಎಂಬ ವಿಶ್ವಾಸವಿಲ್ಲ. ಏಕೆಂದರೆ ಆ ದೇಶವು ವಿಶ್ವಾಸಕ್ಕೆ ಅರ್ಹವಲ್ಲ' ಎಂದು ಅರಾಘ್ಚಿ ಕಟುವಾಗಿ ಹೇಳಿದ್ದಾರೆ.

ಇಸ್ರೇಲ್ ದಾಳಿಯಲ್ಲಿ ಮೃತಪಟ್ಟ ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಕೋರ್‌ನ ನೌಕಾಪಡೆಯ ಮುಖ್ಯಸ್ಥ ಅಲಿರೇಜಾ ತಂಕಸೀರಿ ಅವರ ಅಂತ್ಯಕ್ರಿಯೆಗೂ ಮುನ್ನ ಬುಧವಾರ ಟೆಹರಾನ್‌ನಲ್ಲಿ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ
–ಎಪಿ ಚಿತ್ರ

### ತಾಯ್ನಾಡಿಗೆ ಮರಳುತ್ತಿರುವ 1,171 ಭಾರತೀಯರು

**ನವದೆಹಲಿ (ಪಿಟಿಐ):** ಪಶ್ಚಿಮ ಏಷ್ಯಾದ ಸಂಘರ್ಷದಿಂದಾಗಿ ಇರಾನ್‌ನಲ್ಲಿ ಸಿಲುಕಿರುವ ಭಾರತೀಯ ಪ್ರಜೆಗಳ ಪೈಕಿ 1,171 ಜನರು ಅರ್ಮೇನಿಯಾ ಮತ್ತು ಅಜರ್‌ಬೈಜಾನ್ ಭೂ ಗಡಿ ದಾಟಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಬುಧವಾರ ತಿಳಿಸಿದೆ.

ಅರ್ಮೇನಿಯಾ ಭೂ ಗಡಿಯನ್ನು 977 ಹಾಗೂ ಅಜರ್‌ಬೈಜಾನ್ ಅನ್ನು 194 ಜನರು ದಾಟಿದ್ದಾರೆ ಎಂದು ಅದು ಹೇಳಿದೆ.

### ಉಕ್ಕು ತಯಾರಿಕಾ ಘಟಕಗಳ ಮೇಲೆ ದಾಳಿ

**ಟೆಹರಾನ್ (ಎಪಿ):** ಇಸ್ರೇಲ್ ಮತ್ತು ಅಮೆರಿಕ ಪಡೆಗಳು ಇರಾನ್‌ನ ಉಕ್ಕು ತಯಾರಿಕಾ ಘಟಕಗಳು, ರಾಸಾಯನಿಕ ತಯಾರಿಕಾ ಘಟಕಗಳನ್ನು ಗುರಿಯಾಗಿಸಿ ಬುಧವಾರ ದಾಳಿಗಳನ್ನು ನಡೆಸಿವೆ. ಇರಾನ್‌ನ ಮಧ್ಯ ಮತ್ತು ನೈರುತ್ಯ ಭಾಗದಲ್ಲಿರುವ ಉಕ್ಕಿನ ಕಾರ್ಖಾನೆಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸಿದ್ದು, ಉತ್ಪಾದನಾ ಘಟಕಗಳಿಗೆ ಹಾನಿಯಾಗಿದೆ.

**'ಫೆಂಟಾನಿಲ್' ಸ್ಥಾವರದ ಮೇಲೆ ದಾಳಿ:** ಇರಾನ್‌ನ 'ಫೆಂಟಾನಿಲ್' ರಾಸಾಯನಿಕ ಉತ್ಪಾದಿಸುವ ಸ್ಥಾವರವನ್ನು ದಾಳಿಯಲ್ಲಿ ಹೊಡೆದಿರುವುದಾಗಿ ಇಸ್ರೇಲ್ ಹೇಳಿಕೊಂಡಿದೆ.

**ಮಾಜಿ ರಾಯಭಾರ ಕಚೇರಿ ಮೇಲೆ ದಾಳಿ:** ಇರಾನ್‌ನ ರಾಜಧಾನಿ ಟೆಹರಾನ್‌ನಲ್ಲಿನ ಮಾಜಿ ಅಮೆರಿಕ ರಾಯಭಾರ ಕಚೇರಿಯ ಆವರಣದ ಮೇಲೂ ವಾಯುದಾಳಿ ನಡೆದಿದೆ. ದಾಳಿಯಲ್ಲಿ ಕಟ್ಟಡದ ಕಿಟಕಿಗಳು ಸ್ಫೋಟಗೊಂಡಿವೆ ಮತ್ತು ಗೋಡೆ ಹಾನಿಗೊಳಗಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ. 9964322833.

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

General

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ. ಬೆಂಗಳೂರು-76 ಸಂಬಳ: 17,000/- ರಿಂದ 25,000/- ತಕ್ಷಣ ಸಂಪರ್ಕಿಸಿ: 9008835841, 9148525233

ರಾಜ್ಯಾದ್ಯಂತ ಮ್ಯಾಕ್ ಡೊನಲ್ಡ್, ಟಾಟಾಗೆ ಅಭ್ಯರ್ಥಿಗಳು ಸಂಬಳ 30000 - 60000 ಉಚಿತ ವಸತಿಯೂಟವಿರುತ್ತದೆ. ಕರ್ನಾಟಕ ಉದ್ಯೋಗ (ಸರ್ಕಾರಿ ನೋಂದಾಯಿತ) ಸಂಪರ್ಕಿಸಿ: 080-29909699, 9606155699.

ಪ್ರವಾಸ

Travel

ಶ್ರೀಮಹದೇಶ್ವರ ಟೂರ್ಸ್ & ಟ್ರಾವೆಲ್ಸ್. 18.4.2026 13ದಿನಗಳು/ 1.5.2026 14ದಿನಗಳು ಚಾರ್ಧಮ್ ಯಾತ್ರೆ (ಸೀಮಿತ ಸೀಟುಗಳು ಮಾತ್ರ ಲಭ್ಯವಿದೆ) ಸಂಪರ್ಕಿಸಿ: 9611801143, 9845088455.

TRAVEL CORNER

Orchid TRAVEL & TOURS ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
ಬ್ಯೂಟಿಫುಲ್ ಬಾಲಿ
Bali 6 Days Tour (Indonesia Special)
8 ದಿನಗಳ ಮುಕ್ತಿನಾಥ–ನೇಪಾಳ ವಿಶೇಷ
13 ದಿನಗಳ ಚಾರಧಾಮ್ ಯಾತ್ರೆ
14 ದಿನಗಳ ಕೈಲಾಸ ಮಾನಸ ಸರೋವರ ಯಾತ್ರೆ
14 Days Kailasa Manasa Sarovar Yathra
For Bookings contact :
9900080793 / 9900093615 / 9880079588

EDUCATION
To Place your Classified Ads Contact:
9845114560

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

## ಏ.10ಕ್ಕೆ 'ಕ್ಯಾಲೆಂಡರ್' ತೆರೆಗೆ

**ಆದರ್ಶ ಗುಂಡುರಾಜ್** ನಟನೆಯ 'ಕ್ಯಾಲೆಂಡರ್' ಏ.10ಕ್ಕೆ ತೆರೆ ಕಾಣಲಿದೆ. ಚಿತ್ರ ಏ.3 ರಂದು ತೆರೆಗೆ ಬರಲಿದೆ ಎಂದು ಚಿತ್ರತಂಡ ಈ ಮೊದಲು ಘೋಷಿಸಿತ್ತು. ಆದರೆ ಅನಿವಾರ್ಯ ಕಾರಣದಿಂದ ಚಿತ್ರ ಬಿಡುಗಡೆಯನ್ನು ಒಂದು ವಾರ ಮುಂದೂಡಿರುವುದಾಗಿ ತಂಡ ಹೇಳಿದೆ. ಈ ಚಿತ್ರಕ್ಕೆ ನವೀನ್ ಶಕ್ತಿ ನಿರ್ದೇಶನವಿದೆ.

'ವರ್ಷಗಳು ಉರುಳುತ್ತಿರುತ್ತವೆ. ಆದರೆ ದಿನವನ್ನು ಗುರುತಿಸಲು ನಮಗೆ 'ಕ್ಯಾಲೆಂಡರ್' ಬೇಕು. ಶೀರ್ಷಿಕೆಗೂ ಹಾಗೂ ಚಿತ್ರದ ಕಥೆಗೂ ಸಂಬಂಧವಿದೆ. ನಾನೇ ಚಿತ್ರಕ್ಕೆ ಕಥೆ ಬರೆದು ನಿರ್ಮಾಣ ಮಾಡಿದ್ದೇನೆ. ಹೆಣ್ಣುಮಕ್ಕಳಿಗಂತೂ ಈ ಕಥೆ ಬಹಳ ಹತ್ತಿರವಾಗುತ್ತದೆ' ಎನ್ನುತ್ತಾರೆ ಆದರ್ಶ ಗುಂಡುರಾಜ್.

ರಮೇಶ್ ಕೊಯಿರಾ ಛಾಯಾಚಿತ್ರಗ್ರಹಣ, ಸುನಾದ್ ಗೌತಮ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಸುಶ್ಮಿತಾ ಹಾಗೂ ನಿವಿಷ್ಕಾ ಪಾಟೀಲ್ ನಾಯಕಿಯರು. ವಿಶೇಷ ಪಾತ್ರದಲ್ಲಿ ಮಾಲಾಶ್ರೀ ನಟಿಸಿದ್ದಾರೆ. ರಮೇಶ್ ಇಂದಿರಾ, ಪ್ರಮೋದ್ ಶೆಟ್ಟಿ, ಪ್ರಕಾಶ್ ತುಮಿನಾಡು, ಸುಚೇಂದ್ರ ಪ್ರಸಾದ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

ನಿವಿಷ್ಕಾ ಪಾಟೀಲ್

ಚಿತ್ರದ ಪೋಸ್ಟರ್

## ಬಹು ನಿರೀಕ್ಷಿತ ಪೇಟ್ರಿಯಾಟ್ ಬಿಡುಗಡೆ ಮುಂದಕ್ಕೆ

**ಮಮ್ಮುಟಿ,** ಮೋಹನ್ ಲಾಲ್ ನಟನೆಯ ಬಹು ನಿರೀಕ್ಷಿತ ಚಿತ್ರ 'ಪೇಟ್ರಿಯಾಟ್' ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಏ.23ಕ್ಕೆ ತೆರೆ ಕಾಣಬೇಕಿತ್ತು. ಆದರೆ ಸಿನಿಮಾ ಈ ದಿನಾಂಕದಂದು ತೆರೆ ಕಾಣುತ್ತಿಲ್ಲ ಎಂದು ನಿರ್ಮಾಣ ಸಂಸ್ಥೆಯಾದ ಆಂಟೋ ಜೋಸೆಫ್ ಫಿಲ್ಮ್ ಕಂಪನಿ ಹೇಳಿದೆ.

'ಅತ್ಯುತ್ತಮ ಗುಣಮಟ್ಟದೊಂದಿಗೆ ಸಿನಿಮಾವನ್ನು ತೆರೆಯ ಮೇಲೆ ತರುವ ಕೆಲಸ ನಡೆಯುತ್ತಿದೆ. ಹೀಗಾಗಿ ಸಿನಿಮಾ ಬಿಡುಗಡೆ ತುಸು ವಿಳಂಬವಾಗುತ್ತಿದೆ. ಹಾಗಂತ ಹೆಚ್ಚು ದಿನ ಕಾಯಿಸುವುದಿಲ್ಲ. ಬದಲಿ ದಿನಾಂಕವನ್ನು ಶೀಘ್ರದಲ್ಲಿಯೇ ಘೋಷಿಸುತ್ತೇವೆ' ಎಂದು ಸಂಸ್ಥೆಯ ಅಧಿಕೃತ ಪ್ರಕಟಣೆ ತಿಳಿಸಿದೆ.

ಮಲಯಾಳ ಚಿತ್ರರಂಗದ ದಿಗ್ಗಜರೆನಿಸಿರುವ ಮಮ್ಮುಟಿ, ಮೋಹನ್ ಲಾಲ್ ಹಲವು ವರ್ಷಗಳ ಬಳಿಕ ಮತ್ತೆ ಒಟ್ಟಾಗಿ ಕಾಣಿಸಿಕೊಂಡಿರುವ ಚಿತ್ರವಿದು. ಹೀಗಾಗಿ ಸಿನಿಮಾ ಕುರಿತು ನಿರೀಕ್ಷೆ ಹೆಚ್ಚಿದೆ. ದೇಶಭಕ್ತಿಯ ಕುರಿತಾದ ಆ್ಯಕ್ಷನ್, ಥ್ರಿಲ್ಲರ್ ಕಥೆಯನ್ನು ಹೊಂದಿರುವ ಸಿನಿಮಾಗೆ 'ಟೇಕಾಫ್', 'ಮಾಲೀಕ್'ನಂಥ ಸೂಪರ್ ಹಿಟ್ ಚಿತ್ರಗಳನ್ನು ನೀಡಿದ ಮಹೇಶ್ ನಾರಾಯಣ್ ನಿರ್ದೇಶನವಿದೆ. ಫಹಾದ್ ಫಾಸಿಲ್, ನಯನ ತಾರಾ, ಕುಂಚಾಕೋ ಬೋಬನ್ ಮುಂತಾದವರು ಚಿತ್ರದಲ್ಲಿದ್ದಾರೆ. ಬೃಹತ್ ಬಜೆಟ್‌ನಲ್ಲಿ ಸಿದ್ಧಗೊಂಡಿರುವ ಚಿತ್ರವಿದು.

## 'ಶ್ರೀಕೃಷ್ಣ' ಚಿತ್ರದಲ್ಲಿ ಯಲ್ಲವ್ವನ ಸ್ಮರಣೆ

**ಬಹುತೇಕ** ಹೊಸಬರಿಂದಲೇ ಕೂಡಿರುವ 'ಶ್ರೀಕೃಷ್ಣ' ಚಿತ್ರದ 'ಉದೋ ಉದೋ ಯಲ್ಲವ್ವ...' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಶಂಕರ್‌ರಾಜ ವರ್ಮ ನಟಿಸಿ, ನಿರ್ದೇಶಿಸಿರುವ ಚಿತ್ರವಿದು.

'ಈ ಹಿಂದೆ 'ಬ್ರಹ್ಮರಾಕ್ಷಸ' ಎಂಬ ಚಿತ್ರ ಮಾಡಿದ್ದೆ. ಇದು ನನ್ನ ಎರಡನೇ ಚಿತ್ರ. ಈಗಾಗಲೇ ಚಿತ್ರೀಕರಣ ಮುಗಿದು, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಮೇ ತಿಂಗಳಲ್ಲಿ ಚಿತ್ರ ಬಿಡುಗಡೆ ಆಲೋಚನೆಯಿದೆ. ಮೂವರು ಅನಾಥರ ಜೀವನದಲ್ಲಿ ಏನೆಲ್ಲ ಆಗುತ್ತದೆ ಎಂಬುದನ್ನು ಈ ಚಿತ್ರ ಹೇಳುತ್ತದೆ. ಇಲ್ಲಿ ನಾಯಕಿ ಕೂಡ ಅನಾಥೆ' ಎಂದರು ನಿರ್ದೇಶಕ.

ಹಾಡಿಗೆ ಎಂ.ಎಸ್.ತ್ಯಾಗರಾಜ್ ಸಾಹಿತ್ಯ ಬರೆದು, ಸಂಗೀತ ಸಂಯೋಜಿಸುವುದರ ಜತೆಗೆ ಧ್ವನಿಯಾಗಿದ್ದಾರೆ. ಬೃಹಸ್ಪತಿ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣಗೊಂಡಿದೆ.

ಚೈತ್ರಾ ತೋಟದ ನಾಯಕಿ. ಪ್ರದೀಪ್ ಪೂಜಾರಿ, ಭುವನ್ ಗೌಡ, ಸ್ನೇಹಾ, ಈಶ್ವರ್ ಶೆಟ್ಟಿ ಮುಂತಾದವರು ನಟಿಸಿದ್ದು, ಅನಿರುದ್ಧ ಛಾಯಾಚಿತ್ರಗ್ರಹಣ ಹಾಗೂ ಕೀರ್ತಿರಾಜು ಅವರ ಸಂಕಲನವಿದೆ.

ಚಿತ್ರತಂಡ

### ಚಿಟಿಕೆ ಸುದ್ದಿ

## ಶಾಂತಿ ಪ್ರಕ್ರಿಯೆ ತ್ವರಿತಗೊಳಿಸಿ: ಶಾ ಸೂಚನೆ

ಇಂಫಾಲ(ಪಿಟಿಐ): ಜನಾಂಗೀಯ ಸಂಘರ್ಷಪೀಡಿತ ಮಣಿಪುರದಲ್ಲಿ ಶಾಂತಿ ಸ್ಥಾಪಿಸುವ ಪ್ರಕ್ರಿಯೆಯನ್ನು ಚುರುಕುಗೊಳಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಮಣಿಪುರ ಮುಖ್ಯಮಂತ್ರಿ ಯುಮ್ನಾಮ್ ಖೇಮ್‌ಚಂದ್ ಸಿಂಗ್ ಅವರಿಗೆ ತಿಳಿಸಿದ್ದಾರೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ನವದೆಹಲಿಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಅಮಿತ್ ಶಾ ಅವರು ಮಣಿಪುರದ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಯ ಕುರಿತು ಖೇಮ್‌ಚಂದ್ ಸಿಂಗ್ ಅವರೊಂದಿಗೆ ಚರ್ಚಿಸಿದ್ದಾರೆ ಎಂದು ತಿಳಿಸಿದೆ.

ಅಮಿತ್ ಶಾ ಅವರು, ಮಣಿಪುರಕ್ಕಾಗಿ ಭಾರತೀಯ ಮಹಿಳಾ ಮೀಸಲು ಬೆಟಾಲಿಯನ್ (ಐಆರ್‌ಬಿ) ಸ್ಥಾಪಿಸಲು ತಾತ್ವಿಕವಾಗಿ ಅನುಮೋದನೆ ನೀಡಿದ್ದಾರೆ. ಈ ಔಪಚಾರಿಕ ಪ್ರಸ್ತಾವವನ್ನು ಗೃಹ ಸಚಿವಾಲಯಕ್ಕೆ ಕಳುಹಿಸುವಂತೆ ಖೇಮ್‌ಚಂದ್ ಸಿಂಗ್ ಅವರಿಗೆ ಸೂಚಿಸಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಲೆ. ಜ. ಧೀರಜ್ ಸೇಠ್ ಅಧಿಕಾರ ಸ್ವೀಕಾರ

ನವದೆಹಲಿ(ಪಿಟಿಐ): ಕಳೆದ ವರ್ಷ 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ದಕ್ಷಿಣ ಕಮಾಂಡ್ ಅನ್ನು ಮುನ್ನಡೆಸಿದ್ದ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರು ಭಾರತೀಯ ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ ಬುಧವಾರ ಇಲ್ಲಿ ಅಧಿಕಾರ ಸ್ವೀಕರಿಸಿದರು.

ಸೌತ್ ಬ್ಲಾಕ್‌ನಲ್ಲಿ ನಡೆದ ಸಮಾರಂಭದಲ್ಲಿ ಅಧಿಕಾರ ವಹಿಸಿಕೊಂಡ ಧೀರಜ್ ಅವರು ಹಿರಿಯ ಸೇನಾಧಿಕಾರಿಗಳಿಂದ ಗೌರವ ರಕ್ಷೆ ಸ್ವೀಕರಿಸಿದರು.

ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರು ಜುಲೈ 1, 2024ರಿಂದ ಈ ವರ್ಷದ ಮಾರ್ಚ್ 31ರವರೆಗೆ ದಕ್ಷಿಣ ಕಮಾಂಡ್‌ನ 51ನೇ ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿ ಸೇವೆ ಸಲ್ಲಿಸಿದ್ದಾರೆ.

ಕಳೆದ ವರ್ಷ 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯಲ್ಲಿ ದಕ್ಷಿಣ ಕಮಾಂಡ್ ಅನ್ನು ಸೇಠ್ ಮುನ್ನಡೆಸಿದ್ದರು.

## ನಿರ್ದೇಶಕ ರಂಜಿತ್ ಬಂಧನ


ರಂಜಿತ್

ಕೊಚ್ಚಿ (ಪಿಟಿಐ): ಅತ್ಯಾಚಾರಕ್ಕೆ ಯತ್ನಿಸಿದ ಆರೋಪದಡಿ ಮಲಯಾಳ ಸಿನಿಮಾ ನಿರ್ದೇಶಕ ರಂಜಿತ್ ಅವರನ್ನು ಮಂಗಳವಾರ ತಡರಾತ್ರಿ ಬಂಧಿಸಲಾಗಿದ್ದು, ಸದ್ಯ ನ್ಯಾಯಾಲಯವು ಅವರನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಸಿನಿಮಾ ಸೆಟ್‌ನಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಯತ್ನಿಸಿದ್ದಾಗಿ ಆರೋಪಿಸಿ ನಟಿಯೊಬ್ಬರು ದೂರು ನೀಡಿದ್ದರು. ಈ ಬೆನ್ನಲ್ಲೇ, ಇಡುಕ್ಕಿಯಲ್ಲಿ ರಂಜಿತ್ ಅವರನ್ನು ಬಂಧಿಸಲಾಗಿದೆ.

ಚಿತ್ರೀಕರಣ ಸಂದರ್ಭದಲ್ಲಿ ಕ್ಯಾರಾವಾನ್‌ಗೆ ಕರೆದು ಅತ್ಯಾಚಾರಕ್ಕೆ ಯತ್ನಿಸಿರುವುದಾಗಿ ಮಹಿಳೆ ದೂರಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

**ಮಾಹಿತಿ ಇಲ್ಲ:** 'ರಂಜಿತ್ ಅವರ ಮೇಲಿನ ಆರೋಪದ ಬಗ್ಗೆ ಪೂರ್ಣ ಮಾಹಿತಿ ಇಲ್ಲ' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದರು.

# ರೋಗಿಗಳ ನಿರ್ವಹಣೆಗೆ ವಿಡಿಯೊ ಸರಣಿ

## ಮನೆ ಆಧಾರಿತ ಉಪಶಮನ ಆರೈಕೆಯ ಕನ್ನಡ ಆವೃತ್ತಿ ಜನಾರ್ಪಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕ್ಯಾನ್ಸರ್‌ನಂತಹ ಗಂಭೀರ, ದೀರ್ಘಕಾಲೀನ ಹಾಗೂ ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಮನೆ ಆಧಾರಿತ ಉಪಶಮನ ಆರೈಕೆಯ ನಿರ್ವಹಣೆಗೆ ಕರುಣಾಶ್ರಯ ಸಂಸ್ಥೆಯು ಕನ್ನಡದಲ್ಲಿ ಆ್ಯನಿಮೇಷನ್ ವಿಡಿಯೊಗಳನ್ನು ಸಿದ್ಧಪಡಿಸಿದೆ.

ಸಂಸ್ಥೆಯು ಆರೋಗ್ಯ ಸೌಧದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಈ ವಿಡಿಯೊ ಸರಣಿಯನ್ನು ಜನಾರ್ಪಣೆ ಮಾಡಿದರು. ಈ ಸರಣಿ 17 ವಿಡಿಯೊಗಳನ್ನು ಒಳಗೊಂಡಿದ್ದು, ಸಂಸ್ಥೆಯ ಯೂಟ್ಯೂಬ್ ಚಾನಲ್‌ನಲ್ಲಿ ಪ್ರಸಾರ ಮಾಡಲಾಗುತ್ತಿದೆ.

> ಕೇರಳ ಮಾದರಿಯಲ್ಲಿ ಗೃಹ ಆಧಾರಿತ ಉಪಶಮನ ಆರೈಕೆ ಒದಗಿಸಲು ಆರೋಗ್ಯ ಇಲಾಖೆ ಮುಂದಾಗಿದೆ. ಈ ಆರೈಕೆಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿ ರಚಿಸಲಾಗಿದೆ
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

'ಕರುಣಾಶ್ರಯವು ಇಂಡಿಯನ್ ಕ್ಯಾನ್ಸರ್ ಸೊಸೈಟಿ–ಕರ್ನಾಟಕ ಚಾಪ್ಟರ್ ಮತ್ತು ರೋಟರಿ ಬೆಂಗಳೂರು ಇಂದಿರಾನಗರ ಸಹಯೋಗದಲ್ಲಿ 1994ರಿಂದ ಕ್ಯಾನ್ಸರ್ ರೋಗಿಗಳಿಗೆ ಉಚಿತವಾಗಿ ಉಪಶಮನ ಆರೈಕೆ ಒದಗಿಸುತ್ತಾ ಬಂದಿದೆ. ಕುಂದಲಹಳ್ಳಿ ಗೇಟ್ ಬಳಿ 73 ಹಾಸಿಗೆಗಳ ಚಿಕಿತ್ಸಾ ಸೌಲಭ್ಯ ಹಾಗೂ ಮನೆ ಆರೈಕೆ ಸೇವೆಗಳ ಮೂಲಕ ಈವರೆಗೆ 31,500ಕ್ಕೂ ಹೆಚ್ಚು ರೋಗಿಗಳಿಗೆ ಆರೈಕೆ ಮಾಡಲಾಗಿದೆ' ಎಂದು ಸಂಸ್ಥೆಯ ಪ್ರತಿನಿಧಿಗಳು ವಿವರಿಸಿದರು.

'ರೋಗಿಗಳು ಮನೆಗೆ ಮರಳಿದ ನಂತರ, ಆರೈಕೆ ವೇಳೆ ಕೆಲ ಸವಾಲುಗಳು ಎದುರಾಗುತ್ತವೆ. ಹೆಚ್ಚಾಗಿ ಹುಣ್ಣು, ಸೋಂಕುಗಳು ಕಾಣಿಸಿಕೊಂಡು, ಅವರ ನಿರ್ವಹಣೆ ಕಷ್ಟಸಾಧ್ಯವಾಗಲಿದೆ. ಆದ್ದರಿಂದ ಮನೆಯಲ್ಲಿ ಸುಲಭವಾಗಿ ಆರೈಕೆ ಮಾಡುವ ಬಗ್ಗೆ 17 ವಿಡಿಯೊಗಳನ್ನು ಸಿದ್ಧಪಡಿಸಲಾಗಿದೆ. ಬೆನ್ನು ಆರೈಕೆ, ಹುಣ್ಣು ತಡೆಗಟ್ಟುವಿಕೆ, ಮೂತ್ರಕೋಶದ ಆರೈಕೆ, ಗಾಯಕ್ಕೆ ಔಷಧ ಹಾಕುವುದು ಸೇರಿದಂತೆ ವಿವಿಧ ಅಗತ್ಯ ಆರೈಕೆ ಹಾಗೂ ಕೌಶಲಗಳ ಕುರಿತು ಸರಳ ಮತ್ತು ಪ್ರಾಯೋಗಿಕ ಮಾರ್ಗದರ್ಶನವನ್ನು ವಿಡಿಯೊಗಳು ನೀಡುತ್ತವೆ' ಎಂದು ಹೇಳಿದರು.

'ರಾಜ್ಯದ ರೋಗಿಗಳ ಜೀವನ ಗುಣಮಟ್ಟ ಸುಧಾರಿಸಲು ಈ ವಿಡಿಯೊಗಳು ಸಹಕಾರಿಯಾಗಲಿವೆ. ಮನೆ ಆಧಾರಿತ ಉಪಶಮನ ಆರೈಕೆಯ ಬಲವರ್ಧನೆ ಮಾಡಲಿದೆ. 'Karunashraya BHT' ಯೂಟ್ಯೂಬ್ ಚಾನಲ್‌ನಲ್ಲಿ ವಿಡಿಯೊಗಳು ಲಭ್ಯ' ಎಂದರು.

ಸಂಸ್ಥೆಯ ವೈದ್ಯಕೀಯ ನಿರ್ದೇಶಕ ಡಾ. ನಾಗೇಶ್ ಸಿಮ್ಹಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮ್ಯಾಥ್ಯೂ ಜಾರ್ಜ್ ಚಾಂಡಿ, ಪ್ರಧಾನ ವ್ಯವಸ್ಥಾಪಕ ಗಿರೀಶ್ ಬಿ.ಕೆ., ನರ್ಸಿಂಗ್ ಬೋಧಕಿ ಸಂಗೀತ ಎನ್., ಹಿರಿಯ ಸಂಶೋಧಕಿ ಮೈಥಿಲಿ ನಾರಾಯಣ್, ಆರೋಗ್ಯ ಇಲಾಖೆ ಆಯುಕ್ತ ಗುರುದತ್ತ ಹೆಗಡೆ, ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ವ್ಯವಸ್ಥಾಪಕ ನಿರ್ದೇಶಕ ಅವಿನಾಶ್ ಮೆನನ್ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

### 'ಉಪಶಮನ ಆರೈಕೆಗೆ ಆದ್ಯತೆ'

'ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿಯೂ ಉಪಶಮನ ಆರೈಕೆಗೆ ಆದ್ಯತೆ ನೀಡಲಾಗಿದ್ದು, ತಲಾ ಆರು ಹಾಸಿಗೆಗಳನ್ನು ಮೀಸಲಿಡಲಾಗಿದೆ. ಉಪಶಮನ ಆರೈಕೆಗೆ ಹೊರ ರೋಗಿ ವಿಭಾಗದಲ್ಲಿ ಪ್ರತಿ ವರ್ಷ 87 ಸಾವಿರ ನೋಂದಣಿಯಾಗುತ್ತಿದೆ. ಒಳರೋಗಿ ವಿಭಾಗದಲ್ಲಿ 17 ಸಾವಿರಕ್ಕೂ ಅಧಿಕ ಮಂದಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ. 52 ಸಾವಿರ ಮಂದಿಗೆ ಮನೆ ಆಧಾರಿತ ಚಿಕಿತ್ಸೆ ನೀಡುತ್ತಿದ್ದೇವೆ' ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

'ಅಂತಿಮ ಹಂತದ ಕ್ಯಾನ್ಸರ್ ಸೇರಿ ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿರುವವರು, ಒಂದೇ ಕಡೆ ಮಲಗಿರುವುದರಿಂದ ಹುಣ್ಣು, ಸೋಂಕು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮನೆಗಳಲ್ಲಿ ಅವರ ಆರೈಕೆ ಬಗ್ಗೆ ಅರಿವು ಮೂಡಿಸಬೇಕಿದೆ' ಎಂದರು.

## ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಮಸೂದೆಗೆ 'ತಡೆ'

ಒಂದನೇ ಪುಟದಿಂದ...

ಕೇರಳದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಕ್ರೈಸ್ತ ಮತದಾರರನ್ನು ಸೆಳೆಯಲು ಬಿಜೆಪಿ ವರ್ಷಗಳಿಂದ ಕಸರತ್ತು ನಡೆಸುತ್ತಿದೆ. 'ಒಂದು ವೇಳೆ, ಮಸೂದೆಯನ್ನು ಈಗ ಅಂಗೀಕರಿಸಿದರೆ ರಾಜ್ಯದಲ್ಲಿ ಪಕ್ಷದ ಭವಿಷ್ಯದ ಮೇಲೆ ಹೊಡೆತ ಬೀಳುತ್ತದೆ. ಅದನ್ನು ಸದ್ಯ ಅಂಗೀಕರಿಸಬಾರದು' ಎಂದು ರಾಜ್ಯದ ಬಿಜೆಪಿ ನಾಯಕರು ಕೇಂದ್ರ ನಾಯಕರನ್ನು ಸಂಪರ್ಕಿಸಿದ್ದರು. ಮಸೂದೆಯ ವಿಷಯದಲ್ಲಿ ನಿಧಾನಗತಿಯಲ್ಲಿ ಸಾಗುವಂತೆ ರಾಜ್ಯ ಘಟಕದ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರು ರಾಷ್ಟ್ರೀಯ ನಾಯಕತ್ವವನ್ನು ಒತ್ತಾಯಿಸಿದರು ಎಂದು ಮೂಲಗಳು ತಿಳಿಸಿವೆ.

ಲೋಕಸಭೆ ಕಲಾಪ ಆರಂಭವಾಗುತ್ತಿದ್ದಂತೆ, ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ ಸಂಸದರು ಮಸೂದೆಯ ವಿರುದ್ಧ ಘೋಷಣೆಗಳನ್ನು ಕೂಗಿ ಹಿಂಪಡೆಯುವಂತೆ ಒತ್ತಾಯಿಸಿದರು. ಕಲಾಪ ಪ್ರಾರಂಭವಾಗುವ ಮೊದಲು, ಸಂಸದರು ಸಂಸತ್ ಭವನದ ಮಕರ ದ್ವಾರದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನಡುವೆಯೇ ಸಚಿವ ರಿಜಿಜು, 'ನಾವು ಮಸೂದೆಯನ್ನು ಬುಧವಾರ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ ಹಾಗೂ ಅಂಗೀಕರಿಸುವುದಿಲ್ಲ ಎಂದು ಕಾಂಗ್ರೆಸ್‌ನ ನಾಯಕರಿಗೆ ಈಗಾಗಲೇ ತಿಳಿಸಿದ್ದೇನೆ' ಎಂದು ಸ್ಪಷ್ಟಪಡಿಸಿದರು.

'ಈ ಮಸೂದೆಯು ಯಾವುದೇ ಧರ್ಮಕ್ಕೆ ವಿರುದ್ಧವಾಗಿಲ್ಲ ಅಥವಾ ಯಾವುದೇ ಸಂಘಟನೆಯನ್ನು ಗುರಿಯಾಗಿಸುವ ಉದ್ದೇಶ ಹೊಂದಿಲ್ಲ. ಕೇರಳ ವಿಧಾನಸಭಾ ಚುನಾವಣೆಯ ಕಾರಣದಿಂದಾಗಿ ವಿಪಕ್ಷಗಳು ಮಸೂದೆಯ ವಿರುದ್ಧ ಗುಲ್ಲೆಬ್ಬಿಸುತ್ತಿವೆ' ಎಂದು ಅವರು ಆರೋಪಿಸಿದರು.

ಆದಾಗ್ಯೂ, ಅವರ ಈ ಘೋಷಣೆಯು ಪ್ರತಿಭಟನಾನಿರತ ಸಂಸದರನ್ನು ಸಮಾಧಾನಪಡಿಸಲಿಲ್ಲ. ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ಅವರು ಕಲಾಪವನ್ನು ಮಧ್ಯಾಹ್ನ 12ಕ್ಕೆ ಮುಂದೂಡಿದರು.

> ಮಸೂದೆಯು ಧಾರ್ಮಿಕ ಅಲ್ಪಸಂಖ್ಯಾತರನ್ನು, ವಿಶೇಷವಾಗಿ ಕೇರಳ ಮತ್ತು ದೇಶದಾದ್ಯಂತ ದತ್ತಿ ಚಟುವಟಿಕೆಗಳನ್ನು ನಡೆಸುತ್ತಿರುವ ಕ್ರೈಸ್ತ ಸಮುದಾಯವನ್ನು ಗುರಿಯಾಗಿಸಿಕೊಂಡಿದೆ
> **ಎನ್.ಕೆ.ಪ್ರೇಮಚಂದ್ರನ್,** ಆರ್‌ಎಸ್‌ಪಿ ಸಂಸದ

> ಈ ಮಸೂದೆಯು ಕಠೋರವಾಗಿದ್ದು ಅಲ್ಪಸಂಖ್ಯಾತರಷ್ಟೇ ಅಲ್ಲ, ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ಎನ್‌ಜಿಒಗಳ ಹಿತಾಸಕ್ತಿಗಳಿಗೆ ಧಕ್ಕೆ ತರಲಿದೆ. ಅಲ್ಪಸಂಖ್ಯಾತರ ಹಕ್ಕುಗಳನ್ನು ಮೊಟಕುಗೊಳಿಸಲು ಮೋದಿ ಸರ್ಕಾರ ಮತ್ತೊಂದು ಪ್ರಹಾರ ನಡೆಸಿದೆ.
> **ಹಿಬಿ ಈಡನ್,** ಕಾಂಗ್ರೆಸ್ ಸಂಸದ

ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಅವರ 'ಟೈಡ್ಸ್ ಆಫ್ ಟೈಮ್–ಭಾರತ್ಸ್ ಹಿಸ್ಟರಿ ಥ್ರೂ ಮ್ಯೂರಲ್ಸ್ ಇನ್ ಪಾರ್ಲಿಮೆಂಟ್' ಕೃತಿಯನ್ನು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ನವದೆಹಲಿಯ ಸಂವಿಧಾನ ಸದನದಲ್ಲಿ ಬುಧವಾರ ಬಿಡುಗಡೆ ಮಾಡಿದರು. ಲೋಕಸಭಾಧ್ಯಕ್ಷ ಓಂ ಬಿರ್ಲಾ, ಉಪಸಭಾಪತಿ ಹರಿವಂಶ್ ಇದ್ದಾರೆ. ಇದು ಸುಧಾಮೂರ್ತಿ ಅವರ 51ನೇ ಕೃತಿ

## ದಿನಗೂಲಿ ನೌಕರರಿಗೆ ಆರೋಗ್ಯ ವಿಮೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಸರ್ಕಾರದ ವ್ಯಾಪ್ತಿಯ ದಿನಗೂಲಿ ನೌಕರರು ಹಾಗೂ ಅವರ ಅವಲಂಬಿತರಿಗೆ ₹5 ಲಕ್ಷದವರೆಗೆ ಆರೋಗ್ಯ ವಿಮೆ ಸೌಲಭ್ಯವನ್ನು ವಿಸ್ತರಿಸಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಗುತ್ತಿಗೆ, ಹೊರಗುತ್ತಿಗೆ ಹಾಗೂ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ನೌಕರರು ಮತ್ತು ಅವರ ಅವಲಂಬಿತ ಸದಸ್ಯರಿಗೆ ಕಳೆದ ವರ್ಷ ರಾಜ್ಯ ಸರ್ಕಾರವು ₹5 ಲಕ್ಷದವರೆಗೆ ಆರೋಗ್ಯ ವಿಮೆ ಸೌಲಭ್ಯ ಜಾರಿಗೊಳಿಸಿತ್ತು. 3 ಲಕ್ಷ ಸಿಬ್ಬಂದಿ ಈ ವಿಮೆ ವ್ಯಾಪ್ತಿಗೆ ಒಳಪಟ್ಟಿದ್ದರು. ನಗದುರಹಿತ ಚಿಕಿತ್ಸೆ ಒದಗಿಸುವ ಈ ಯೋಜನೆಯನ್ನು ಅರ್ಹ ದಿನಗೂಲಿ ನೌಕರರಿಗೂ ವಿಸ್ತರಿಸುವಂತೆ ಕರ್ನಾಟಕ ರಾಜ್ಯ ಸರ್ಕಾರಿ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಸರ್ಕಾರಕ್ಕೆ ಮನವಿ ಮಾಡಿತ್ತು. ಅದರಂತೆ ಈಗ ಯೋಜನೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ.

## ರಾಷ್ಟ್ರಪತಿ ಅಂಕಿತ

ನವದೆಹಲಿ (ಪಿಟಿಐ): ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದಾರೆ.

ಕೇಂದ್ರ ಸರ್ಕಾರವು ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ತಿದ್ದುಪಡಿ ಮಸೂದೆ–2026 ಅನ್ನು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಂಡಿಸಿ, ಅಂಗೀಕಾರ ಪಡೆದಿತ್ತು.

## ಬಿಜೆಪಿ ಕಚೇರಿ ಹೊರಗೆ ಸ್ಫೋಟ

**ಚಂಡೀಗಢ (ಪಿಟಿಐ):** ಬಿಜೆಪಿ ಪಂಜಾಬ್ ರಾಜ್ಯ ಘಟಕದ ಕಚೇರಿ ಹೊರಗೆ ಬುಧವಾರ ಸಂಜೆ ಸ್ಫೋಟ ಸಂಭವಿಸಿದೆ.

ಯಾವುದೇ ಸಾವು–ನೋವು ವರದಿಯಾಗಿಲ್ಲ. ಸೆಕ್ಟರ್ 37ರಲ್ಲಿನ ಕಟ್ಟಡದ ಹೊರಗೆ ನಿಲ್ಲಿಸಿದ್ದ ಸ್ಕೂಟರ್‌ಗೆ ಹಾನಿಯಾಗಿದೆ. ಎನ್‌ಐಎ ಅಧಿಕಾರಿ ಗಳು ಸ್ಥಳಕ್ಕೆ ಭೇಟಿ ನೀಡಿ ತನಿಖೆ ಕೈಗೊಂಡಿದ್ದಾರೆ. 'ಸಣ್ಣ ನಾಡ ಬಾಂಬ್ ಮಾದರಿಯ ಸಾಧನವನ್ನು ಎಸೆದಿರುವಂತೆ ಮೇಲ್ನೋಟಕ್ಕೆ ತೋರುತ್ತಿದೆ. ಅಪರಾಧ ವಿಭಾಗದ ಅಧಿಕಾರಿಗಳು, ಕೇಂದ್ರ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ' ಎಂದು ಹಿರಿಯ ಎಸ್‌ಪಿ ಕನ್ವರ್‌ದೀಪ್ ಕೌರ್ ತಿಳಿಸಿದ್ದಾರೆ.

## ಕೇಜ್ರಿವಾಲ್‌ಗೆ ನೋಟಿಸ್

**ನವದೆಹಲಿ (ಪಿಟಿಐ):** ಅಬಕಾರಿ ನೀತಿಗೆ ಸಂಬಂಧಿಸಿದ ಎರಡು ಪ್ರಕರಣಗಳಲ್ಲಿ ಖುಲಾಸೆಗೊಳಿಸಿರುವುದನ್ನು ಪ್ರಶ್ನಿಸಿ ಇ.ಡಿ ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯೆ ನೀಡುವಂತೆ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ದೆಹಲಿ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

### ಧರ್ಮಸ್ಥಳದ ಅಸಹಜ ಸಾವುಗಳಿಗೆ ಸಂಬಂಧಿಸಿದಂತೆ ಎಐ ವಿಡಿಯೊ ಬಿತ್ತರಿಸಿದ ಆರೋಪ

## ಸಮೀರ್ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಧರ್ಮಸ್ಥಳದ ಅಸಹಜ ಸಾವುಗಳ ತನಿಖೆಗೆ ಸಂಬಂಧಿಸಿದಂತೆ ಕಾಲ್ಪನಿಕ ವಿಚಾರಗಳನ್ನು ಆಧರಿಸಿ, ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ನೆರವಿನಿಂದ ವಿಡಿಯೊ ಬಿತ್ತರಿಸಿದ ಪ್ರಕರಣದಲ್ಲಿ ಯೂಟ್ಯೂಬರ್ ಎಂ.ಡಿ. ಸಮೀರ್ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆಗೆ ಹೈಕೋರ್ಟ್ ತಡೆ ನೀಡಿದೆ.

'ನನ್ನ ವಿರುದ್ಧ ಧರ್ಮಸ್ಥಳ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಎಂ.ಡಿ.ಸಮೀರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಆಸ್ಮಾ ಕೌಸರ್, 'ಅರ್ಜಿದಾರರು ಇದೇ ಮೊದಲ ಬಾರಿಗೇನೂ ಈ ಕೆಲಸ ಮಾಡುತ್ತಿಲ್ಲ. ಸಾರ್ವಜನಿಕರನ್ನು ದಾರಿ ತಪ್ಪಿಸಿ, ದ್ವೇಷದ ವಾತಾವರಣ ಸೃಷ್ಟಿಸುವ ಕೆಲಸ ಮಾಡುತ್ತಲೇ ಬಂದಿದ್ದಾರೆ. ಅವರ ವಿರುದ್ಧ ಐದು ಪ್ರಕರಣ ದಾಖಲಾಗಿವೆ. ಎಲ್ಲವುಗಳ ತನಿಖೆ ನಡೆಯದರೆ ಸತ್ಯ ಹೊರಬರಲಿದೆ' ಎಂದರು. ಸಮೀರ್ ಪರ ಹೈಕೋರ್ಟ್ ವಕೀಲೆ ಕೆ.ಅಕ್ಷತಾ ಶೆಟ್ಟಿ ವಾದ ಆಲಿಸಿದ ನ್ಯಾಯಪೀಠ ಪ್ರಕರಣದ ತನಿಖೆಗೆ ತಡೆ ನೀಡಿ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಲಾಗಿದೆ.

**ಪ್ರಕರಣ:** ದೊಂಬಿ, ಸಾರ್ವಜನಿಕ ಶಾಂತಿಗೆ ಭಂಗ ತರುವ ಕೃತ್ಯ ಎಸಗಿದ ಆರೋಪದಡಿ ಧರ್ಮಸ್ಥಳ ಪೊಲೀಸರು ಸ್ವಯಂಪ್ರೇರಿತವಾಗಿ 2025ರ ಜುಲೈ 12ರಂದು ಭಾರತೀಯ ನ್ಯಾಯ ಸುರಕ್ಷಾ ಸಂಹಿತೆ–2023ರ (ಬಿಎನ್‌ಎಸ್) ಕಲಂ 240, 192, 353(1)(ಬಿ) ಅಡಿಯಲ್ಲಿ ಸಮೀರ್ ಮತ್ತು ದೂತ ಯೂಟ್ಯೂಬ್ ಚಾನಲ್ ವಿರುದ್ಧ ಪ್ರಕರಣ ದಾಖಲಿಸಿದ್ದರು.

### ಅನಗತ್ಯ ದಾವೆ ಹೂಡಿದ್ದ ಕೇಂದ್ರಕ್ಕೆ 'ಸುಪ್ರೀಂ' ತರಾಟೆ

ನವದೆಹಲಿ (ಪಿಟಿಐ): ಅನಗತ್ಯ ದಾವೆಗಳನ್ನು ಹೂಡುತ್ತಿರುವುದಕ್ಕಾಗಿ ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಬುಧವಾರ ತರಾಟೆ ತೆಗೆದುಕೊಂಡಿದ್ದು, ಇದಕ್ಕಾಗಿ ಕೇಂದ್ರ ಸರ್ಕಾರಕ್ಕೆ ₹25,000 ದಂಡ ವಿಧಿಸಿದೆ.

ಕರ್ತವ್ಯಕ್ಕೆ ಹಾಜರಾಗದ ಆರೋಪ ಹಾಗೂ ಮಹಿಳೆಯೊಬ್ಬರ ಪ್ರೇಮ ವಿವಾಹದಲ್ಲಿ ಪಿತೂರಿ ರೂಪಿಸಿದ್ದ ಆರೋಪದಲ್ಲಿ ಸಿಐಎಸ್‌ಎಫ್ ಅಧಿಕಾರಿಯೊಬ್ಬರನ್ನು ಸೇವೆಯಿಂದ ವಜಾಗೊಳಿಸಲಾಗಿತ್ತು. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಈ ಪ್ರಕರಣದ ವಿಚಾರಣೆ ನಡೆಸಿ, ಅಧಿಕಾರಿಯ ಲೋಪವಿಲ್ಲ ಎಂದು ತಿಳಿದ ಬಳಿಕ ಅವರನ್ನು ವಜಾಗೊಳಿಸಿದ್ದ ಆದೇಶವನ್ನು ರದ್ದುಗೊಳಿಸಿತ್ತು.

ಹೈಕೋರ್ಟ್‌ನ ಈ ಆದೇಶವನ್ನು ಪ್ರಶ್ನಿಸಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿದೆ.

ವಿಚಾರಣೆ ವೇಳೆ ಕೇಂದ್ರ ಸರ್ಕಾರವನ್ನು ಪೀಠ ತರಾಟೆ ತೆಗೆದುಕೊಂಡಿದ್ದು, 'ಹೈಕೋರ್ಟ್‌ನ ವಿಭಾಗೀಯ ಪೀಠದಲ್ಲಿ ಪ್ರಕರಣ ಇತ್ಯರ್ಥವಾದ ಬಳಿಕವೂ ಏಕೆ ಅನಗತ್ಯವಾಗಿ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಲಾಗಿದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಪ್ರಕರಣಗಳು ಇತ್ಯರ್ಥವಾಗದೇ ಬಾಕಿ ಉಳಿದಿವೆ ಎಂದು ನಾವು ಹೇಳುತ್ತೇವೆ. ಆದರೆ, ಅತಿದೊಡ್ಡ ದಾವೆದಾರ ಯಾರು? ಅವರಿಗೆ ದಂಡ ವಿಧಿಸಲೇಬೇಕು' ಎಂದಿತು.

# ರಿಜ್ವಿ 'ಇಂಪ್ಯಾಕ್ಟ್': ಕ್ಯಾಪಿಟಲ್ಸ್‌ಗೆ ಜಯ

## ಕಳಪೆ ಬ್ಯಾಟಿಂಗ್‌ಗೆ ದಂಡ ತೆತ್ತ ಲಖನೌ ಸೂಪರ್ ಜೈಂಟ್ಸ್

• ಲುಂಗಿ, ನಟರಾಜನ್‌ಗೆ ತಲಾ 3, ಕುಲದೀಪ್‌ಗೆ ಎರಡು ವಿಕೆಟ್

**ಲಖನೌ (ಪಿಟಿಐ):** 'ಇಂಪ್ಯಾಕ್ಟ್ ಪ್ಲೇಯರ್' ಆಗಿ ಕಣಕ್ಕಿಳಿದ ಸಮೀರ್ ರಿಜ್ವಿ (ಔಟಾಗದೇ 70; 4x5, 6x4) ಅವರು ದೆಹಲಿ ಕ್ಯಾಪಿಟಲ್ಸ್ ತಂಡಕ್ಕೆ 6 ವಿಕೆಟ್‌ಗಳ ಗೆಲುವಿನ ಕಾಣಿಕೆ ನೀಡಿದರು.

ರಿಷಭ್ ಪಂತ್ ನಾಯಕತ್ವದ ಲಖನೌ ತಂಡವು ಹೋದ ವರ್ಷದಂತೆ ಈ ಬಾರಿಯೂ ತನ್ನ ಕಳಪೆ ಆಟವನ್ನು ಮುಂದುವರಿಸಿತು. ಏಕನಾ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ವೇಗಿಗಳಾದ ಟಿ. ನಟರಾಜನ್ (29ಕ್ಕೆ3), ಲುಂಗಿ ಎನ್‌ಗಿಡಿ (27ಕ್ಕೆ3) ಹಾಗೂ ಸ್ಪಿನ್ನರ್ ಕುಲದೀಪ್ ಯಾದವ್ (31ಕ್ಕೆ2) ಅವರ ದಾಳಿಯ ಎದುರು 18.4 ಓವರ್‌ಗಳಲ್ಲಿ 141 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಅಲ್ಪಮೊತ್ತದ ಗುರಿ ಬೆನ್ನಟ್ಟಿದ ದೆಹಲಿ ತಂಡವು 4.3 ಓವರ್‌ಗಳಲ್ಲಿ 26 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಕನ್ನಡಿಗ ಕೆ.ಎಲ್.ರಾಹುಲ್ ಅವರು ಇನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ನಿರ್ಗಮಿಸಿದರು. ಮೊಹಮ್ಮದ್ ಶಮಿ ಅವರ ಎಸೆತದಲ್ಲಿ ಮೊಹ್ಸಿನ್ ಖಾನ್ ಅವರಿಗೆ ಕ್ಯಾಚ್ ಆಗಿ, ನಿರಾಶೆ ಅನುಭವಿಸಿದರು.

ನಿತೀಶ್ ರಾಣ, ಪಥುಮ್ ನಿಸಾಂಕ ಹಾಗೂ ನಾಯಕ ಅಕ್ಷರ್ ಪಟೇಲ್ ಅವರು ಬಂದಷ್ಟೇ ವೇಗದಲ್ಲಿ ಪೆವಿಲಿಯನ್‌ಗೆ ಹಿಂದಿರುಗಬೇಕಾಯಿತು. ಈ ವೇಳೆ, 22 ವರ್ಷ ವಯಸ್ಸಿನ ರಿಜ್ವಿ ಹಾಗೂ ದಕ್ಷಿಣ ಆಫ್ರಿಕಾದ ವಿಕೆಟ್‌ಕೀಪರ್–ಬ್ಯಾಟರ್ ಟ್ರಿಸ್ಟನ್ ಸ್ಟಬ್ಸ್ (ಔಟಾಗದೇ 39, 32ಎ, 4x3, 6x1) ಅವರು ಅಮೋಘ ಜೊತೆಯಾಟದೊಂದಿಗೆ ತಂಡಕ್ಕೆ ಆಸರೆಯಾದರು.

ಇವರಿಬ್ಬರು ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 119 ರನ್ (76 ಎಸೆತ) ಸೇರಿಸಿದರು. ದೆಹಲಿ ತಂಡವು 17.1 ಓವರ್‌ಗಳಲ್ಲಿ 4 ವಿಕೆಟ್‌ಗೆ 145 ರನ್ ಗಳಿಸಿ ಸಂಭ್ರಮಿಸಿತು. ರಿಜ್ವಿ ಗೆಲುವಿನ ಸಿಕ್ಸರ್ ಸಿಡಿಸಿ, ಪ್ರೇಕ್ಷಕರನ್ನು ರಂಜಿಸಿದರು.

ಇದಕ್ಕೆ ಮೊದಲು, ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ಅಕ್ಷರ್ ಪಟೇಲ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ವೇಗಿಗಳಿಗೆ ನೆರವು ನೀಡುತ್ತಿದ್ದ ಪಿಚ್‌ನ ಲಾಭ ಪಡೆದ ದೆಹಲಿ ತಂಡದ ಬೌಲರ್‌ಗಳು ಲಖನೌ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕುವಲ್ಲಿ ಯಶಸ್ವಿಯಾದರು.

ನಾಯಕ ರಿಷಭ್ ಅವರು ಮಿಚೆಲ್ ಮಾರ್ಷ್ ಜೊತೆಗೆ ಇನಿಂಗ್ಸ್ ಆರಂಭಿಸಿ ಅಚ್ಚರಿ ಮೂಡಿಸಿದರು. ಈ ಹಿಂದೆ ಏಡನ್ ಮರ್ಕರಂ ಮತ್ತು ಮಾರ್ಷ್ ಅವರು ಯಶಸ್ವಿ ಆರಂಭಿಕ ಜೋಡಿಯಾಗಿದ್ದರು. ಆದರೆ ಪಂತ್ 9 ಎಸೆತಗಳಲ್ಲಿ 7 ರನ್ ಗಳಿಸಿ ಔಟಾದರು. ಮುಕೇಶ್ ಕುಮಾರ್ ಹಾಕಿದ ಮೂರನೇ ಓವರ್‌ನ ಕೊನೆ ಎಸೆತವನ್ನು ಮಾರ್ಷ್ ನೇರ ಡ್ರೈವ್ ಮಾಡಿದರು. ಆದರೆ ಚೆಂಡು ಬೌಲರ್ ಮುಕೇಶ್ ಅವರ ಕೈಬೆರಳಿಗೆ ಬಡಿದು ಸ್ಟಂಪ್‌ಗೆ ಅಪ್ಪಳಿಸಿತು. ಆ ಸಂದರ್ಭದಲ್ಲಿ ಅವರು ಕ್ರೀಸ್ ಹೊರಗಿದ್ದ ಕಾರಣ ರನೌಟ್ ಆದರು. ಮಾರ್ಷ್ ಮತ್ತು ಮರ್ಕರಂ (11; 8ಎ) ಬೌಲರ್‌ಗಳಿಗೆ ಬಿಸಿ ಮುಟ್ಟಿಸುವ ಪ್ರಯತ್ನ ಮಾಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ 17 ಎಸೆತಗಳಲ್ಲಿ 29 ರನ್ ಹೊಡೆದರು. ಆದರೆ ಪವರ್‌ಪ್ಲೇ ಮುಗಿಯಲು ಇನ್ನೊಂದು ಎಸೆತ ಬಾಕಿಯಿದ್ದಾಗ ಮರ್ಕರಂ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಸಂಭ್ರಮಿಸಿದರು.

ನಂತರದ ಓವರ್‌ನಲ್ಲಿ ನಟರಾಜನ್ ಅವರು ಆಯುಷ್ ಬದೋನಿ ಅವರನ್ನು ಖಾತೆ ತೆರೆಯಲೂ ಬಿಡದೇ ಔಟ್ ಮಾಡಿದರು. ಸ್ಫೋಟಕ ಶೈಲಿಯ ಬ್ಯಾಟರ್ ನಿಕೊಲಸ್ ಪೂರನ್ (8 ರನ್) ಅವರ ವಿಕೆಟ್ ಕಬಳಿಸುವಲ್ಲಿ ಲುಂಗಿ ಯಶಸ್ವಿಯಾದರು. 28 ಎಸೆತಗಳಲ್ಲಿ 35 ರನ್ ಗಳಿಸಿದ ಮಾರ್ಷ್ ಅವರ ಆಟಕ್ಕೆ ಕುಲದೀಪ್ ಯಾದವ್ ತಡೆಯೊಡ್ಡಿದರು. 71 ರನ್‌ಗಳಿಗೆ ಐದು ವಿಕೆಟ್‌ಗಳು ಪತನವಾದವು. ಈ ಹಂತದಲ್ಲಿ ಕಾಶ್ಮೀರದ ಹುಡುಗ ಅಬ್ದುಲ್ ಸಮದ್ (36; 25ಎ) ಅವರು ಹೋರಾಟ ತೋರಿದ್ದರಿಂದ ತಂಡವು 140 ಗಡಿ ದಾಟಿತು.

ಎದ್ದೂ ಬಿದ್ದೂ ಆಡಿದ ಸಮೀರ್ ರಿಜ್ವಿ ಎಎಫ್‌ಪಿ ಚಿತ್ರ

### ಸ್ಕೋರ್ ಕಾರ್ಡ್

**ಲಖನೌ ಸೂಪರ್ ಜೈಂಟ್ಸ್: 141 (18.4 ಓವರುಗಳಲ್ಲಿ)**

ಮಾರ್ಷ್ ಸಿ ಸ್ಟಬ್ಸ್ ಬಿ ಕುಲದೀಪ್ 35 (28ಎ, 4x2, 6x3)
ಪಂತ್ ರನ್‌ಔಟ್ 7 (9ಎ, 4x1)
ಮರ್ಕರಂ ಬಿ ಪಟೇಲ್ 11 (8ಎ, 4x1, 6x1)
ಬಡೋನಿ ಸಿ ರಾಹುಲ್ ಬಿ ನಟರಾಜನ್ 0 (3ಎ)
ಪೂರನ್ ಬಿ ಎನ್‌ಗಿಡಿ 8 (8ಎ, 4x1)
ಸಮದ್ ಬಿ ಮಿಲ್ಲರ್ ಬಿ ನಟರಾಜನ್ 36 (25ಎ, 4x3, 6x1)
ಮುಕುಲ್ ಸಿ ಮತ್ತು ಬಿ ಕುಲದೀಪ್ 14 (11ಎ, 4x2)
ಶಾಬಾಜ್ ಔಟಾಗದೇ 15 (16ಎ, 4x1)
ಶಮಿ ಸಿ ಕುಲದೀಪ್ ಬಿ ನಟರಾಜನ್ 1 (2ಎ)
ನಾಕಿಯಾ ಸಿ ಸ್ಟಬ್ಸ್ ಬಿ ಎನ್‌ಗಿಡಿ 0 (1ಎ)
ಮೊಹ್ಸಿನ್ ಸಿ ಮುಕೇಶ್ ಬಿ ಎನ್‌ಗಿಡಿ 0 (1ಎ)
**ಇತರ:** 14 (ಬೈ 4, ಲೆಗ್‌ಬೈ 8, ವೈಡ್ 2)
**ವಿಕೆಟ್ ಪತನ:** 1–19 (ರಿಷಭ್ ಪಂತ್, 2.6), 2–48 (ಏಡನ್ ಮರ್ಕರಂ, 5.5), 3–49 (ಆಯುಷ್ ಬಡೋನಿ, 6.3), 4–65 (ನಿಕೋಲಸ್ ಪೂರನ್, 8.5), 5–71 (ಮಿಚೆಲ್ ಮಾರ್ಷ್, 9.3), 6–105 (ಮುಕುಲ್ ಚೌಧರಿ, 13.1), 7–138 (ಅಬ್ದುಲ್ ಸಮದ್, 17.3), 8–140 (ಮೊಹಮ್ಮದ್ ಶಮಿ, 17.6), 9–141 (ಆ್ಯನ್ರಿಚ್ ನಾಕಿಯಾ, 18.3), 10–141 (ಮೊಹ್ಸಿನ್ ಖಾನ್, 18.4)
**ಬೌಲಿಂಗ್:** ಮುಕೇಶ್ ಕುಮಾರ್ 3–0–17–0; ಲುಂಗಿ ಎನ್‌ಗಿಡಿ 3.4–0–27–3; ಅಕ್ಷರ್ ಪಟೇಲ್ 3–0–17–1; ಟಿ.ನಟರಾಜನ್ 4–0–29–3; ಕುಲದೀಪ್ 4–0–31–2; ವಿಪ್ರಜ್ ನಿಗಮ್ 1–0–8–0

**ಡೆಲ್ಲಿ ಕ್ಯಾಪಿಟಲ್ಸ್: 4 ವಿಕೆಟ್‌ಗೆ 145 (17.1 ಓವರುಗಳಲ್ಲಿ)**

ರಾಹುಲ್ ಸಿ ಮೊಹ್ಸಿನ್ ಬಿ ಶಮಿ 0 (1ಎ)
ನಿಸಾಂಕ ಸಿ ಪಂತ್ ಬಿ ಪ್ರಿನ್ಸ್ 1 (5ಎ)
ನಿತೀಶ್ ಸಿ ಸಮದ್ ಬಿ ಮೊಹ್ಸಿನ್ 15 (17ಎ, 4x2, 6x1)
ಸಮೀರ್ ರಿಜ್ವಿ ಔಟಾಗದೇ 70 (47ಎ, 4x5, 6x4)
ಅಕ್ಷರ್ ಬಿ ಪ್ರಿನ್ಸ್ 0 (1ಎ)
ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 39 (32ಎ, 4x3, 6x1)
**ಇತರ:** 20 (ಲೆಗ್‌ಬೈ 4, ವೈಡ್ 16)
**ವಿಕೆಟ್ ಪತನ:** 1–0 (ಕೆ.ಎಲ್.ರಾಹುಲ್, 0.1), 2–21 (ನಿತೀಶ್ ರಾಣಾ, 3.3), 3–25 (ಪಥುಮ್ ನಿಸಾಂಕ, 4.2), 4–26 (ಅಕ್ಷರ್ ಪಟೇಲ್, 4.3)
**ಬೌಲಿಂಗ್:** ಮೊಹಮ್ಮದ್ ಶಮಿ 4–0–28–1, ಪ್ರಿನ್ಸ್ ಯಾದವ್ 3–0–20–2, ಮೊಹ್ಸಿನ್ ಖಾನ್ 4–1–19–1, ಆ್ಯನ್ರಿಚ್ ನಾಕಿಯಾ 4–0–39–0, ಶಾಬಾಜ್ ಅಹ್ಮದ್ 1–0–16–0, ಏಡನ್ ಮರ್ಕರಂ 1–0–13–0, ಅಬ್ದುಲ್ ಸಮದ್ 0.1–0–6–0.
**ಪಂದ್ಯದ ಆಟಗಾರ:** ಸಮೀರ್ ರಿಜ್ವಿ.

## ಗೆಲುವಿಗಾಗಿ ಕೋಲ್ಕತ್ತ ಮತ್ತು ಹೈದರಾಬಾದ್ ತಂಡಗಳ ತವಕ

# ಸನ್‌ರೈಸರ್ಸ್‌ಗೆ ನೈಟ್‌ರೈಡರ್ಸ್ ಸವಾಲು

**ಕೋಲ್ಕತ್ತ (ಪಿಟಿಐ):** ಮೊದಲ ಗೆಲುವಿಗಾಗಿ ತವಕಿಸುತ್ತಿರುವ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಗುರುವಾರ ಈಡನ್ ಗಾರ್ಡನ್ಸ್‌ನಲ್ಲಿ ಮುಖಾಮುಖಿಯಾಗಲಿವೆ.

ಐಪಿಎಲ್ 19ನೇ ಆವೃತ್ತಿಯ ಟೂರ್ನಿಯಲ್ಲಿ ಉಭಯ ತಂಡಗಳೂ ತಮ್ಮ ತಮ್ಮ ಮೊದಲ ಪಂದ್ಯದಲ್ಲಿ ಸೋತಿವೆ. ಎರಡೂ ತಂಡಗಳು ತಮ್ಮ ಬೌಲಿಂಗ್ ವಿಭಾಗದ ದೌರ್ಬಲ್ಯದಿಂದಲೇ ಪರಾಭವಗೊಂಡಿವೆ. ಅದರಿಂದಾಗಿ ಈಗ ಬೌಲರ್‌ಗಳ ಮೇಲೆ ಒತ್ತಡ ಹೆಚ್ಚಿದೆ. ಅದರಲ್ಲೂ ಕೋಲ್ಕತ್ತ ತಂಡದ ಸ್ಪಿನ್ ಜೋಡಿ ವರುಣ್ ಚಕ್ರವರ್ತಿ ಮತ್ತು ಸುನಿಲ್ ನಾರಾಯಣ್ ಅವರ ಮೇಲೆ ನಿರೀಕ್ಷೆಯ ನೋಟ ನೆಟ್ಟಿದೆ.

ಏಕೆಂದರೆ, ಅವರಿಬ್ಬರೂ ಉತ್ತಮವಾಗಿ ಬೌಲಿಂಗ್ ಮಾಡಿದರೆ ತಂಡದ ಗೆಲುವು ಖಚಿತವೆಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಈಚೆಗೆ ಮುಂಬೈ ಇಂಡಿಯನ್ಸ್ ಎದುರು ನಡೆದಿದ್ದ ಮೊದಲ ಪಂದ್ಯದಲ್ಲಿ ಅವರು ಪರಿಣಾಮಕಾರಿಯಾಗಿರಲಿಲ್ಲ. ಆದ್ದರಿಂದಾಗಿ 220 ರನ್‌ಗಳ ಬೃಹತ್ ಮೊತ್ತವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ.

ಈ ಮೈದಾನದಲ್ಲಿ ಕೋಲ್ಕತ್ತ ತಂಡವು 2008ರಿಂದ ಇದುವರೆಗೆ 95 ಪಂದ್ಯಗಳನ್ನು ಆಡಿದೆ. ಈ ಪೈಕಿ 54ರಲ್ಲಿ ಜಯ ಸಾಧಿಸಿದೆ.

ಅಜಿಂಕ್ಯ ರಹಾನೆ ನಾಯಕತ್ವದ ಆತಿಥೇಯ ತಂಡದ ಬ್ಯಾಟಿಂಗ್ ಪಡೆಯು ಉತ್ತಮ ಲಯದಲ್ಲಿದೆ. ಆದರೆ ಬೌಲಿಂಗ್ ವಿಭಾಗದಲ್ಲಿ ಬಹಳಷ್ಟು ಚಿಂತೆಗಳು ಇವೆ. ವೇಗದ ಜೋಡಿ ಹರ್ಷಿತ್ ರಾಣಾ ಮತ್ತು ಆಕಾಶ್ ದೀಪ್ ಗಾಯಗೊಂಡು ಹೊರಬಿದ್ದಿದ್ದಾರೆ. ಮಥೀಶ ಪಥಿರಾಣಾ ಅವರಿಗೆ ಇನ್ನೂ ಶ್ರೀಲಂಕಾ ಕ್ರಿಕೆಟ್‌ನಿಂದ ನಿರಾಕ್ಷೇಪಣಾ ಪತ್ರ ಲಭಿಸಿಲ್ಲ. ₹25.20 ಕೋಟಿ ನೀಡಿ ಖರೀದಿಸಿದ್ದ ಕ್ಯಾಮರಾನ್ ಗ್ರೀನ್ ಅವರು ಸದ್ಯದ ಮಟ್ಟಿಗೆ ಬ್ಯಾಟಿಂಗ್‌ಗೆ ಮಾತ್ರ ಲಭ್ಯವಿದ್ದಾರೆ. ಕ್ರಿಕೆಟ್ ಆಸ್ಟ್ರೇಲಿಯಾದ ಕಾರ್ಯಭಾರ ನಿಯಮದಡಿ ಅವರು ಬೌಲಿಂಗ್ ಮಾಡಲು ಅನುಮತಿ ಇಲ್ಲ.

ಬೌಲಿಂಗ್ ವಿಭಾಗದ ದೌರ್ಬಲ್ಯವು ಮುಂಬೈ ಎದುರಿನ ಸೋಲಿಗೆ ಕಾರಣವಾಗಿತ್ತು. ಆರಂಭಿಕ ಜೋಡಿ ರೋಹಿತ್ ಶರ್ಮಾ ಮತ್ತು ರಿಯಾನ್ ರಿಕೆಲ್ಟನ್ (148 ರನ್ ಜೊತೆಯಾಟ) ಅವರ ಅಬ್ಬರಕ್ಕೆ ಕಡಿವಾಣ ಹಾಕಲು ಸಾಧ್ಯವಾಗಿರಲಿಲ್ಲ.

ಇಶಾನ್ ಕಿಶನ್ ಹಂಗಾಮಿ ನಾಯಕರಾಗಿರುವ ಸನ್‌ರೈಸರ್ಸ್ ತಂಡವು ತನ್ನ ಮೊದಲ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಸೋಲನುಭವಿಸಿತ್ತು. ಆ ಪಂದ್ಯದಲ್ಲಿ ಇಶಾನ್ ಕಿಶನ್ ಅವರು ಅರ್ಧಶತಕ ಹೊಡೆದಿದ್ದ ಕಾರಣ ತಂಡವು 201 ರನ್‌ಗಳ ಗುರಿಯನ್ನು ಆರ್‌ಸಿಬಿಗೆ ನೀಡಿತ್ತು. ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್, ನಿತೀಶ್ ಕುಮಾರ್ ರೆಡ್ಡಿ ಅವರು ವಿಫಲರಾಗಿದ್ದರು. ಅನಿಕೇತ್ ವರ್ಮಾ ಮತ್ತು ಹೆನ್ರಿಚ್ ಕ್ಲಾಸೆನ್ ಅವರು ಉಪಯುಕ್ತ ಕಾಣಿಕೆ ನೀಡಿ ಆಸರೆಯಾಗಿದ್ದರು.

ಆದರೂ ಈ ಮೊತ್ತವನ್ನು ರಕ್ಷಿಸಿಕೊಳ್ಳುವಲ್ಲಿ ಸನ್‌ರೈಸರ್ಸ್ ಬೌಲರ್‌ಗಳು ಎಡವಿದ್ದರು. ವಿರಾಟ್ ಕೊಹ್ಲಿ, ದೇವದತ್ತ ಪಡಿಕ್ಕಲ್ ಮತ್ತು ರಜತ್ ಪಾಟೀದಾರ್ ಅವರ ಅಬ್ಬರಕ್ಕೆ ತಡೆಯೊಡ್ಡುವಲ್ಲಿ ಸಫಲರಾಗಿರಲಿಲ್ಲ. ಸನ್‌ರೈಸರ್ಸ್ ವೇಗಿ ಹರ್ಷಲ್ ಪಟೇಲ್, ಜಯದೇವ್ ಉನದ್ಕತ್ ಸೇರಿದಂತೆ ಎಲ್ಲ ಬೌಲರ್‌ಗಳೂ ಅಷ್ಟೇನೂ ಪರಿಣಾಮಕಾರಿಯಾಗಿರಲಿಲ್ಲ.



ಅಜಿಂಕ್ಯ ರಹಾನೆ

ವರುಣ್ ಚಕ್ರವರ್ತಿ

ಇಶಾನ್ ಕಿಶನ್

**ಇಂದಿನ ಪಂದ್ಯ**

ಕೋಲ್ಕತ್ತ ನೈಟ್ ರೈಡರ್ಸ್ V/s ಸನ್‌ರೈಸರ್ಸ್ ಹೈದರಾಬಾದ್
ರಾತ್ರಿ 7.30
ತಾಣ: ಕೋಲ್ಕತ್ತ
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

# ಆದಿವಾಸಿ ಕ್ರೀಡೆ: ದಶರಥ, ನಾಗಿಣಿಗೆ ಚಿನ್ನ

**ರಾಯಪುರ (ಪಿಟಿಐ):** ರೇಸ್‌ವಾಕ್ ಸ್ಪರ್ಧಿ ದಶರಥ ತಳವಾರ ಮತ್ತು ಮಧ್ಯಮ ಅಂತರದ ಓಟಗಾರ್ತಿ ನಾಗಿಣಿ ಅವರು ಖೇಲೊ ಇಂಡಿಯಾ ಆದಿವಾಸಿ ಕೂಟದ ಎಂಟನೇ ದಿನವಾದ ಬುಧವಾರ ಅಥ್ಲೆಟಿಕ್ಸ್‌ನಲ್ಲಿ ಕರ್ನಾಟಕಕ್ಕೆ ಎರಡು ಚಿನ್ನ ಗೆದ್ದುಕೊಟ್ಟರು.

ಜಗದಾಳಪುರದ ಕ್ರೀಡಾ ಪರಿಸರ್ ಅಥ್ಲೆಟಿಕ್ ಟ್ರ್ಯಾಕ್‌ನಲ್ಲಿ ದಶರಥ ಅವರು ಪುರುಷರ 10 ಕಿ.ಮೀ. ರೇಸ್ ವಾಕ್ ಸ್ಪರ್ಧೆಯನ್ನು 45ನಿ.13.85 ಸೆ.ಗಳಲ್ಲಿ ಪೂರೈಸಿದರೆ, ಕರ್ನಾಟಕದ ಇನ್ನೊಬ್ಬ ಸ್ಪರ್ಧಿ ದರ್ಶನ್ ಬಗಾದಿ 45ನಿ. 25.90 ಸೆ.ಗಳೊಡನೆ ಬೆಳ್ಳಿ ಗೆದ್ದರು. ಗುಜರಾತ್‌ನ ಸಾಗರಭಾಯ್ ಕತಾರ (48:16.09) ಕಂಚಿನ ಪದಕ ಗಳಿಸಿದರು.

ಈ ಸ್ಪರ್ಧೆಯ ನಂತರ ನಾಗಿಣಿ ಮಹಿಳೆಯರ 800 ಮೀ. ಓಟವನ್ನು 2ನಿ.13.80 ಸೆ.ಗಳಲ್ಲಿ ಪೂರೈಸಿ ಸುಲಭವಾಗಿ ಮೊದಲ ಸ್ಥಾನ ಪಡೆದರು. ಇದರೊಂದಿಗೆ ಕರ್ನಾಟಕ ಗೆದ್ದ ಚಿನ್ನದ ಪದಕಗಳ ಸಂಖ್ಯೆ 21ಕ್ಕೆ ಏರಿತು. ಇದರ ಜೊತೆಗೆ ಎಂಟು ಬೆಳ್ಳಿ ಮತ್ತು ಏಳು ಕಂಚಿನ ಪದಕಗಳನ್ನೂ ತನ್ನದಾಗಿಸಿಕೊಂಡಿದ್ದು ಒಟ್ಟು ಪದಕಗಳು 36ಕ್ಕೆ ಏರಿವೆ.



ಪದಕದೊಂದಿಗೆ ಕರ್ನಾಟಕದ ದಶರಥ ತಳವಾರ (ಎಡ) ಮತ್ತು ನಾಗಿಣಿ

ಪುರುಷರ 800 ಮೀ. ಓಟದಲ್ಲಿ ಒಡಿಶಾದ ದಯಾನಿಧಿ ಮುಂಡಾ 1ನಿ.53.33 ಸೆ. ಅವಧಿಯೊಡನೆ ಚಿನ್ನ ಗೆದ್ದರೆ, ಆತಿಥೇಯ ಛತ್ತೀಸಗಢದ ಗಜೇಂದ್ರ ಠಾಕೂರ್ ಅವರು 1ನಿ.53.82 ಸೆ. ಅವಧಿಯೊಡನೆ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

# ಗೆಲುವಿನೊಡನೆ ಅಗ್ರಸ್ಥಾನಕ್ಕೆ ಸಿಂದರೋವ್

**ಪಾಫೋಸ್:** ಪ್ರಶಸ್ತಿಗೆ ನೆಚ್ಚಿನ ಆಟಗಾರನಾದ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರನ್ನು 35 ನಡೆಗಳಲ್ಲಿ ಸೋಲಿಸಿದ ವಿಶ್ವಕಪ್ ಚಾಂಪಿಯನ್ ಜಾವೊಖಿರ್ ಸಿಂದರೋವ್ ಅವರು ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನ ನಂತರ ಅಗ್ರಸ್ಥಾನಕ್ಕೇರಿದರು. 20 ವರ್ಷ ವಯಸ್ಸಿನ ಸಿಂದರೋವ್ 4 ಸುತ್ತುಗಳಿಂದ 3.5 ಪಾಯಿಂಟ್ಸ್ ಕಲೆಹಾಕಿದ್ದಾರೆ.

ಗುರುವಾರ ಟೂರ್ನಿಗೆ ಮೊದಲ ವಿರಾಮದ ದಿನವಾಗಿದೆ. ಓಪನ್ ವಿಭಾಗದಲ್ಲಿ ಮೂರನೇ ಸುತ್ತಿನವರೆಗೆ ಅಗ್ರಸ್ಥಾನ ಹಂಚಿಕೊಂಡಿದ್ದ ಕರುವಾನ (2.5) ಈಗ ಎರಡನೇ ಸ್ಥಾನದಲ್ಲಿದ್ದಾರೆ. ಎಂಟು ಮಂದಿ ಪಾಲ್ಗೊಂಡಿರುವ ಈ ಟೂರ್ನಿಯ ವಿಜೇತ ಆಟಗಾರ, ವರ್ಷದ ಕೊನೆಯಲ್ಲಿ ವಿಶ್ವ ಕಿರೀಟಕ್ಕೆ ನಡೆಯುವ ಸೆಣಸಾಟದಲ್ಲಿ ಹಾಲಿ ವಿಶ್ವ ಚಾಂಪಿಯನ್ ಗುಕೇಶ್ ಅವರನ್ನು ಎದುರಿಸಲಿದ್ದಾರೆ.

ಆರಂಭದ ಸುತ್ತುಗಳ ಹಿನ್ನಡೆ ಬಳಿಕ ಚೇತರಿಸಿಕೊಂಡ ನೆದರ್ಲೆಂಡ್ಸ್‌ನ ಅನಿಶ್ ಗಿರಿ ಇನ್ನೊಂದು ಪಂದ್ಯದಲ್ಲಿ ರಷ್ಯಾದ ಆ್ಯಂಡ್ರಿ ಇಸಿಪೆಂಕೊ (1) ಅವರನ್ನು ಸೋಲಿಸಿದರು. ಇದು ಅನಿಶ್‌ಗೆ ಮೊದಲ ಜಯ. ಅನಿಶ್, ಪ್ರಜ್ಞಾನಂದ ಮತ್ತು ಜರ್ಮನಿಯ ಮಥಾಯಸ್ ಬ್ಲೂಬಾಮ್ ತಲಾ 2 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.



ಸಿಂದರೋವ್

ಮಥಾಯಸ್ ಮತ್ತು ಪ್ರಜ್ಞಾನಂದ ತಮ್ಮ ನಡುವಣ ಪಂದ್ಯವನ್ನು 37 ನಡೆಗಳಲ್ಲಿ ಡ್ರಾ ಮಾಡಿಕೊಂಡರು. ಚೀನಾದ ವೀ ಯಿ (1.5) ಮತ್ತು ಹಿಕಾರು ನಕಾಮುರಾ (1.5) ಅವರೂ ಪಾಯಿಂಟ್ ಹಂಚಿಕೊಂಡರು.

**ದಿವ್ಯಾಗೆ ಸೋಲು:** ಮಹಿಳೆಯರ ವಿಭಾಗದಲ್ಲಿ ವಿಶ್ವಕಪ್ ಚಾಂಪಿಯನ್, ಭಾರತದ ದಿವ್ಯಾ ದೇಶಮುಖ್ (1.5) ನಾಲ್ಕನೇ ಸುತ್ತಿನಲ್ಲಿ ಚೀನಾದ ಝು ಜಿನೆರ್ (2) ಅವರಿಗೆ ಮಣಿದರು. ವೈಶಾಲಿ ರಮೇಶಬಾಬು ಮತ್ತು ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (2) ನಡುವಣ ಪಂದ್ಯ ಡ್ರಾ ಆಯಿತು.

ಉಕ್ರೇನ್‌ನ ಅನ್ನಾ ಮುಝಿಚುಕ್ ಮತ್ತು ಕಜಾಕಸ್ತಾನದ ಬಿಬಿಸಾರ ಅಸುಬ್ಬಯೇವಾ ತಲಾ 2.5 ಪಾಯಿಂಟ್ಸ್ ಸಂಗ್ರಹಿಸಿ ಮುನ್ನಡೆ ಹಂಚಿಕೊಂಡಿದ್ದಾರೆ.

# ಗೋಲುಗಳ ಮಳೆಗರೆದ ಗರುಡ ಹಾಕಿ ಕ್ಲಬ್

**ಬೆಂಗಳೂರು:** ಸುರೇಶ್ ಬಾಬು (4ನೇ, 5ನೇ ಹಾಗೂ 6ನೇ ನಿ.) ಮತ್ತು ಹರಿಹರನ್ (20ನೇ, 21ನೇ ಹಾಗೂ 34ನೇ ನಿ.) ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಗರುಡ ಹಾಕಿ ಕ್ಲಬ್ ತಂಡವು ಕೆಎಸ್‌ಎಚ್‌ಎ 'ಬಿ' ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ 13–0ಯಿಂದ ಬಾಗಲಕೋಟೆ ಜಿಲ್ಲಾ ತಂಡದ ವಿರುದ್ಧ ಏಕಪಕ್ಷೀಯ ಗೆಲುವು ಸಾಧಿಸಿತು.

ಶಾಂತಿನಗರದ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗರುಡ ಕ್ಲಬ್ ತಂಡದ ಆಟಗಾರರು ಆರಂಭದಿಂದಲೇ ಗೋಲುಗಳ ಮಳೆಗರೆದರು. ಇನ್ನೊಂದು ಪಂದ್ಯದಲ್ಲಿ ಆ್ಯಷ್ಕೊ ಹಾಕಿ ಕ್ಲಬ್ ತಂಡವು 3–1ರಿಂದ ಬೆಂಗಳೂರಿನ ಧ್ಯಾನಚಂದ್ ಹಾಕಿ ಕ್ಲಬ್ ತಂಡವನ್ನು ಮಣಿಸಿತು. ಆ್ಯಷ್ಕೊ ಕ್ಲಬ್ ತಂಡದ ಗೋವಿಂದ (6ನೇ ನಿ.), ಅಪ್ಪಚ್ಚು (32ನೇ ನಿ.) ಮತ್ತು ನಯೀಮುದ್ದೀನ್ (38ನೇ ನಿ.) ತಲಾ ಒಂದು ಗೋಲು ಹೊಡೆದರು.

### ಸಂಕ್ಷಿಪ್ತ ಸುದ್ದಿ

## ಬಿಎಫ್‌ಸಿ ಯುವ ಅಭಿವೃದ್ಧಿ ವಿಭಾಗಕ್ಕೆ ಮುಖ್ಯಸ್ಥರಾಗಿ ಮೆದೀರಾ

**ಬೆಂಗಳೂರು (ಪಿಟಿಐ):** ಭಾರತ ಸೀನಿಯರ್ ಫುಟ್‌ಬಾಲ್ ತಂಡದ ಮಾಜಿ ಮುಖ್ಯ ಕೋಚ್ ಸಾವಿಯೊ ಮೆದೀರಾ ಅವರನ್ನು ಬೆಂಗಳೂರು ಫುಟ್‌ಬಾಲ್ ಕ್ಲಬ್ ಬುಧವಾರ ಕ್ಲಬ್‌ನ ಯುವ ಅಭಿವೃದ್ಧಿ ಮುಖ್ಯಸ್ಥರನ್ನಾಗಿ ನೇಮಕ ಮಾಡಿದೆ.



ಅವರ ನೇಮಕವು ಬ್ಲೂಸ್ (ಬಿಎಫ್‌ಸಿ) ಸೀನಿಯರ್ ತಂಡಕ್ಕೆ ತಳಮಟ್ಟದಿಂದ ಪ್ರತಿಭಾನ್ವಿತ ಆಟಗಾರರರನ್ನು ಸಜ್ಜುಗೊಳಿಸುವ ಪ್ರಯತ್ನದ ಭಾಗವಾಗಿದೆ. ಎರಡು ದಶಕಗಳ ಅಂತರ ರಾಷ್ಟ್ರೀಯ ಕೋಚಿಂಗ್ ಅನುಭವ ಹೊಂದಿರುವ ಸಾವಿಯೊ ಈ ಹಿಂದೆ ರಾಷ್ಟ್ರೀಯ ತಂಡಕ್ಕೆ ಸಹಾಯಕ ಕೋಚ್ ಮತ್ತು ಮುಖ್ಯ ಕೋಚ್ ಆಗಿ ಕೆಲಸ ಮಾಡಿದ್ದಾರೆ. 2011ರಲ್ಲಿ ಸ್ಯಾಫ್ ಚಾಂಪಿಯನ್‌ಷಿಪ್, ನೆಹರೂಕಪ್, ಎಎಫ್‌ಸಿ ಚಾಲೆಂಜ್ ಕಪ್ ಗೆದ್ದ ತಂಡಕ್ಕೆ ಮಾರ್ಗದರ್ಶನ ಮಾಡಿದ್ದರು.

## ಟಿ20 ಸರಣಿ: ಜುಲೈನಲ್ಲಿ ಭಾರತ ತಂಡದ ಜಿಂಬಾಬ್ವೆ ಪ್ರವಾಸ

**ನವದೆಹಲಿ (ಎಎಫ್‌ಪಿ):** ಭಾರತ ತಂಡವು, ಮೂರು ಪಂದ್ಯಗಳ ಟಿ20 ಸರಣಿಯನ್ನು ಆಡಲು ಜುಲೈ ತಿಂಗಳಲ್ಲಿ ಜಿಂಬಾಬ್ವೆ ಪ್ರವಾಸ ಕೈಗೊಳ್ಳಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಬುಧವಾರ ಹೇಳಿಕೆಯಲ್ಲಿ ತಿಳಿಸಿದೆ. ಇದು ಟಿ20 ವಿಶ್ವಕಪ್ ಗೆದ್ದ ನಂತರ ಭಾರತ ಆಡಲಿರುವ ಮೊದಲ ಸರಣಿ.

ಹರಾರೆ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣ ದಲ್ಲಿ ಜುಲೈ 23, 25 ಮತ್ತು 26ರಂದು ಪಂದ್ಯಗಳು ನಡೆಯಲಿದೆ. ಇದು ಎರಡು ದ್ವಿಪಕ್ಷೀಯ ಸರಣಿಗಳ ಪೈಕಿ ಮೊದಲನೆಯದಾಗಿದೆ.

ಜಿಂಬಾಬ್ವೆ ತಂಡವು ಮುಂದಿನ ವರ್ಷದ ಆರಂಭದಲ್ಲಿ ಭಾರತ ಪ್ರವಾಸ ಕೈಗೊಳ್ಳಲಿದ್ದು, ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ಈ ಪಂದ್ಯಗಳು ಕೋಲ್ಕತ್ತ, ಹೈದರಾಬಾದ್ ಮತ್ತು ಮುಂಬೈನಲ್ಲಿ ಕ್ರಮವಾಗಿ ಜನವರಿ 3, 6 ಮತ್ತು 9ರಂದು ನಡೆಯಲಿದೆ. ಭಾರತ 2024ರಲ್ಲಿ ಕೊನೆಯ ಬಾರಿ ಜಿಂಬಾಬ್ವೆ ಪ್ರವಾಸ ಕೈಗೊಂಡಿತ್ತು.

## ಮಾಜಿ ಆಟಗಾರ್ತಿಯರಿಗೆ ಪಿಂಚಣಿ

**ಬೆಂಗಳೂರು:** ರಾಷ್ಟ್ರೀಯ ಸೀನಿಯರ್ ಚಾಂಪಿಯನ್‌ಷಿಪ್‌ಗಳಲ್ಲಿ ಆಡಿದ ಕರ್ನಾಟಕ ಮಹಿಳಾ ತಂಡವನ್ನು ಪ್ರತಿನಿಧಿಸಿರುವ ಮಾಜಿ ಆಟಗಾರ್ತಿಯರಿಗೆ ಮಾಸಿಕ ಪಿಂಚಣಿ ಯೋಜನೆಯನ್ನು ವಿಸ್ತರಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ನಿರ್ಧರಿಸಿದೆ. ಬಿಸಿಸಿಐನಿಂದ ಪಿಂಚಣಿ ಮಾದರಿಯ ಸೌಲಭ್ಯಗಳನ್ನು ಪಡೆಯದ ಹಾಗೂ 55 ವರ್ಷ ವಯಸ್ಸಿನ ಆಟಗಾರ್ತಿಯರು ಪಿಂಚಣಿ ಪಡೆಯಲು ಅರ್ಹರಾಗಿದ್ದಾರೆ.

'ಮಹಿಳಾ ಕ್ರಿಕೆಟ್ ಕ್ಷೇತ್ರಕ್ಕೆ ಉಪಯುಕ್ತ ಕಾಣಿಕೆ ನೀಡಿರುವ ಆಟಗಾರ್ತಿಯರನ್ನು ಗೌರವಿಸಲು ಈ ಯೋಜನೆ ವಿಸ್ತರಿಸಲಾಗುತ್ತಿದೆ. ಅರ್ಹ ಅಭ್ಯರ್ಥಿಗಳು ತಮ್ಮ ದಾಖಲಾತಿ ಪತ್ರಗಳು, ಕ್ರಿಕೆಟ್ ಆಡಿದ ವಿವರಗಳನ್ನು ಕೆಎಸ್‌ಸಿಎಗೆ ಸಲ್ಲಿಸಬೇಕು' ಎಂದು ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ತಿಳಿಸಿದ್ದಾರೆ.

## ಸೋನಿ ಸ್ಪೋರ್ಟ್ಸ್ ಕನ್ನಡ ವಾಹಿನಿ ಆರಂಭ

**ಬೆಂಗಳೂರು:** ಸೋನಿ ಸ್ಪೋರ್ಟ್ಸ್ ಕನ್ನಡ ವಾಹಿನಿಯು ಬುಧವಾರ ಆರಂಭವಾಯಿತು. ಹೋದ ವರ್ಷ ಸೋನಿ ನೆಟ್‌ವರ್ಕ್ ತಮಿಳು ಮತ್ತು ತೆಲುಗು ಕ್ರೀಡಾ ವಾಹಿನಿಗಳನ್ನು ಆರಂಭಿಸಿತ್ತು. ಇದೀಗ ಕರ್ನಾಟಕಕ್ಕೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿದೆ.

ಭಾರತ ಪುರುಷರ ತಂಡದ ಇಂಗ್ಲೆಂಡ್, ಶ್ರೀಲಂಕಾ ಮತ್ತು ನ್ಯೂಜಿಲೆಂಡ್ ಪ್ರವಾಸದ ಸರಣಿಗಳನ್ನು ಸರಣಿಗಳನ್ನು ನೇರಪ್ರಸಾರವನ್ನು ಈ ವಾಹಿನಿ ಮಾಡಲಿದೆ. ಅಲ್ಲದೇ ಮಹಿಳೆಯರ ಟಿ20 ಕ್ರಿಕೆಟ್ ಏಷ್ಯಾ ಕಪ್ ಪ್ರಸಾರ ಮಾಡಲಿದೆ. ಯುಇಎಫ್‌ಎ ಚಾಂಪಿಯನ್ಸ್ ಲೀಗ್, ಎಫ್.ಎ. ಕಪ್, ಇಂಡಿಯನ್ ಸೂಪರ್ ಲೀಗ್ ಹಾಗೂ ಯುಎಫ್‌ಸಿ ಟೂರ್ನಿಗಳನ್ನು ಕನ್ನಡ ಭಾಷೆಯಲ್ಲಿ ಪ್ರಸ್ತುತಪಡಿಸಲಾಗುತ್ತದೆ ಎಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

## 87ನೇ ಸಬ್ ಜೂನಿಯರ್ ಟೇಬಲ್ ಟೆನಿಸ್

# ರಾಜ್ಯ ಬಾಲಕಿಯರಿಗೆ 4 ಕಂಚು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಬಾಲಕಿಯರು ಗುಜರಾತ್‌ನ ಗಾಂಧಿಗ್ರಾಮದಲ್ಲಿ ನಡೆಯುತ್ತಿರುವ 87ನೇ ಸಬ್ ಜೂನಿಯರ್ ಮತ್ತು ಕೆಡೆಟ್ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ 4 ಕಂಚಿನ ಪದಕಗಳನ್ನು ಗೆದ್ದರು. ಉದಯೋನ್ಮುಖ ಆಟಗಾರ್ತಿ ತನಿಷ್ಕಾ ಕಪಿಲ್ ಕಾಲಭೈರವ ಅವರು ಕಂಚು ಟ್ರಿಪಲ್ ಸಾಧಿಸಿದರು.

ರಾಜ್ಯ ಬಾಲಕಿಯರ ತಂಡವು 15 ವರ್ಷದೊಳಗಿನವರ ಟೀಮ್ ವಿಭಾಗದ ಸೆಮಿಫೈನಲ್‌ನಲ್ಲಿ 1–3ರಿಂದ ಮಹಾರಾಷ್ಟ್ರ ಎದುರು ಪರಾಭವಗೊಂಡಿತು. ಸ್ಪರ್ಧೆಯ ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಕರ್ನಾಟಕದ ರಾಶಿ ವಿ. ರಾವ್ ಅವರು 0–3ರಿಂದ ನೈಶಾ ಎದುರು ಸೋತರು. ಸಿಂಗಲ್ಸ್ ಎರಡನೇ ಪಂದ್ಯದಲ್ಲಿ ರಾಜ್ಯದ ತನಿಷ್ಕಾ ಕಪಿಲ್ ಕಾಲಭೈರವ ಅವರು 3–0ಯಿಂದ ಮಿರಾ ವಿರುದ್ಧ ಗೆದ್ದು ಸಮಬಲ ತಂದುಕೊಟ್ಟರು. ಡಬಲ್ಸ್ ಪಂದ್ಯದಲ್ಲಿ ರಾಶಿ ಮತ್ತು ತನಿಷ್ಕಾ ಜೋಡಿಯು 0–3ರಿಂದ ನೈಶಾ–ಮಿರಾ ಜೋಡಿಗೆ ಮಣಿಯಿತು. ರಿವರ್ಸ್ ಸಿಂಗಲ್ಸ್‌ನಲ್ಲಿ ತನಿಷ್ಕಾ 1–3ರಿಂದ ನೈಶಾ ಎದುರು ನಿರಾಶೆ ಅನುಭವಿಸಿದರು.

ತನಿಷ್ಕಾ ಅವರು 15 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಕಂಚು ಜಯಿಸಿ, ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಪದಕ ತಮ್ಮದಾಗಿಸಿಕೊಂಡರು. ನಾಲ್ಕರ ಘಟ್ಟದಲ್ಲಿ ಅವರು 0–3ರಿಂದ (11–9, 11–6, 11–5) ಬಂಗಾಳದ ಅಂಕೊಲಿಕಾ ಚಕ್ರವರ್ತಿ ಎದುರು ನೇರ ಸೆಟ್‌ಗಳಲ್ಲಿ ಮಣಿದರು.

15 ವರ್ಷದೊಳಗಿನ ಬಾಲಕಿಯರ ಡಬಲ್ಸ್‌ನಲ್ಲಿ ರಾಶಿ ಮತ್ತು ತನಿಷ್ಕಾ ಅವರು ಸೆಮಿಫೈನಲ್‌ನಲ್ಲಿ ಪರಾಭವಗೊಂಡರು. ಬಂಗಾಳದ ಅಂಕೊಲಿಕಾ–ಅಹೋನಾ ರಾಯ್ ಅವರು 3–0ಯಿಂದ ಕರ್ನಾಟಕದ ಜೋಡಿಯನ್ನು ಹಿಮ್ಮೆಟ್ಟಿಸಿದರು.

13 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ರಾಜ್ಯದ ಸಾಕ್ಷ್ಯಾ ಸಂತೋಷ್ ಅವರು ತೀವ್ರ ಹೋರಾಟ ತೋರಿದರಾದರೂ, 2–3ರಿಂದ ಆದ್ಯಾ ಎದುರು ಪರಾಭವಗೊಂಡರು. ಹೀಗಾಗಿ, ಸಾಕ್ಷ್ಯಾ ಕಂಚಿಗೆ ಸಮಾಧಾನಪಟ್ಟುಕೊಳ್ಳಬೇಕಾಯಿತು.

15 ವರ್ಷದೊಳಗಿನವರ ಟೀಮ್ ವಿಭಾಗದಲ್ಲಿ ಕಂಚು ಜಯಿಸಿದ ಕರ್ನಾಟಕ ಬಾಲಕಿಯರ ತಂಡ. (ಎಡದಿಂದ) ಕೋಚ್ ಸಂಗಮ್ ಬೈಲೂರ್, ತನಿಷ್ಕಾ ಕಪಿಲ್ ಕಾಲಭೈರವ, ರಾಶಿ ವಿ.ರಾವ್, ಮಿಹಿಕಾ ಹಾಗೂ ಕ್ರಿಷಾ

# ಕರ್ನಾಟಕ ತಂಡಕ್ಕೆ ಮರಳುವವರಿಗೆ ಕೂಲಿಂಗ್ ಆಫ್ ನಿಯಮ

• ಸಿಡ್ನಿ ಕಿರಣ್

**ಬೆಂಗಳೂರು:** ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಹೊಸ ಋತುವು ಇದೇ 15ರಿಂದ ಆರಂಭವಾಗಲಿದೆ. ಇದರಲ್ಲಿ ಎರಡು ಪ್ರಮುಖ ಬದಲಾವಣೆಗಳನ್ನು ತರುತ್ತಿದೆ.

ಮೊದಲನೆಯದಾಗಿ; ಪರರಾಜ್ಯಗಳ ತಂಡಗಳಲ್ಲಿ ಆಡಲು ಕೆಎಸ್‌ಸಿಎಯಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆದಿರುವ ಆಟಗಾರರು ಮರಳಿ ಕರ್ನಾಟಕ ತಂಡಕ್ಕೆ ಬರಬೇಕಾದರೆ ಒಂದು ಋತುವಿನಲ್ಲಿ ಕೂಲಿಂಗ್ ಆಫ್ (ಬಿಡುವು) ನಿಯಮ ಪಾಲಿಸಬೇಕು. ಎರಡನೆಯ ನಿಯಮವೆಂದರೆ; ಕೆಎಸ್‌ಸಿಎ ಸೀಮಿತ ಓವರ್‌ಗಳ ಕ್ರಿಕೆಟ್ ಟೂರ್ನಿಗಳಲ್ಲಿ ಆಡುವ ತಂಡಗಳಿಗೆ ಇನ್ನು ಮುಂದೆ ಬಣ್ಣದ ಸಮವಸ್ತ್ರ ಧರಿಸುವುದು ಕಡ್ಡಾಯವಾಗಲಿದೆ.

'ಇತರ ರಾಜ್ಯಗಳನ್ನು ಪ್ರತಿನಿಧಿಸಲು ಎನ್‌ಒಸಿ ಪಡೆದ ನಂತರ ಕರ್ನಾಟಕಕ್ಕೆ ಮರಳಲು ಬಯಸುವ ಆಟಗಾರರಿಗೆ ಒಂದು ಋತುವಿನ ಕೂಲಿಂಗ್-ಆಫ್ ಅವಧಿ ಪಾಲಿಸಬೇಕೆಂಬ ದೀರ್ಘಕಾಲದಿಂದ ನಿಯಮ ಇದೆ. ಆದರೆ ಅದನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿಲ್ಲ. ಈ ಋತುವಿನಿಂದ ನಾವು ಅದನ್ನು ಕಟ್ಟುನಿಟ್ಟಾಗಿ ಜಾರಿ ಮಾಡುತ್ತೇವೆ' ಎಂದು ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮತ್ತೊಂದು ಪ್ರಮುಖ ನಿಯಮವೆಂದರೆ, ಶ್ವೇತವರ್ಣದ ಚೆಂಡಿನ ಕ್ರಿಕೆಟ್ ಟೂರ್ನಿಗಳಲ್ಲಿ ಆರಂಭದಿಂದಲೂ ಬಣ್ಣದ ಉಡುಪುಗಳೊಂದಿಗೆ ಆಡಬೇಕು. ಇದು ನಾಲ್ಕು ಮತ್ತು ಐದನೇ ಡಿವಿಷನ್‌ಗಳಿಗೂ ಅನ್ವಯಿಸುತ್ತದೆ' ಎಂದು ಮೆನನ್ ಹೇಳಿದರು.

ಕೆಎಸ್‌ಸಿಎ ಋತುವಿನ ಆರಂಭದಲ್ಲಿ ನಡೆಯುವ ಕಸ್ತೂರಿರಂಗನ್ ಸ್ಮಾರಕ ಟಿ20 ಟೂರ್ನಿಯಲ್ಲಿ ಭಾಗವಹಿಸುವ ಕ್ಲಬ್ ತಂಡಗಳ ಡ್ರಾ ಸಮಾರಂಭ ಸೋಮವಾರ ನಡೆಯಿತು. ಸಂಸ್ಥೆಯ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಇದರ ನೇರಪ್ರಸಾರ ಮಾಡಲಾಯಿತು. ಕ್ಲಬ್‌ಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಹಾಜರಿದ್ದರು.

'ಪಂದ್ಯಗಳು ಮತ್ತು ಸ್ಥಳಗಳ ಅಂತಿಮಗೊಳಿಸುವಿಕೆಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ನಾವು ಎಲ್ಲಾ ಟೂರ್ನಿಗಳಲ್ಲಿಯೂ ಇದೇ ನಿಯಮ ಪಾಲಿಸುತ್ತೇವೆ. ಕೆಲವು ತಂಡಗಳಿಗೆ ಮಾತ್ರ ಕೆಲವು ನಿರ್ದಿಷ್ಟ ಮೈದಾನಗಳು ಆಡಲು ಸಿಗುತ್ತವೆ ಎಂಬ ಮಾತುಗಳು ಕೇಳಿಬಂದಿವೆ. ಆದ್ದರಿಂದ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲು ಒಂದು ದಾರಿ ಕಂಡುಕೊಂಡಿದ್ದೇವೆ. ಎ, ಬಿ, ಸಿ ಮತ್ತು ಡಿ ಎಂದು ತಂಡಗಳನ್ನು ವಿಂಗಡಿಸಲಾಗಿದೆ. ಇಲ್ಲಿ ಯಾವುದೇ ತಂಡದ ನಿಜ ಹೆಸರು ಬಹಿರಂಗ ಮಾಡಿಲ್ಲ. ಆದ್ದರಿಂದ ಎ,ಬಿ,ಸಿ, ಡಿ ಸಂಕೇತಗಳನ್ನಷ್ಟೇ ಮಾಡಲಾಗಿದ್ದು, ಡ್ರಾ ಮಾಡಿ ಮೈದಾನಗಳನ್ನು ಹಂಚಿಕೆ ಮಾಡಲಾಗಿದೆ. ಇದು ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಡ್ರಾ ಹೋಲುತ್ತದೆ. ಪಕ್ಷಪಾತ ತಡೆಯುವ ನಿಟ್ಟಿನಲ್ಲಿ ಇದು ಪ್ರಮುಖ ಹೆಜ್ಜೆ' ಎಂದು ಮೆನನ್ ಹೇಳಿದರು.

## ಬೋಸ್ನಿಯಾ ಎದುರು ಸೋಲು • 4 ಬಾರಿಯ ಚಾಂಪಿಯನ್ ತಂಡಕ್ಕೆ ನಿರಾಸೆ

# ವಿಶ್ವಕಪ್‌ಗೆ ಅರ್ಹತೆ: ಇಟಲಿ ಮತ್ತೆ ವಿಫಲ

**ರೋಮ್ (ಎಪಿ):** ಒಂದು ಕಾಲದಲ್ಲಿ ಫುಟ್‌ಬಾಲ್‌ನಲ್ಲಿ ಹೆಮ್ಮೆಪಡುವಂಥ ಸಾಧನೆ ಮಾಡುತ್ತಿದ್ದ ತಂಡಗಳಲ್ಲಿ ಇಟಲಿ ಒಂದೆನಿಸಿತ್ತು. ಆದರೆ ಈಗ ಸತತ ಮೂರನೇ ಬಾರಿ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆಯಲು ವಿಫಲವಾಗಿದೆ. ಇಟಲಿಯ ಮಾಧ್ಯಮಗಳು ಇದನ್ನು 'ಥರ್ಡ್ ಅಪೊಕ್ಯಾಲಿಪ್ಸ್' (ದುರಂತ ಅಥವಾ ವಿನಾಶ) ಎಂದು ಬಣ್ಣಿಸಿವೆ.

ಮಂಗಳವಾರ ನಡೆದ ಅರ್ಹತಾ ಪ್ಲೇ ಆಫ್‌ನಲ್ಲಿ ಈ ತಂಡವು 66ನೇ ಕ್ರಮಾಂಕದ ಬೋಸ್ನಿಯಾ ಮತ್ತು ಹರ್ಜೆಗೋವಿನಾ ತಂಡದ ಎದುರು ಪೆನಾಲ್ಟಿ ಶೂಟೌಟ್‌ನಲ್ಲಿ ಸೋಲನುಭವಿಸಿ ವಿಶ್ವಕಪ್ ಆಡುವ ಅವಕಾಶ ಕಳೆದುಕೊಂಡಿತು.

2006ರಲ್ಲಿ ಕೊನೆಯ ಬಾರಿ ಸೇರಿದಂತೆ ಇಟಲಿ ತಂಡ ನಾಲ್ಕು ಬಾರಿ ವಿಶ್ವ ಚಾಂಪಿಯನ್ ಆಗಿದೆ. ಅದಕ್ಕೆ ಮೊದಲು 1934, 1938, 1982ರಲ್ಲಿ ಚಾಂಪಿಯನ್ ಆಗಿತ್ತು. ಎರಡು ಬಾರಿ ಫೈನಲ್‌ನಲ್ಲಿ ಸೋತಿತ್ತು.

2018ರಲ್ಲಿ ಸ್ವೀಡನ್ ಎದುರು ಇದೇ ಹಂತದಲ್ಲಿ ಸೋತಿತ್ತು. 2022ರಲ್ಲಿ ಹೊಸ ತಂಡ ನಾರ್ತ್ ಮ್ಯಾಸಿಡೋನಿಯಾ ಎದುರು ನಿರ್ಣಾಯಕ ಪಂದ್ಯದಲ್ಲಿ ಪರಾಭವಗೊಂಡಿತ್ತು. ಈಗ ಬೋಸ್ನಿಯಾ ಎದುರು ಮುಖಭಂಗ ಅನುಭವಿಸಿದೆ.

ಗಝೆಟಾ ಡೆಲ್ಲೊ ಸ್ಪೋರ್ಟ್ಸ್ ಹೆಸರಿನ ಪತ್ರಿಕೆ ಮುಖಪುಟದ ಸಂಪಾದಕೀಯದಲ್ಲಿ ಈ ಹಿನ್ನಡೆಯನ್ನು 'ಥರ್ಡ್ ಅಪೊಕ್ಯಾಲಿಪ್ಸ್' ಎಂದು ಬರೆದಿದೆ.

ಇಟಲಿಯ ಫುಟ್‌ಬಾಲ್ ಪ್ರಾಬಲ್ಯ ಕಡಿಮೆಯಾಗುತ್ತಿದೆ. 2010ರಲ್ಲಿ ಇಂಟರ್ ಮಿಲಾನ್ ತಂಡವು ಚಾಂಪಿಯನ್ಸ್ ಲೀಗ್ ಗೆದ್ದ ಇಟಲಿಯ ಕೊನೆಯ ತಂಡವಾಗಿದೆ. ಯುರೋಪ್‌ನ ಸ್ಪರ್ಧೆಗಳಲ್ಲಿ ಇಟಲಿಯ ನಾಲ್ಕೂ ಕ್ಲಬ್‌ಗಳು ಕ್ವಾರ್ಟರ್‌ಫೈನಲ್ ಮೊದಲೇ ಹೊರಬಿದ್ದಿದ್ದವು. ಅಭಿಮಾನಿಗಳು ಆಕ್ರೋಶಗೊಂಡಿದ್ದಾರೆ. ರಾಜಕೀಯ ಧುರೀಣರು ಇಟಲಿಯ ಕ್ರೀಡಾ ಸಚಿವೆ ಆಂಡ್ರಿಯಾ ಅಬೋಡಿ ಅವರು ತಕ್ಷಣ ವಿವರಣೆ ನೀಡಬೇಕೆಂದು ಆಗ್ರಹಿಸಿದ್ದಾರೆ. ಇದೇ ವೇಳೆ ಇಟಲಿ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಗ್ರೇಬಿಯೇಲ್ ಗ್ರಾವಿನಾ ಅವರಿಗೆ ಆಂಡ್ರಿಯಾ ಸೂಚಿಸಿದ್ದಾರೆ.

'ನಮ್ಮ ತಂಡ ಮೂರನೇ ಬಾರಿ ಹೊರಬಿದ್ದಿರುವುದು ದುರದೃಷ್ಟವಶಾತ್ ಏಪ್ರಿಲ್ ಫೂಲ್ ಜೋಕ್ ಅಗಿಲ್ಲ' ಎಂದು ಮಾಜಿ ಪ್ರಧಾನಿ ಮ್ಯಾಟಿಯೊ ರೆಂಝಿ ಹೇಳಿದ್ದಾರೆ. 'ಇಟಲಿಯ ಫುಟ್‌ಬಾಲ್ ದುರ್ಬಲವಾಗಿದೆ. ನಮ್ಮ ದೇಶದಲ್ಲಿ ಅದು ಮನರಂಜನೆ ಮಾತ್ರವಾಗಿರಲಿಲ್ಲ; ಅನು ನಮ್ಮ ಸಂಸ್ಕೃತಿ ಮತ್ತು ರಾಷ್ಟ್ರೀಯ ಅಸ್ಮಿತೆಯ ಭಾಗವಾಗಿತ್ತು' ಎಂದಿದ್ದಾರೆ.

ಫಿಫಾ ವಿಶ್ವಕಪ್ ಟೂರ್ನಿಯು ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ಜಂಟಿ ಆಶ್ರಯದಲ್ಲಿ ಜೂನ್ 11ರಿಂದ ಜುಲೈ 19ರ ವರೆಗೆ ನಡೆಯಲಿದೆ. ದಾಖಲೆಯ 48 ತಂಡಗಳು ಈ ಬಾರಿ ಭಾಗವಹಿಸಲಿವೆ.

### ಫಿಫಾ ವಿಶ್ವಕಪ್ ಗುಂಪುಗಳು

**ಎ ಗುಂಪು:** ಮೆಕ್ಸಿಕೊ, ಝೆಕ್ ರಿಪಬ್ಲಿಕ್, ದಕ್ಷಿಣ ಆಫ್ರಿಕಾ, ದಕ್ಷಿಣ ಕೊರಿಯಾ
**ಬಿ ಗುಂಪು:** ಕೆನಡಾ, ಬೋಸ್ನಿಯಾ-ಹರ್ಜೆಗೋವಿನಾ, ಕತಾರ್, ಸ್ವಿಟ್ಜರ್ಲೆಂಡ್
**ಸಿ ಗುಂಪು:** ಬ್ರೆಜಿಲ್, ಹೈಟಿ, ಮೊರಕ್ಕೊ, ಸ್ಕಾಟ್ಲೆಂಡ್
**ಡಿ ಗುಂಪು:** ಆಸ್ಟ್ರೇಲಿಯಾ, ಪರಗ್ವೆ, ಟರ್ಕಿ, ಅಮೆರಿಕ
**ಇ ಗುಂಪು:** ಕುರಾಕೊವಾ, ಇಕ್ವೆಡಾರ್, ಜರ್ಮನಿ, ಐವರಿ ಕೋಸ್ಟ್
**ಎಫ್ ಗುಂಪು:** ನೆದರ್ಲೆಂಡ್ಸ್, ಜಪಾನ್, ಸ್ವೀಡನ್, ಟುನಿಷಿಯಾ
**ಜಿ ಗುಂಪು:** ಬೆಲ್ಜಿಯಂ, ಈಜಿಪ್ಟ್, ಇರಾನ್, ನ್ಯೂಜಿಲೆಂಡ್
**ಎಚ್ ಗುಂಪು:** ಕೇಪ್ ವರ್ಡೆ, ಸೌದಿ ಅರೇಬಿಯಾ, ಸ್ಪೇನ್, ಉರುಗ್ವೆ
**ಐ ಗುಂಪು:** ಫ್ರಾನ್ಸ್, ನಾರ್ವೆ, ಸೆನೆಗಲ್, ಇರಾಕ್
**ಜೆ ಗುಂಪು:** ಅಲ್ಜೀರಿಯಾ, ಅರ್ಜೆಂಟಿನಾ, ಆಸ್ಟ್ರೀಯಾ, ಜೋರ್ಡಾನ್
**ಕೆ ಗುಂಪು:** ಕೊಲಂಬಿಯಾ, ಕಾಂಗೊ, ಪೋರ್ಚುಗಲ್, ಉಜ್ಬೇಕಿಸ್ತಾನ
**ಎಲ್ ಗುಂಪು:** ಕ್ರೊವೇಷ್ಯಾ, ಇಂಗ್ಲೆಂಡ್, ಘಾನಾ, ಪನಾಮಾ